ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದಗಳೊಂದಿಗೆ

# ಕಠೋಪನಿಷತ್ತು

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್



ಕನ್ನಡ ಅನುವಾದ :

ಕೆ. ಶೋಭಾಲತಾ ಮಲ್ಲಿಕಾರ್ಜುನ

ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದದೊಂದಿಗೆ

# ಕಠೋಪನಿಷತ್ತು

ಮೂಲ : ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್

ಕನ್ನಡ ಅನುವಾದ : ಕೆ. ಶೋಭಾಲತ ಮಲ್ಲಿಕಾರ್ಜುನ

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**KATOPANISHATTU**

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.

**M.: 9449695503, 8050082689, 9886532204**

| | | |
|---|---|---|
| ಮೊದಲನೇ ಮುದ್ರಣ | : | 2025 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503, 9886532204 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 70/– |
| ಪುಟಗಳು | : | iv+72 = 76 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು.

ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

**ಎಚ್.ಎನ್.ಶ್ರೀನಿವಾಸ**

ಮತ್ತು

**ಎಸ್.ಎನ್.ವಿಜಯಲಕ್ಷ್ಮಿ**

**ಸಂಸ್ಥಾಪಕರು,**

ಶ್ರೀರಾಮಧಾಮ ಧ್ಯಾನಕೇಂದ್ರ

# 1. ಕಠೋಪನಿಷತ್ತು

ಯಾವ ಮಾನವನಾದರೂ, ಎಷ್ಟು ಜನ್ಮಗಳನ್ನು ಪಡೆದರೂ ಕೊನೆಗೆ ಸಾಧಿಸಬೇಕಾದ್ದು ಆತ್ಮ ಸಾಕ್ಷಾತ್ಕಾರವನ್ನು. ಷಿರಿಡಿ ಬಾಬಾರನ್ನು ಎಷ್ಟು ಕೋರಿಕೆಗಳು ಕೋರಿದರೂ, ಎಷ್ಟು ವರಗಳನ್ನು ಹೊಂದಿದರೂ, ಬಾಬಾರವರು ಹೇಳಿರುವಂತೆ ಆತ್ಮ ಸಾಕ್ಷಾತ್ಕಾರವನ್ನು ಸಾಧಿಸದ ಹೊರತು, ಈ ದುಃಖದಿಂದಾಗಲಿ, ಈ ಜನನ ಮರಣ ಚಕ್ರದಿಂದಾಗಲಿ ಹೊರಬೀಳಲಾರರು. ಬುದ್ಧಿವಂತನು ಬಾಬಾ ಹೇಳಿದ್ದನ್ನು ಆಚರಿಸುತ್ತಾನೆ, ಸಾಧಿಸುವ ಪ್ರಯತ್ನವನ್ನು ಮಾಡುತ್ತಾನೆ,

ಬಾಬಾರವರು ಆತ್ಮಸಾಕ್ಷಾತ್ಕಾರವನ್ನು ಹೊಂದಬೇಕೆಂದರೆ ಒಂಭತ್ತು ನಿಯಮಗಳನ್ನು ಹೇಳಿದ್ದಾರೆ. ಈ ಒಂಭತ್ತರಲ್ಲಿ ಆರನೆಯ ನಿಯಮವೇನೆಂದರೆ ಪ್ರಿಯವಾದವುಗಳನ್ನಲ್ಲ, ಶ್ರೇಯಸ್ಕರವಾದವುಗಳನ್ನು ಕೋರಬೇಕೆಂದಿದ್ದಾರೆ.

ಬಾಬಾರವರು ಸುಮ್ಮನೆ ಹೇಳಿಲ್ಲ, ಇದು ಉಪನಿಷತ್ತುಗಳಲ್ಲಿರುವ ವಿಷಯವನ್ನೇ ಹೇಳಿದ್ದಾರೆ. ಈ ವಿಷಯವು ಕಠೋಪನಿಷತ್ತಿನಲ್ಲಿಯೂ ಹೇಳಲ್ಪಟ್ಟಿದೆ.

**"ಪ್ರಿಯವಾದವುಗಳಿಗಿಂತ ಶ್ರೇಯಸ್ಕರವಾದವುಗಳನ್ನೇ ಕೋರುವುದು"**

ಎಂದ ಬಾಬಾರವರು ಹೇಳಿದ ವಿಷಯವನ್ನು ಕಠೋಪನಿಷತ್ತಿನಿಂದ ಒಂದು ಬಾರಿ ತಿಳಿದುಕೊಳ್ಳೋಣ.

ಪೂರ್ವಕಾಲದಲ್ಲಿ ವಾಜಶ್ರವನು ಎಂಬ ಮಹಾರಾಜನಿದ್ದನು. ಆತನಿಗೆ ನಚಿಕೇತನು ಎಂಬ ಮಗನಿದ್ದನು, ವಾಜಶ್ರವನು ಒಂದು ಯಾಗವನ್ನು ಮಾಡುತ್ತಿದ್ದಾನೆ, ಆ ಯಾಗದಲ್ಲಿ ಆತನು ಗೋವುಗಳನ್ನು ದಾನ ಮಾಡುತ್ತಿದ್ದಾನೆ. ತಂದೆಯು ದಾನ ಕೊಡುವ ಗೋವುಗಳಲ್ಲಿ ಅನೇಕ ಗೋವುಗಳು ಮುದುಕನಾಗಿ ಹುಲ್ಲು ತಿನ್ನುವುದಕ್ಕೂ ಕೂಡಾ ಹಲ್ಲು ಇಲ್ಲದಂತವು ಇವೆಯಂತೆ. ಅವುಗಳಿಗೆ ಹಾಲನ್ನು ಕೊಡುವ ಶಕ್ತಿಯೂ ಇಲ್ಲವಂತೆ. ಅಂತಹ ಗೋವುಗಳನ್ನು ತನ್ನ ತಂದೆಯು ದಾನ ಮಾಡುತ್ತಿದ್ದರೆ ನೋಡಿದ ನಚಿಕೇತನು ಬಹಳ ಬಾಧೆಪಟ್ಟನು.

ನಚಿಕೇತನು ಅಯ್ಯೋ! ನನ್ನ ತಂದೆಯು ಇಂತಹ ಯಾಗವನ್ನು ಮಾಡಿದರೂ ಕೂಡಾ ದುರ್ಗತಿ ಉಂಟಾಗುತ್ತದೆ ಎಂದು ನೋವುಪಟ್ಟನು. ಆದ್ದರಿಂದ ತಂದೆಗೆ

ಒಳ್ಳೆಯದು ಮಾಡಬೇಕೆಂದು ನಚಿಕೇತನು ತಂದೆಗೆ ಏನೆಂದು ಹೇಳಿದನೆಂದರೆ! ತಂದೆಯೇ ಈ ಯಾಗವನ್ನು ನಿನ್ನ ಸರ್ವಸ್ವವನ್ನು ದಾನ ಮಾಡಬೇಕಲ್ಲವೇ? ಮತ್ತೆ ನನ್ನನ್ನು ಯಾರಿಗೆ ಕೊಡುವೆ? ಎಂದನು.

ತಂದೆಯು ಮಾತನಾಡಲಿಲ್ಲ, ಮೌನವಾಗಿಯೇ ಇದ್ದಾನೆ. ಆಗ ನಚಿಕೇತನು ಮತ್ತೇ ಕೇಳಿದನು, ನನ್ನನ್ನು ಯಾರಿಗೆ ಕೊಡುವೆ ಎಂದು? ಈ ಬಾರಿಯೂ ಕೂಡಾ ಮೌನವಾಗಿಯೇ ಇದ್ದಾನೆ ವಾಜಶ್ರವನು. ಆದರೂ ಸರಿ ನಚಿಕೇತನು ಬಿಡಲಿಲ್ಲ, ಮತ್ತೇ ಮೂರನೇ ಬಾರಿ, ತಂದೆಯೇ ನನ್ನನ್ನು ಯಾರಿಗೆ ಕೊಡುವೆ? ಎಂದನು. ತಂದೆಗೆ ಕೋಪ ಬಂದಿತು, ಆ ಕೋಪದಲ್ಲಿ "ನಿನ್ನನ್ನು ಯಮನಿಗೆ ಕೊಡುತ್ತೇನೆ" ಎಂದ. ಆಗ ನಚಿಕೇತನು ತಂದೆಗೆ ಏನೆಂದು ಹೇಳಿದನೆಂದರೆ "ನನ್ನನ್ನು ಯಮನಿಗೆ ಕೊಡುತ್ತೇನೆ ಎಂದಿರುವೆಯಾದ್ದರಿಂದ ನೀನು ಆಡಿದ ಮಾತನ್ನು ತಪ್ಪದಂತೆ, ನನ್ನನ್ನು ಯಮಲೋಕಕ್ಕೆ ಕಳುಹಿಸು" ಎಂದನು.

ತಂದೆಯು ಕೋಪದಲ್ಲಿ ಅಂದಿದ್ದೇನೆ, ಅದನ್ನೇನು ಹಿಡಿಸಿಕೊಳ್ಳಬೇಡ ಎಂದನು. ಆದರೆ ನಚಿಕೇತನು ಬಿಡಲಿಲ್ಲ, ಕೊನೆಗೆ ನಚಿಕೇತನು ತಂದೆಯನ್ನು ಒಪ್ಪಿಸಿ ಯಮಪುರಿಗೆ ಸೇರಿಕೊಂಡನು.

ನಚಿಕೇತನು ಯಮಲೋಕಕ್ಕೆ ಹೋಗುವುದರೊಳಗೆ ಅಲ್ಲಿ ಯಮನು ಇಲ್ಲ. ಆದ್ದರಿಂದ ಏನು ಮಾಡಿದನೆಂದರೆ, ಯಮನು ಬರುವವರೆಗೂ ಅನ್ನ ನೀರುಗಳಿಲ್ಲದೆ ನಿರಾಹಾರಿಯಾಗಿ ಮೂರು ದಿನಗಳು ಎದುರು ನೋಡಿದನು. ಮೂರು ದಿನಗಳಿಗೆ ಅಲ್ಲಿಗೆ ಯಮನು ಬಂದನು, ತನ್ನ ಮನೆಯ ಮುಂದೆ ಈ ಬಾಲಕನನ್ನು ನೋಡಿದನು. ಆ ಬಾಲಕನು ಮೂರು ದಿನಗಳಿಂದ ನಿರಾಹಾರಿಯಾಗಿ ಇದ್ದಾನೆಂಬ ಸಂಗತಿಯನ್ನು ತಿಳಿದುಕೊಂಡನು. ತಕ್ಷಣವೇ ಯಮನಲ್ಲಿ ಸ್ವಲ್ಪ ಭಯ ಉಂಟಾಯಿತು. ಆತನು ಏನೆಂದು ಕೊಂಡನೆಂದರೆ **"ಬೆಂಕಿಯನ್ನು ತಿಳಿದು ಮುಟ್ಟಿದರೂ, ತಿಳಿಯದೆ ಮುಟ್ಟಿದರೂ ಸುಡುತ್ತದೆ ಅಲ್ಲವೇ?"** ಮತ್ತೆ ತನಗಾಗಿ ಬಂದ ಅತಿಥಿಯನ್ನು ಉಪವಾಸವಿಡುವುದು ಅಪರಾಧವೇ, ಅಧರ್ಮವೇ, ಆದ್ದರಿಂದ ಇದರ ಫಲವನ್ನು ನನ್ನನ್ನು ಅಂಟದೇ ಬಿಡದು. ಆದ್ದರಿಂದ ಇದನ್ನು ನಿವಾರಿಸಿಕೊಳ್ಳಬೇಕು ಎಂದು ಯಮನು ಅಂದುಕೊಂಡನು.

ಅಂದರೆ ಇದರಿಂದ ನಾವು ಒಂದನ್ನು ಅರ್ಥ ಮಾಡಿಕೊಳ್ಳಬೇಕು, ಯಾರ ಮನೆಗಾದರೂ ಸರಿ ಅವರಿಗಾಗಿ ಅತಿಥಿಗಳು ಬಂದಾಗ, ಊಟದ ಸಮಯವಾಗಿದ್ದಾಗ ತಪ್ಪದೆ ಅವರಿಗೆ ಊಟವನ್ನು ಕೊಡಬೇಕು, ಕೊಡದೇ ಕಳುಹಿಸಬಾರದು. ಅದನ್ನೇ ಪತ್ರೀಜಿಯವರು ಕೂಡಾ ಹೇಳುತ್ತಿರುತ್ತಾರೆ. ಮಹನೀಯರು ಕೂಡಾ ಅದನ್ನೇ ಹೇಳುತ್ತಾರೆ.

ಈ ಜ್ಞಾನವನ್ನೆಲ್ಲಾ ಏಕೆ ಹೊಂದುತ್ತಿದ್ದೇವೆ? ನಮ್ಮನ್ನು ನಾವು ಸರಿಮಾಡಿಕೊಳ್ಳುವುದಕ್ಕೇ! ನಮ್ಮ ಲೋಪಗಳನ್ನು ಸರಿಪಡಿಸಿಕೊಳ್ಳುವುದಕ್ಕೇ! ಇವೆಲ್ಲವೂ ವೇದಗಳಲ್ಲಿ ಉಪನಿಷತ್ತುಗಳಲ್ಲಿ, ಎಷ್ಟೋ ರೀತಿಯಾಗಿ ಬೋಧಿಸಲ್ಪಟ್ಟಿವೆ.

ಆದ್ದರಿಂದ ಯಮನು ನಚಿಕೇತನನ್ನು ಸಮೀಪಿಸಿ ಹೀಗೆ ಅಂದನು, ಮಗು ನಿನಗೆ ನಮಸ್ಕಾರ. ಈ ಮೂರು ದಿನಗಳು ನಿನ್ನನ್ನು ಉಪವಾಸ ಇಟ್ಟಿದ್ದಕ್ಕಾಗಿ ಬಂದ ದೋಷ ನಿವಾರಣೆಗೆ ಮೂರು ವರಗಳನ್ನು ಕೊಡುತ್ತೇನೆ ಕೋರಿಕೊ ಎಂದನು.

ಆಗ ನಚಿಕೇತನು ಹೀಗೆ ಅಂದನು ಓ, ಮೃತ್ಯುದೇವಾ! ನಿನ್ನ ಹಿತಕ್ಕಾಗಿ ಮೂರು ವರಗಳನ್ನು ಕೋರಿಕೊಳ್ಳುತ್ತಿದ್ದೇನೆ ಎಂದು ಮೊಟ್ಟ ಮೊದಲ ವರವನ್ನು ಕೇಳಿದನು.

1. ನಾನು ನಿನ್ನ ಬಳಿಯಿಂದ ನಮ್ಮ ಮನೆಗೆ ಹೋದ ಮೇಲೆ ನನ್ನ ತಂದೆ ನನ್ನನ್ನು ಗುರುತಿಸಿ, ನನ್ನ ಮೇಲಿರುವ ಕೋಪವನ್ನು ಬಿಟ್ಟು, ಆದರದಿಂದ ನನ್ನನ್ನು ಸ್ವೀಕರಿಸಬೇಕು, ಇದು ನನ್ನ ಮೊದಲನೆಯ ವರ ಎಂದನು.

ಆಗ ಯಮನು ಧರ್ಮರಾಜನು ಏನೆಂದನೆಂದರೆ, ನಚಿಕೇತನ ನೀವು ಪುನಃ ಮನೆಯನ್ನು ಸೇರಿದ ತಕ್ಷಣವೇ ನಿನ್ನ ತಂದೆ ನಿನ್ನನ್ನು ಗುರುತಿಸಿ ನಿನ್ನ ಮೇಲಿನ ಕೋಪವನ್ನು ಬಿಟ್ಟು ಪ್ರೇಮದಿಂದ ಆದರಿಸುತ್ತಾನೆ ಎಂದು ವರವನ್ನು ಕೊಡುತ್ತೇನೆಂದನು.

ಆಗ ನಚಿಕೇತನು ಯಮಧರ್ಮರಾಜನನ್ನು ಎರಡನೆಯ ವರವನ್ನು ಕೋರಿಕೊಂಡನು.

2. ಸ್ವರ್ಗದಲ್ಲಿ ಹಸಿವಾಗಲಿ, ನೀರಡಿಕೆಯಾಗಲಿ, ಸಾವಾಗಲಿ, ಮುದಿತನವಾಗಲಿ ಇರುವುದಿಲ್ಲ, ದುಃಖವು ಇರುವುದಿಲ್ಲ. ಜೀವನು ಅಲ್ಲಿ ಯಾವ ಭಯವಿಲ್ಲದೆ ಸುಖವಾಗಿ ಇರುತ್ತಾನೆಂದು ಕೇಳಿದ್ದೇನೆ, ಅಂತಹ ಸ್ವರ್ಗ ಪ್ರಾಪ್ತಿಗೆ ಸಾಧನವಾದ ಅಗ್ನಿ ವಿದ್ಯೆಯು ನಿನಗೆ ಗೊತ್ತು. ಆ ಅಗ್ನಿ ವಿದ್ಯೆಯಿಂದ ಜನಗಳು ಅಂದರೆ ಮಾನವರು ಅಮೃತತ್ವವನ್ನು ಹೊಂದುತ್ತಿದ್ದಾರೆ, ಆ ಅಗ್ನಿ ವಿದ್ಯೆಯನ್ನು ನನಗೆ ಹೇಳು ಎಂದು ನಚಿಕೇತನು ಕೇಳಿದನು.

ಆಗ ಯಮನು ಏನೆಂದನೆಂದರೆ, ಓ ನಚಿಕೇತ ಸ್ವರ್ಗಲೋಕ ಪ್ರಾಪ್ತಿ ಸಾಧನವಾದ ಅಗ್ನಿ ವಿದ್ಯೆಯನ್ನು ನಿನಗೆ ಹೇಳುತ್ತಿದ್ದೇನೆ, ತಿಳಿದುಕೊ ಎಂದನು. ಅದನ್ನು ತಿಳಿದುಕೊಂಡ ನಂತರ ಆ ವಿದ್ಯೆಯನ್ನು ಅಭ್ಯಸಿಸಿ ಪುನರ್ಜನ್ಮವಿಲ್ಲದ ಸ್ಥಿತಿಯನ್ನು ಹೊಂದು ಎಂದು ಯಮನು ಅಗ್ನಿವಿದ್ಯೆಯನ್ನು ನಚಿಕೇತನಿಗೆ ಉಪದೇಶಿಸಿದನು.

ಯಮನಿಂದ ಅದನ್ನು ಕೇಳಿದ ನಚಿಕೇತನು ಯಥಾರೀತಿಯಾಗಿ, ನಿರ್ದಿಷ್ಟವಾಗಿ ಅದನ್ನು ತಿರುಗಿ ಯಮನಿಗೆ ಒಪ್ಪಿಸಿದನು. ಅದನ್ನು ಕೇಳಿದ ಯಮನು ನಚಿಕೇತನ

ಏಕಸಂಧಾಗ್ರಾಹ್ಯತೆಗೆ, ಧಾರಣಾ ಶಕ್ತಿಗೆ ಮೆಚ್ಚಿ ಸಂತೋಷವನ್ನು ತಡೆದುಕೊಳ್ಳಲಾಗದೆ ನಚಿಕೇತಾ ಇನ್ನು ಮೂರನೆಯ ವರವನ್ನು ಕೋರಿಕೊ ಅಂದನು.

3. ಆಗ ನಚಿಕೇತನು ಏನೆಂದನೆಂದರೆ ಯಮಧರ್ಮರಾಜ, ಮಾನವನು ಮರಣಿಸಿದ ನಂತರ ಈ ಆತ್ಮವು ಇರುತ್ತದೆ ಎಂದು ಕೆಲವರು, ಇರುವುದಿಲ್ಲ ಎಂದು ಮತ್ತೇ ಕೆಲವರು ಹೇಳುತ್ತಿದ್ದಾರೆ. ಆದ್ದರಿಂದ ಮರಣಾನಂತರ ಆತ್ಮ ಅಂದರೆ ಜೀವನು ಇರುತ್ತಾನಾ? ಇಲ್ಲಾ? ಎಂಬ ಸಂದೇಹ ಉಂಟಾಗುತ್ತದೆ. ನಿನ್ನ ಮೂಲಕ ಈ ಸಂದೇಹವನ್ನು ನಾನು ನಿವೃತ್ತಿ ಮಾಡಿಕೊಳ್ಳಬೇಕೆಂದಿರುವೆ. ಅದನ್ನು ನನಗೆ ಮೂರನೇ ವರವಾಗಿ ಕೊಡು ಎಂದನು.

ಆಗ ಯಮಧರ್ಮರಾಜನು ಅಂದುಕೊಂಡನು, ಈ ಆತ್ಮವಿದ್ಯೆಯನ್ನು ಅರ್ಹರಿಗೆ, ಯೋಗ್ಯತೆಯುಳ್ಳವರಿಗೆ ಹೇಳಬೇಕು. ಅರ್ಹತೆ ಇಲ್ಲದವರಿಗೆ ಹೇಳಿದರೆ ಇದು ಅರ್ಥವಾಗದೇ, ಅರಿವಾಗದೆ, "ಶುಷ್ಕ ವೇದಾಂತವಾಗಿ" ತನಗೆ, ಸಮಾಜಕ್ಕೆ ಕೂಡಾ ಕೆಟ್ಟದನ್ನು ಮಾಡುತ್ತದೆ. ಆದಕಾರಣ ಜ್ಞಾನೋಪದೇಶಕ್ಕೆ ನಚಿಕೇತನು ಅರ್ಹನೇ? ಅಲ್ಲವೇ? ಎಂದು ಯಮನು ಪರೀಕ್ಷಿಸಬಯಸಿದನು. ಇಲ್ಲಿ ಕೂಡಾ ಬಹಳ ಮುಖ್ಯವಾದ ಅಂಶವೇನೆಂದರೆ ಈಗ ಯಾವ ವಿದ್ಯೆಯನ್ನಾದರೆ ನಾವು ತಿಳಿದುಕೊಳ್ಳುತ್ತಿದ್ದೇವೋ ಆ ಆತ್ಮವಿದ್ಯೆ, ಆ ಬ್ರಹ್ಮ ವಿದ್ಯೆ, ಆ ಪರಾವಿದ್ಯೆ, ಆ ಅಕ್ಷರವಿದ್ಯೆಗೆ ಎಲ್ಲರೂ ಅರ್ಹರಲ್ಲ.

ಅದಕ್ಕೆ ಪೂರ್ವದಲ್ಲಿ ಗುರುಗಳು ಈ ವಿದ್ಯೆಗಾಗಿ, ಆತ್ಮಸಾಕ್ಷಾತ್ಕಾರಕ್ಕಾಗಿ ಆತ್ಮಜ್ಞಾನಕ್ಕಾಗಿ ಅವರ ಬಳಿಗೆ ಬಂದವರಿಗೆ ಮೊದಲು ಅವನು ಅರ್ಹನೇ? ಅಲ್ಲವೇ? ಎಂದು ಪರೀಕ್ಷಿಸುತ್ತಿದ್ದರು. ಎಷ್ಟೋ ಪರೀಕ್ಷೆಗಳನ್ನು ಇಟ್ಟ ಆಮೇಲೆ ಅರ್ಹನು ಎಂದು ತೇಲಿದ ನಂತರವೇ ಬೋಧಿಸುತ್ತಿದ್ದರು. ಇದನ್ನು ನಾನು ಪತ್ರೀಜಿಯವರ ಹತ್ತಿರ ಕೂಡಾ ಗಮನಿಸಿದೆನು, ನಾನು ಅಂದುಕೊಳ್ಳುತ್ತಿದ್ದೆನು. ಏನು ಈ ರೋಗಗಳಿಗಾಗಿ ಬಂದವರು, ಈ ಕೋರಿಕೆಗಳೊಡನೆ ಇರುವವರು, ಅನುಭವಗಳಿಗೆ ಪ್ರಾಮುಖ್ಯತೆಯನ್ನು ಕೊಡುವವರಿಗೆ ಸಂಕಲ್ಪಗಳನ್ನು ಇಟ್ಟುಕೊಳ್ಳುವವರಿಗೆಲ್ಲಾ ಪತ್ರೀಜಿಯವರು ಬೋಧಿಸುತ್ತಿದ್ದಾರೆ, ಏನಿದು ಎಂದು, ಆದರೆ ನನಗೆ ನಂತರ ಅರ್ಥವಾಯಿತು.

ಅಂದರೆ ಅವರಲ್ಲಿ ಅರ್ಹತೆಯುಳ್ಳವರು ಕೆಲವರೇ ಅಂದರೆ ಒಬ್ಬರೋ, ಇಬ್ಬರೋ ಇರುತ್ತಾರೆ. ಅವರಿಗಾಗಿಯೇ ಅವರು ಹೋಗಿ ಬೋಧಿಸುತ್ತಿದ್ದಾರೆ ಎಂಬುದನ್ನು ನಾನು ಅರ್ಥ ಮಾಡಿಕೊಂಡೆನು. ಪತ್ರೀಜಿಯವರು ಅವರನ್ನು ಹುಡುಕಿ ತೆಗೆಯುವುದಕ್ಕಾಗಿಯೇ ಇಷ್ಟು ಶ್ರಮಪಟ್ಟು ತಿರುಗುತ್ತಿದ್ದಾರೆ, ಅವರು ಹಾಗೆ ತನ್ನನ್ನು ಆಕರ್ಷಿಸಿದವರಿಗೆ, ತನ್ನ ಬಳಿಗೆ ಬಂದವರಿಗೆ ಕೆಲವು ಪರೀಕ್ಷೆಗಳನ್ನು ಸಹ ಇಡುತ್ತಿದ್ದರು. ಸಂದರ್ಭವನ್ನು ನೋಡಿ ಅವರನ್ನು ಬೈದರೆ ಕೆಲವರು ಕೋಪಗೊಂಡು ದೂರವಾಗುತ್ತಿದ್ದರು. ಅದರ ಅರ್ಥ ಆತನ

ಬಳಿ ಆ ವಿದ್ಯೆಯನ್ನು ಹೊಂದುವುದಕ್ಕೆ ಅರ್ಹತೆ ಇಲ್ಲವೆಂದು ಲೆಕ್ಕ. ಯಾರಾದರೆ ಅಂತಹ ಸದ್ಗುರುವು ದೊರಕಿದಾಗ, ಅಷ್ಟು ಜ್ಞಾನವನ್ನು ಹೊಂದುತ್ತಿರುವಾಗ ಅವರ ಪರೀಕ್ಷೆಗಳನ್ನು ಸಹಿಸಿಕೊಂಡು ನಿಲ್ಲಬೇಕು, ಇಲ್ಲದಿದ್ದರೆ ಆ ವಿದ್ಯೆಯನ್ನು ಅವರು ಹೊಂದಲಾರರು.

ಮತ್ತೇ ಎಷ್ಟು ಜನ್ಮಗಳನ್ನು ಪಡೆಯಬೇಕೋ? ಅಂತಹ ಗುರುಗಳು ಲಭಿಸಬೇಕೆಂದರೆ! ಮತ್ತೆ ಎಷ್ಟು ಜನ್ಮಗಳು ಬೇಕಾಗುತ್ತದೋ!

ಹಾಗೆಯೇ ಈಗ ಯಮ ಧರ್ಮರಾಜನು ಕೂಡಾ ಇವನಿಗೆ ಈ ವಿದ್ಯೆಯನ್ನು ಹೊಂದುವ ಅರ್ಹತೆ ಇದೆಯೇ? ಇಲ್ಲವೇ? ಎಂದು ಆಲೋಚಿಸಿದನು.

ಸಣ್ಣ ಕೋಪಕ್ಕೇ ದೂರವಾದರೆ ಅವರಿಗೆ ಅಷ್ಟು ಅಹಂ ಇದ್ದಂತೆ. ಗುರುವು ಏನೆಂದರೂ ಕೂಡಾ, ನನಗೆ ಅವೆಲ್ಲಾ ಅಗತ್ಯವಿಲ್ಲ, ಗುರುವು ಬೋಧಿಸುವ ಜ್ಞಾನ ನನಗೆ ಬೇಕು ಎಂದವನೇ ಅರ್ಹನು. ಅಂತಹ ಶ್ರೇಷ್ಠವಾದ ವಿದ್ಯೆಯನ್ನು ಬೋಧಿಸುತ್ತಿರುವ ಆ ಗುರುವು ಒಂದು ಮಾತನ್ನು ಅಂದರೆ ನೀನು ಸಹಿಸಲಾರದವನು, ಆ ವಿದ್ಯೆಯನ್ನು ಹೊಂದುವ ಅರ್ಹತೆ ನಿನಗೆ ಇಲ್ಲದಂತೆಯೇ? ಅದಕ್ಕೆ ಪತ್ರೀಜಿಯವರು ಮಾರ್ತಾ ಮಿಲಾರೇಪಾ ಕಥೆಯನ್ನು ಓದಿರಿ ಎನ್ನುತ್ತಾರೆ.

ಅದರಲ್ಲಿ ಗುರುವು ಶಿಷ್ಯನನ್ನು ಒಂದು ಸಣ್ಣ ಗುಡಿಯನ್ನು ಕಟ್ಟು ಎನ್ನುತ್ತಾರೆ. ಕಲ್ಲನ್ನು ಹೊತ್ತು ಕಟ್ಟಿದನು. ಏಯ್ ಅಲ್ಲಿ ಸೊಟ್ಟಾಗಿದೆ, ತೆಗೆದು ಬಿಸಾಕು ಎಂದನು, ತೆಗೆದು ಬಿಟ್ಟನು. ಮತ್ತೇ ಇಲ್ಲಿ ಅಲ್ಲ ಇನ್ನೊಂದು ಕಡೆಯಲ್ಲಿ ಕಟ್ಟು ಎಂದನು. ಅಲ್ಲಿಯೂ ಕಟ್ಟಿದನು, ಕಲ್ಲುಗಳನ್ನೆಲ್ಲಾ ಹೊರುವಾಗ ಆತನಿಗೆ ಬೆವರು ಸುರಿಯುತ್ತಿತ್ತು, ರಕ್ತವೂ ಕೂಡಾ ಸುರಿಯುತ್ತಿತ್ತು, ಆದರೂ ಸರಿ ಗುರುವು ಕಠಿಣವಾಗಿಯೇ ವ್ಯವಹರಿಸುತ್ತಿದ್ದನು. ಎಷ್ಟೋ ಛಲದಿಂದ ಆತನ ಬಳಿ ವಿದ್ಯೆಯನ್ನು ಕಲಿತುಕೊಂಡು ಅಷ್ಟು ಕಷ್ಟವಾದರೂ ಮಾಡಿದನು ಮಿಲಾರೆಪ ಆ ಗುರುವಿನ ಹೆಂಡತಿ ಅನುಕಂಪ ಪಡುತ್ತಿದ್ದಳು, ಏನು ಈತನು ಇಷ್ಟು ಕಠಿಣವಾಗಿ ಅವನ ಬಗ್ಗೆ ವ್ಯವಹರಿಸುತ್ತಿದ್ದಾರೆ? ಎಂದು. ಕೊನೆಗೆ ಆ ಪರೀಕ್ಷೆಗಳಲ್ಲಿ ಗೆದ್ದ ನಂತರ ಆಗ ಶಿಷ್ಯನಿಗೆ ಬೋಧಿಸಿದನು. ಶಿಷ್ಯನು ಕೂಡಾ ಗುರುವಿನಂತೆಯೇ ಬೆಳೆದನು.

ಆ ಗುರುವು ನಂತರ ಹೆಂಡತಿಗೆ ಹೇಳಿದನು, ಅವನು ಮಾಡಿದ ಎಷ್ಟೋ ಪಾಪಗಳಿವೆ. ಅವು ಸ್ವಲ್ಪ ಪ್ರಕ್ಷಳನೆ ಆಗಬೇಕು ದಯೆ ತೋರಿಸಿದರೆ ಅದರೊಳಗಿನಿಂದ ಹೇಗೆ ಹೊರ ಬರುತ್ತಾನೆ?

ಅದಕ್ಕಾಗಿಯೇ ಗುರುಗಳು ಅವರಿಗೆ ಅನೇಕ ರೀತಿಯ ಕೆಲಸಗಳನ್ನು ಹೇಳುತ್ತಾರೆ, ಪಾಪ ಪರಿಹಾರವಾಗುವಂತಹ ಸೇವೆಗಳನ್ನು ಮಾಡು ಎನ್ನುತ್ತಿದ್ದರು, ಅಷ್ಟೇ ಅಲ್ಲ ಅವರಿಗೆ ತಕ್ಕ ಬೋಧನೆಯನ್ನು ಕೂಡಾ ಮಾಡುತ್ತಿದ್ದರು. ಇದು ಅರ್ಥವಾಗದೇ ಕೆಲವರು ಏನು,

ನನ್ನ ಗುರುಗಳು ಎಷ್ಟು ಹೊತ್ತೂ ಅದು ಎನ್ನುತ್ತಾನೆ, ಇದು ಎನ್ನುತ್ತಾನೆ ಎಂದುಕೊಳ್ಳುತ್ತಾರೆ.

2002 ನವೆಂಬರ್‌ನಲ್ಲಿ ಪತ್ರೀಜಿಯವರು ನಮ್ಮ ಮನೆಗೆ ಭೀಮವರಂಗೆ ಬಂದರು. ಆಗ ನಮ್ಮ ಮನೆಯ ಹತ್ತಿರ ಒಬ್ಬಾತನಿಗೆ ಈ ಆಧ್ಯಾತ್ಮಿಕತೆಯಲ್ಲಿ ಸ್ವಲ್ಪ ಪರಿಚಯವಿದೆ. ಯಾವುವೋ ಕೆಲವು ಉಪನ್ಯಾಸಗಳನ್ನು ಕೇಳುತ್ತಾ ಇರುತ್ತಾನೆ. ಪತ್ರೀಜಿಯವರು ಬಂದಿದ್ದಾರೆಂದು ಬಂದನು, ಅವನಿಗೆ ಎಲ್ಲಾ ಗೊತ್ತಿರುವಂತೆ ಪತ್ರೀಜಿಯವರಿಗೆ ಏನೇನೋ ಹೇಳುತ್ತಿದ್ದಾನೆ, ಆಗ ಪತ್ರೀಜಿಯವರು ನಿನಗೆ ಬುದ್ಧಿ ಇದೆಯಾ? ನೀನು ಏನು ಮಾತನಾಡುತ್ತಿರುವೆ, ನಿಜವಾಗಿ ನಿನಗೇನು ಗೊತ್ತು? ಎಂದು ಜೋರಾಗಿ ಬೈದರು.

ಅವನಿಗೆ ಬಹಳ ಕೋಪ ಬಂದಿತು ಮುಖವು ಸುಟ್ಟು ಹೋಯಿತು, ಮೆಲ್ಲಗೆ ಎದ್ದು ಹೋಗಿಬಿಟ್ಟನು, ಮತ್ತೆ ಬರಲಿಲ್ಲ.

ಆತನು ಹೋದ ನಂತರ ಪತ್ರೀಜಿಯವರು ಎಂದರು, ಏನಯ್ಯ ನಾವು ರಸ್ತೆಯ ಮೇಲೆ ನಿಂತು ಹೋಗಿ ಬರುವವರಿಗೆಲ್ಲಾರನ್ನು ಬೈಯುತ್ತಾ ಕುಳಿತುಕೊಳ್ಳುತ್ತೇವಾ? ಇದೇನಾ ನಮ್ಮ ಕೆಲಸ. ನಮ್ಮ ಬಳಿಗೆ ಬಂದವರಿಗೆ ಜೋರಾಗಿಯೇ ಹೇಳುತ್ತೇವೆ, ಎಲ್ಲರಿಗೂ ಏಕೆ ಹೇಳುತ್ತೇವೆ? ಎಂದರು.

ನನ್ನ ಬಳಿಗೆ ಬಂದವನು ಅಂದರೆ ಜ್ಞಾನಕ್ಕಾಗಿ ಬಂದವನೆಂದು ಭಾವಿಸುತ್ತೇವೆ. ಅವನನ್ನು ಸರಿಯಾದ ಮಾರ್ಗದಲ್ಲಿ ಇಡಬೇಕೆಂದರೆ ಸ್ವಲ್ಪ ಗಟ್ಟಿಯಾಗಿ, ಗಡುಸಾಗಿಯೇ ಹೇಳಬೇಕು, ಅವನ ತಪ್ಪುಗಳನ್ನು ಸರಿ ಮಾಡಬೇಕು ಎಂದು ಹೇಳಿದರು. ಆಗ ಅರ್ಥವಾಯಿತು, ಗುರುವಿನ ವರ್ತನೆ ನಮಗೆ ಅರ್ಥವಾಗದು, ಯಾವ ಸಂದರ್ಭದಲ್ಲಿ ಅವರು ಹೇಗೆ ವರ್ತಿಸುತ್ತಾರೋ ನಮಗೆ ತಿಳಿಯದು, ಯಾರನ್ನು ಏಕೆ ಅನ್ನುತ್ತಾರೆಂದು ಕೂಡಾ ನಮಗೆ ತಿಳಿಯದು, ಆದ್ದರಿಂದ ನಮಗೆ ಅವೆಲ್ಲಾವು ಅನಗತ್ಯ, ಆತನ ಬಳಿ ನಮಗೆ ಬೇಕಾದ ಜ್ಞಾನವನ್ನು ಹೊಂದುವುದೇ ನಮಗೆ ಬೇಕಾಗಿರುವುದು. ಆತನು ಮಾಡುವ ಕೆಲಸಗಳು ಅನಗತ್ಯವೆಂದು ಅರ್ಥ ಮಾಡಿಕೊಂಡೆನು.

ಇಷ್ಟು ಶ್ರೇಷ್ಠವಾದ ಜ್ಞಾನ, ಇಷ್ಟು ಮೌಲ್ಯವುಳ್ಳ ಜ್ಞಾನವನ್ನು ಸುಮ್ಮನೆ ಕೊಡುತ್ತಾರೆಯೇ? ಕೊಟ್ಟರೆ ಅವನಿಗೆ ಏನು ಅರ್ಥವಾಗುತ್ತದೆ? ಯೋಗ್ಯತೆ ಇಲ್ಲದವರಿಗೆ ಕೊಟ್ಟರೆ ಬೂದಿಯಲ್ಲಿ ಸುರಿದ ಪನ್ನೀರಿನಂತೆ ಆಗುತ್ತದೆ. ಆದ್ದರಿಂದ ಸದ್ಗುರುಗಳು ಅರ್ಹತೆಯನ್ನು ನೋಡುತ್ತಾರೆ.

"ಗುರುವಿನ ಕೋಪವನ್ನು ಋಣಾತ್ಮಕ ಅಂಶವಾಗಿ ಲೆಕ್ಕ ಹಾಕಿದರೆ, ಎಂತಹ ಮೂರ್ಖತನ" ಆತನು ಅಗತ್ಯವಾದ ಕಡೆಯಲ್ಲಿ ಅಗತ್ಯವಾದವರ ಬಳಿ ಪ್ರದರ್ಶಿಸುತ್ತಾನೆ.

ನೋಡುವುದಕ್ಕೆ ಪತ್ರೀಜಿಯವರಿಗೆ ನೂರಾರು, ಸಾವಿರಾರು, ಲಕ್ಷಗಟ್ಟಲೆ ಜನರು ಅನುಸರಿಸುವವರಿದ್ದಾರೆ. ಎಲ್ಲರು ಅರ್ಹತೆ ಇರುವವರೆಂದು ಅಲ್ಲವೆಂದು ಅವರಿಗೆ ಗೊತ್ತು. ಆದ್ದರಿಂದ ಅರ್ಹತೆ ಇರುವವರಿಗೇ ಅವರು ಬೋಧಿಸುತ್ತಾರೆ, ಇಲ್ಲದವರನ್ನು ಬಳಸಿಕೊಳ್ಳುತ್ತಾರೆ. ಅವರನ್ನೇನೂ ಹೊರಗೆ ಹೋಗು ಎನ್ನುವುದಿಲ್ಲ. ಅವರೊಡನೆ ಮಾತನಾಡುತ್ತಾರೆ, ಅವರ ಭುಜದ ಮೇಲೆ ಕೈ ಹಾಕುತ್ತಾರೆ. ಅಪ್ಪಿಕೊಳ್ಳುತ್ತಾರೆ, ಫೋಟೋ ತೆಗೆಸಿಕೊಳ್ಳುತ್ತಾರೆ, ಎಲ್ಲಾ ಮಾಡುತ್ತಾರೆ.

ಅವರು ಶಕ್ತಿಯನ್ನು, ಅವರ ಜ್ಞಾನವನ್ನು ಅರ್ಹತೆಯುಳ್ಳವರಿಗೆ ಅನೇಕ ರೂಪಗಳಲ್ಲಿ ಕೊಡುತ್ತಾರೆ. ಉಳಿದವರನ್ನು ಬಳಸಿಕೊಳ್ಳುತ್ತಾರೆ. ಅವರ ಮೂಲಕ ಆಶ್ರಮಗಳನ್ನು ಬೆಳೆಸಿಕೊಳ್ಳುತ್ತಾರೆ, ಎಷ್ಟೋ ಶಾಖೆಗಳನ್ನು ಇಡಿಸುತ್ತಾರೆ, ಭವಿಷ್ಯತ್ತಿನ ಪೀಳಿಗೆಗಳಿಗೆ ಉಪಯೋಗವಾಗುವ ಕೆಲಸಗಳನ್ನು ಅವರಿಂದ ಮಾಡಿಸುತ್ತಾರೆ. ಆದ್ದರಿಂದ ತಿಳಿದುಕೊಳ್ಳಿ ಗುರುವು ನಮ್ಮನ್ನು ಹಿಡಿದುಕೊಳ್ಳುವುದಿಲ್ಲ, ನಾವೇ ಗುರುವನ್ನು ಹಿಡಿದುಕೊಳ್ಳಬೇಕು.

ಅದಕ್ಕೆ ಈ ಉಪನಿಷತ್ತಿನಲ್ಲಿ ನಚಿಕೇತನು ಒಂದು ಉದಾಹರಣೆ. ಯಮನು ಎಷ್ಟು ರೀತಿಗಳಲ್ಲಿ ಹೇಳಿದರೂ, ಎಷ್ಟು ಪ್ರಲೋಭನೆಗಳನ್ನು ಇಟ್ಟರೂ ಅವೆಲ್ಲವನ್ನು ನನಗೆ ಬೇಡ ಎಂದನು, ನನಗೆ ಬ್ರಹ್ಮವಿದ್ಯೆಯೇ ಬೇಕೆಂದನು.

ಆದ್ದರಿಂದ ನಾವೆಲ್ಲಾ ಬಹಳ ಶ್ರೇಷ್ಠ ಮಾರ್ಗದಲ್ಲಿ ಬಂದಿದ್ದೇವೆ, ಸ್ವಲ್ಪ ಶ್ರದ್ಧೆ ಇಡಿರಿ, ಉಳಿದ ವಿಷಯಗಳು ನಿಮಗೆ ಬೇಕಿಲ್ಲ, ಈ ಜ್ಞಾನವನ್ನು ಹೊಂದುತ್ತಿದ್ದೇವಾ? ಇಲ್ಲವಾ? ಎಂದು ನೋಡಿಕೊಳ್ಳಿರಿ.

ಈ ಮಾರ್ಗದಲ್ಲಿ ಬೆಳೆಯುತ್ತಿದ್ದೇವಾ? ಇಲ್ಲವೆ? ಎಂಬುದರ ಮೇಲೆ ದೃಷ್ಟಿಯಿಡಿರಿ, ಇರಬೇಕು. ಉಳಿದವರ ಗೊಡವೆ ನಿಮಗೆ ಬೇಕಿಲ್ಲ.

ನೀವು ಆತ್ಮರು, ನಿಮ್ಮ ದಾರಿಯಲ್ಲಿ ನೀವು ಬಂದಿದ್ದೀರಿ, ಇನ್ನೊಬ್ಬರಿಗಾಗಿ ಬಂದಿಲ್ಲ. ಆದಕಾರಣ ಹೊಂದಬೇಕಾದ ಜ್ಞಾನವನ್ನು ಹೊಂದಿ, ನಿಮ್ಮ ದಾರಿಯಲ್ಲಿ ನೀವು ಹೋಗಿಬಿಡುತ್ತೀರಿ ಎಂದು ತಿಳಿದುಕೊಳ್ಳಿ.

*** ***

ನಮ್ಮ ಗುರಿಯಾದ ಪೂರ್ಣಾತ್ಮ ಸ್ಥಿತಿಗೆ ಸೇರಿಕೊಳ್ಳಬೇಕೆಂದರೆ
ಧ್ಯಾನ, ಸ್ವಾಧ್ಯಾಯ, ಸಜ್ಜನ ಸಾಂಗತ್ಯವೆಂಬ ಆಧ್ಯಾತ್ಮಿಕ
ತ್ರಿರತ್ನಗಳೊಂದಿಗೆ ಆಧ್ಯಾತ್ಮಿಕ ಸೇವೆಯನ್ನು ಮಾಡುವುದು ಕಡ್ಡಾಯ.

**–ಬ್ರಹ್ಮರ್ಷಿ ಪಿತಾಮಹಾ ಪತ್ರೀಜಿ**

# 02.

ಯಮನು ಏನೆಂದುಕೊಂಡನೆಂದರೆ ಜ್ಞಾನೋಪದೇಶಕ್ಕೆ ನಚಿಕೇತನು ಅರ್ಹನಾ? ಅಲ್ಲವೇ? ಎಂದು ಪರೀಕ್ಷಿಸ ಬಯಸಿದನು.

ಈ "ಆತ್ಮ ವಿದ್ಯೆ" ಅಂದರೆ "ಬ್ರಹ್ಮವಿದ್ಯೆ" ಯಾರೆಂದರೆ ಅವರಿಗೆ ಬೋಧಿಸುವುದಲ್ಲ. ಆ ಆಕಾಂಕ್ಷೆ, ಹಂಬಲ ಇರುವವರಿಗೆ ಬೋಧಿಸಬೇಕೆಂದಿದ್ದಾರೆ. ಅದಕ್ಕೆ ಗುರುಗಳು ಯಾರೆಂದರೆ ಅವರಿಗೆ, ಕಂಡ ಕಂಡವರಿಗೆಲ್ಲಾ ಬೋಧಿಸುವುದಿಲ್ಲ. ಆ ಶಿಷ್ಯನನ್ನು ಪರೀಕ್ಷಿಸುತ್ತಾರೆ. ಆಗಲೇ ಬೋಧಿಸುತ್ತಾರೆ. ಅಷ್ಟೇ ಅಲ್ಲ, ಶಿಷ್ಯನು ಅರ್ಹನು ಎಂದು ತಿಳಿದರೂ ಕೂಡಾ ಅವನು ನಿಲ್ಲಬಲ್ಲನೇ? ಇಲ್ಲವೇ? ಎಂದು ಸ್ವಲ್ಪ ಕಠಿಣವಾಗಿಯೇ ವ್ಯವಹರಿಸುತ್ತಾರೆ.

ಅಹಂಕಾರವಿದೆಯೇ? ಇಲ್ಲವೇ? ಎಂಬ ಪರೀಕ್ಷೆಯನ್ನು ಕೂಡಾ ಮಾಡುತ್ತಾರೆ. ಇನ್ನು ಪರವಾಗಿಲ್ಲ, ಇವನು ಅರ್ಹನು ಎನ್ನಿಸಿದಾಗಲೇ ಬೋಧಿಸುತ್ತಾರೆ. ಈಗ ಅದೇ ಯಮನು ಕೂಡಾ ಆಲೋಚಿಸಿದನು. ನಚಿಕೇತನಿಗೆ ಅರ್ಹತೆ ಇದೆಯೇ? ಇಲ್ಲವೇ? ಎಚಿದು.

ಅದಕ್ಕೆ ಸದ್ಗುರುಗಳ ವರ್ತನೆ ಸಾಮಾನ್ಯರಿಗೆ ಅರ್ಥವಾಗದು. ಬಾಧೆಯ ಗುರುವು ತನ್ನ ಬಳಿಗೆ ಬಂದವರ ಬಳಿಯಿಂದ ಯಾವುದೋ ಒಂದು ರೀತಿಯಲ್ಲಿ ದೋಚುತ್ತಾನೆ. ಆ ಗುರುವಿನ ವರ್ತನೆ ಶಿಷ್ಯರಿಗೆ ತೃಪ್ತಿಯನ್ನು ಉಂಟು ಮಾಡುವಂತಹ ರೀತಿಯಲ್ಲಿ ಇರುತ್ತದೆ. ಸಹಜವಾಗಿ ಶಿಷ್ಯಂದಿರು ಯಾವ ಗುರುವಾದರೆ ಆರ್ಶೀವದಿಸಿದರೆ, ಗುರುಗಳು ಪಾದಪೂಜೆಯನ್ನು ಮಾಡಿಸಿಕೊಂಡರೆ ಎಷ್ಟೋ ಜಂಭಪಡುತ್ತಾರೆ. ಆ ಶಿಷ್ಯಂದಿರ ಮೂಲಕ ಅಂತಹ ಕೆಲಸಗಳನ್ನು ಮಾಡಿಸಿ ಅವರ ಮೂಲಕಾಶ್ರಮಗಳನ್ನು ಅವರ ಕೇಂದ್ರಗಳನ್ನು ವೃದ್ಧಿ ಮಾಡಿಕೊಳ್ಳುತ್ತಾರೆ, ಅವರಿಗೆ ಬೇಕಾದವುಗಳನ್ನು ಜೋಡಿಸಿಕೊಳ್ಳುತ್ತಾರೆ.

ಆದರೆ ಸದ್ಗುರುಗಳು ಹಾಗೆ ಅಲ್ಲ, ಅವರು ಏನನ್ನು ಕೋರುವುದಿಲ್ಲ, ಅಂತಹ ಶಿಷ್ಯನು ದೊರಕುವುದೇ ಅದೃಷ್ಟವಾಗಿ ಭಾವಿಸುತ್ತಾರೆ. ಅವರ ಕೋರಿಕೆ ಎಷ್ಟು ಹೊತ್ತೂ ಶಿಷ್ಯನನ್ನು ತನ್ನಂತೆ ತಯಾರು ಮಾಡುವುದೇ! ತಾನು ಬಂದಿರುವುದು ಲೋಕ ಕಲ್ಯಾಣಕ್ಕಾಗಿ, ತಾನಿರುವಷ್ಟು ಕಾಲವೂ ಅದನ್ನು ಬೋಧಿಸುತ್ತಾ ಇರುತ್ತಾನೆ. ತಾನು

ಮಾಡುವ ಜ್ಞಾನ ಬೋಧೆಯು ಅಲ್ಲಿಗೇ ಸ್ಥಗಿತವಾಗಬಾರದು, ಲೋಕದ ಜನರು ಅಜ್ಞಾನದಲ್ಲಿದ್ದಾರೆ. ಅವರು ಬಿಡುಗಡೆ ಹೊಂದಬೇಕೆಂದರೆ ಹೊರ ಬರಬೇಕೆಂದರೆ ಈ ಜ್ಞಾನ ಬೋಧೆ ಎನ್ನುವುದು ಹಾಗೇ ಮುಂದುವರಿಯುತ್ತಲೇ ಇರಬೇಕು. ಆದ್ದರಿಂದ ಸದ್ಗುರುಗಳು ಜನರನ್ನು ನೋಡುವುದಿಲ್ಲ, ತನ್ನಂತಹ ಶಿಷ್ಯಂದಿರು ತಯಾರಾದರೆ ಸಾಕು, ಎಂಬುವುದನ್ನೇ ನೋಡುತ್ತಾರೆ.

ಆದ್ದರಿಂದ ಮೊದಲು ನಚಿಕೇತನು ಅರ್ಹನೇ? ಇಲ್ಲವೇ? ಎಂದು ಯಮನು ಪರೀಕ್ಷಿಸಬಯಸಿದನು. ಆಗ ಯಮಧರ್ಮರಾಜನು ಏನೆಂದನೆಂದರೆ? ನಚಿಕೇತಾ ಪೂರ್ವದಲ್ಲಿ ದೇವತೆಗಳು ಈ ವಿಷಯದಲ್ಲಿ ಸಂದೇಹಿಸಿದರು, ದೇವತೆಗಳಂತವರಿಗೇ ಕೂಡಾ ಈ ಆತ್ಮ ವಿಷಯಗಳು ಅರ್ಥವಾಗಲಿಲ್ಲ. ಇದು ಬಹಳ ಸೂಕ್ಷ್ಮವಾದದ್ದು, ಆದ್ದರಿಂದ ಅವರಿಗೇ ತಿಳಿಯದು. ಆದ್ದರಿಂದ ಆತ್ಮನ ಕುರಿತು ತಿಳಿದುಕೊಳ್ಳುವುದು ಬಹಳ ಕಷ್ಟ, ಆದ್ದರಿಂದ ನಿನ್ನ ಕೋರಿಕೆಯನ್ನು ಬಿಟ್ಟುಬಿಡು ಎಂದನು.

ಈಗ ನಾನೂ ಕೂಡಾ ಈ ಆತ್ಮಜ್ಞಾನವನ್ನು ಹೇಳುತ್ತಾ ಇದ್ದರೆ, ಗೈಡಿಂಗ್‌ನಲ್ಲಿ ಬರುವವರಿಗೆಲ್ಲಾ ಏನು ಅರ್ಥವಾಗುತ್ತದೆ ಹೇಳಿರಿ? ಮೇಲಾಗಿ ಆತನು ಏನನ್ನು ಮಾತನಾಡಿದರೂ ಆತ್ಮ ಎನ್ನುತ್ತಾನೆ, ಆತ್ಮಜ್ಞಾನವೆನ್ನುತ್ತಾರೆಂದು ಹೇಳುತ್ತಾರೆ. ಆದ ಕಾರಣ ಇದರೊಳಗೆ ಬರುವುದಿಲ್ಲ, ಅವರಿಗೆ ಎಷ್ಟೋ ಕೋರಿಕೆಗಳು, ಎಷ್ಟೋ ಆಸೆಗಳು, ಎಷ್ಟೋ ಸಮಸ್ಯೆಗಳು ಇರುತ್ತವೆ. ಅವು ಹೋಗಬೇಕೇ ಹೊರತು ಆತ್ಮಜ್ಞಾನವನ್ನು ನಾವೇನು ಮಾಡಿಕೊಳ್ಳೋಣ ಎನ್ನುತ್ತಾರೆ, ಹಾಗೆ ಕೇಳಿದವರು ಸಾಕಷ್ಟು ಜನರಿದ್ದಾರೆ.

ಅದೇ ವಿಷಯವನ್ನು ನಚಿಕೇತನಿಗೆ ಬೋಧಿಸುವುದಕ್ಕೆ ಯಮಧರ್ಮರಾಜನೂ ಕೂಡಾ ಆಲೋಚಿಸಿದನು. ಆದರೆ ನಚಿಕೇತನು ಮಾತ್ರ ಅದಕ್ಕೆ ತಲೆಯನ್ನು ಅಡ್ಡವಾಗಿ ತೂಗಿದನು. ಹೀಗೆ ಅಂದನು, ಈ, ಮೃತ್ಯುದೇವತೆ! ಆ ಆತ್ಮವು ಸುಲಭವಾಗಿ ಎಲ್ಲರಿಗೆ ತಿಳಿಯಲು ಅಸಾಧ್ಯವೆಂದು, ದೇವತೆಗಳು ಕೂಡಾ ಇದರ ವಿಷಯದಲ್ಲಿ ಸಂದೇಹಿಸಿದರೆಂದು ನೀವೇ ಹೇಳುತ್ತಿದ್ದೀರಿ. ಇದನ್ನು ಆಧರಿಸಿ ನಾನು ಕೋರಿದ ಈ ವರಕ್ಕೆ ಸಮಾನವಾದದ್ದು ಯಾವುದೂ ಇಲ್ಲವೆಂಬುದನ್ನು ನಾನು ಗ್ರಹಿಸಿದೆನು. ಆದ ಕಾರಣ ಇಂತಹ ವಿಷಯಗಳನ್ನು ಹೇಳಬಲ್ಲಂತಹ ಸಮರ್ಥನು ನಿನ್ನ ಹೊರತು ಬೇರೊಬ್ಬರು ನನಗೆ ಲಭಿಸರು. ಆದ್ದರಿಂದ ನೀನು ಈ ವಿಷಯವನ್ನೇ ನನಗೆ ಹೇಳೆಂದು ಪಟ್ಟುಹಿಡಿದನು. ಆದರೂ ಸರಿ ಯಮನು ಇನ್ನೂ ಪರೀಕ್ಷಿಸಬಯಸಿದನು. ಆಗ ಯಮನು ನಚಿಕೇತಾ, ದುರ್ಲಭವಾದ ಆತ್ಮ ತತ್ವದ ಹೊರತು ಇನ್ನು ಏನನ್ನಾದರೂ ಕೋರಿಕೋ! ದೀರ್ಘಾಯುಷಿಗಳಾದ ಮಕ್ಕಳನ್ನು, ಮೊಮ್ಮಕ್ಕಳನ್ನು, ಆನೆಗಳನ್ನು, ಕುದುರೆಗಳನ್ನು, ಆಕಳು ಮೊದಲಾದವುಗಳನ್ನು, ಅಷ್ಟೇ ಅಲ್ಲ ಈ ಭೂಮಂಡಲವನ್ನೆಲ್ಲಾ ಕೋರಿಕೋ,

ಅಷ್ಟೇ ಅಲ್ಲ, ಎಷ್ಟು ವರ್ಷಗಳು ಬದುಕಬೇಕೆಂದರೆ ಅಷ್ಟು ವರ್ಷ ಜೀವಿಸು. ಅಪಾರವಾದ ಧನವನ್ನು. ಚಿರಂಜೀವತ್ವವನ್ನು ಕೋರಿಕೋ, ಭೂಲೋಕದಲ್ಲಿ ಮಾನವರು ಹೊಂದಬೇಕೆಂದು ಆತುರತೆಯ ದಿವ್ಯವಾದ ಕೋರಿಕೆಗಳನ್ನೆಲ್ಲಾ ಕೋರಿಕೋ ಎಂದನು. ಅವೆಲ್ಲವುಗಳನ್ನು ಅನುಭವಿಸುವವನಂತೆ ಮಾಡುತ್ತೇನೆ. ಮಾನವ ಲೋಕದಲ್ಲಿ ಯಾವ ಯಾವ ಕೋರಿಕೆಗಳು ದುರ್ಲಭವೋ ಅವೆಲ್ಲವುಗಳನ್ನು ಕೊಡುತ್ತೇನೆ, ಅನುಭವಿಸು ಎಚಿದನು.

ಯಮನು ಇನ್ನು ಏನು ಹೇಳಿದನೆಂದರೆ, ಅಷ್ಟೇ ಅಲ್ಲ ಮಾನವರು ಹೊಂದಲು ಅಸಾಧ್ಯವಾದ ಸುಂದರೀ ಮಣಿಗಳನ್ನು ಕೊಡುತ್ತೇನೆ ತೆಗೆದುಕೋ, ಅನುಭವಿಸಾಗಲಿ, ಮೃತ್ಯು ಸಂಬಂಧವಾದ ಆತ್ಮವಿದ್ಯೆಯನ್ನು ಮಾತ್ರ ಕೋರಬೇಡ ಎಂದನು. ಈಗ ಒಂದು ಬಾರಿ ಆಲೋಚಿಸಿರಿ, ಹೀಗೆ ಎಷ್ಟು ಪ್ರಲೋಭನೆಗಳನ್ನು ಇಟ್ಟರೂ ನಚಿಕೇತನು ಚಂಚಲಗೊಳ್ಳಲಿಲ್ಲ. ಇದನ್ನಾಧರಿಸಿ ಒಂದು ಬಾರಿ ಆತ್ಮವಿದ್ಯೆಯು ದುರ್ಲಭವೆಂದು ಹೇಳುತ್ತಿದ್ದಾನೆಂದರೆ ಅದು ಎಷ್ಟು ಶ್ರೇಷ್ಠವಾದದ್ದೋ ಅರ್ಥಮಾಡಿಕೊಳ್ಳಿ. ಈಗ ನೀವೆಲ್ಲಾ ಆ ವಿದ್ಯೆಯನ್ನೇ ಅಭ್ಯಾಸಿಸುತ್ತಿದ್ದೀರೆಂದು ನೆನಪಿಟ್ಟುಕೊಳ್ಳಿ. ಯಾವುದು ದುರ್ಲಭವೆಂದನೋ! ಈಗ ಆ ವಿದ್ಯೆಯನ್ನೇ ನೀವು ಪತ್ರೀಜಿಯವರ ಮೂಲಕ ಹೊಂದಿ ಅಭ್ಯಸಿಸುತ್ತಿದ್ದೀರಿ, ಎಷ್ಟು ಅದೃಷ್ಟವಂತರೋ! ಆಲೋಚಿಸಿರಿ!

ಆಗ ನಚಿಕೇತನು ಯಮಧರ್ಮರಾಜನೊಂದಿಗೆ ಏನೆಂದನೆಂದರೆ, ಓ ಯಮಧರ್ಮರಾಜಾ! ನೀನು ಹೇಳಿದ ಈ ಪ್ರಾಪಂಚಿಕ ಪದಾರ್ಥಗಳೆಲ್ಲವೂ ನಾಳೆ ಇರುವಂತಹವುಗಳಲ್ಲ, ಅವೆಲ್ಲಾ ನಶಿಸಿ ಹೋಗುವಂತವೇ. ಅಷ್ಟೇ ಅಲ್ಲ ಅವೆಲ್ಲವೂ ಇಂದ್ರಿಯ ಸಾಮರ್ಥ್ಯಗಳನ್ನು ನಾಶಪಡಿಸುವಂತವೇ. ಹಾಗೆ ನಶಿಸುವ ಸ್ವಭಾವವುಳ್ಳಂತಹವುಗಳನ್ನೆಲ್ಲಾ ನೀನೇ ತೆಗೆದುಕೋ. ನನಗೆ ಮಾತ್ರ ಬೇಡ. ನೀನು ಹೇಳುವ ಭೋಗಗಳೊಂದಿಗೆ ಮಾನವನು ತೃಪ್ತಿ ಪಡಲಾರನು. ಇವೆಲ್ಲವು ನೀನು ನನಗೆ ಎಷ್ಟು ಕಾಲದವರೆಗೆ ಅನುಕೂಲವಾಗಿರುವೆಯೋ ಅಷ್ಟು ಕಾಲ ಮಾತ್ರ ಇರುತ್ತವೆ. ಆ ಮೇಲೆ ನನ್ನನ್ನು ನೀನು ಕಬಳಿಸಿದರೂ ಅಂದರೆ ನುಂಗಿದರೂ ಅಂದರೆ ಯಾವುದಾದರೂ ಭೂಕಂಪಗಳು ಬಂದಾಗ ಇವೆಲ್ಲವು ಇರುವುದಿಲ್ಲವಲ್ಲ? ಆದ್ದರಿಂದ ಬಹಳ ದೃಢವಾಗಿ ನನಗೆ ಮರಣಾನಂತರ ವಿಷಯಗಳಾದಂತಹ ಆತ್ಮವಿದ್ಯೆಯೇ ಬೇಕೆಂದನು.

ನಚಿಕೇತನು ಇನ್ನೂ ಏನೆಂದನೆಂದರೆ, ಈ ಶರೀರ ಸಾಂಗತ್ಯದಿಂದ ಉಂಟಾದಂತಹ ಸುಖಗಳು ಶಾಶ್ವತವಲ್ಲವೆಂದು, ಇವುಗಳು ದುಃಖಕ್ಕೆ ಮೂಲವೆಂದು ತಿಳಿದುಕೊಂಡು ಅಂತಹ ಜೀವನವನ್ನು ಯಾರು ಕೋರುತ್ತಾರೆ, ಕೋರುವುದಿಲ್ಲ.

ಓ ಮೃತ್ಯು ದೇವತೆಯೇ! ನಿನ್ನ ಪ್ರಲೋಭನೆಗಳನ್ನು ಬಿಟ್ಟು ಮರಣಾನಂತರ ಆತ್ಮ ಇದೆಯಾ? ಇಲ್ಲಾ? ಎಂಬ ಸಂಶಯಗಳಿಗೆ ಸಮಾಧಾನವನ್ನು, ರಹಸ್ಯಮಯವಾದ ಆತ್ಮಜ್ಞಾನವನ್ನು ಬೋಧಿಸು, ಬೇರೆ ವರವು ನನಗೆ ಬೇಡ, ಬೇಡವೆಂದರೆ ಬೇಡ ಎಂದನು.

ಈ ವಿಧವಾಗಿ ನಚಿಕೇತನು ಬಗ್ಗದೇ, ಪ್ರಭಾವಕ್ಕೆ ಒಳಗಾಗದೇ ಆತ್ಮಜ್ಞಾನವನ್ನೇ ಕೋರಿದ್ದರಿಂದ ಯಮನು ಬೋಧಿಸದೇ ಇರಲು ತಪ್ಪಲಿಲ್ಲ. ಯಮನು ನಚಿಕೇತನ ಹಠಕ್ಕೆ, ಛಲಕ್ಕೆ ಇನ್ನೇನು ಮಾಡಲಾರದೇ ಹೋದನು.

*** ***

> ಆತ್ಮಜ್ಞಾನಿಗೆ ಸ್ವ–ಪರ ಬೇಧಗಳು,
> ಅಸೂಯೆ, ದ್ವೇಷಗಳು ಸಂಪೂರ್ಣವಾಗಿ ಇರುವುದಿಲ್ಲ.
> **–ಮೇಡಂ ಬ್ಲ್ಯಾವಟ್ಸ್ಕಿ**

# 03.

ಹಾಗೇ ಎಷ್ಟು ರೀತಿಗಳಲ್ಲಿ ಹೇಳಿದರೂ ನಚಿಕೇತನು ಕೇಳದೇ ಹೋದಾಗ ಯಮನು ನೀನು ಯಾವುದಕ್ಕೂ ಬಗ್ಗಲಿಲ್ಲ, ಎಷ್ಟು ರೀತಿಯ ಪ್ರಲೋಭನೆಗಳನ್ನು ಇಟ್ಟರೂ ನೀನು ಆಕರ್ಷಿತನಾಗಲಿಲ್ಲ, ಎಷ್ಟು ಹೊತ್ತೂ ಆ ಜ್ಞಾನವನ್ನೇ ನೀನು ಕೋರಿದೆ, ನಿನ್ನ ಜನ್ಮವು ಧನ್ಯವಾಯಿತೆಂದು ಹೇಳಿ, ಈ ವಿಧವಾಗಿ ಹೇಳಲು ಪ್ರಾರಂಭಿಸಿದನು.

"ಲೋಕದಲ್ಲಿ ಶ್ರೇಯಸ್ಸು, ಪ್ರೇಯಸ್ಸು" ಎನ್ನುವ ಎರಡು ಮಾರ್ಗಗಳು ಇವೆ, ಪ್ರೇಯಸ್ಸು ಎಂಬುದು ಪ್ರಪಂಚಕ್ಕೆ ಸಂಬಂಧಿಸಿದ್ದು, ಶ್ರೇಯಸ್ಸು ಎಂಬುದು ಆ ಸೃಷ್ಟಿಕರ್ತನಾದ ಪರಬ್ರಹ್ಮನಿಗೆ ಸಂಬಂಧಿಸಿದ್ದು ಎಂದು ಹೇಳುತ್ತಾ ಪ್ರೇಯಸ್ಸು ಅಂದರೆ ಸೃಷ್ಟಿಸಲ್ಪಟ್ಟಿರುವುದಕ್ಕೆ ಸಂಬಂಧಿಸಿದ್ದು, ಶ್ರೇಯಸ್ಸು ಅಂದರೆ ಸೃಷ್ಟಿ ಮಾಡಿದವನಿಗೆ ಸಂಬಂಧಿಸಿದ್ದು ಎಂದು ಹೇಳಿದನು.

ಯಮನು ಇನ್ನು ಏನನ್ನು ಹೇಳಿದನೆಂದರೆ? ಪ್ರೇಯಸ್ಸು ಅಂದರೆ "ಅವಿದ್ಯೆ", ಶ್ರೇಯಸ್ಸು ಅಂದರೆ "ವಿದ್ಯೆ" ಎಂದು ಕರೆಯುತ್ತಾರೆ. ಈ ಎರಡೂ ಅಂದರೆ ಅವಿದ್ಯೆ, ವಿದ್ಯೆ

ಪರಸ್ಪರ ವಿರುದ್ಧವಾದವು, ವಿರುದ್ಧವಾದ ಫಲಿತಾಂಶಗಳನ್ನು ಕೊಡುತ್ತವೆ. ಅವಿದ್ಯೆಯು ಒಂದು ರೀತಿಯಾದ ಫಲವನ್ನು ಕೊಟ್ಟರೆ 'ವಿದ್ಯೆ'ಯು ಇನ್ನೊಂದು ರೀತಿಯಾದ ಫಲವನ್ನು ಕೊಡುತ್ತದೆ ಎಂದು ಹೇಳಿದನು.

ಅವಿದ್ಯೆಯು ಪ್ರೇಯಸ್ಸಿಗೆ ಸಂಬಂಧಿಸಿದ್ದು, ವಿದ್ಯೆ ಶ್ರೇಯಸ್ಸಿಗೆ ಸಂಬಂಧಿಸಿದ್ದು ಎಂದು ಹೇಳುತ್ತಾ ನೀನು ಶ್ರೇಯೋ ಮಾರ್ಗವನ್ನು ಕೋರಿಕೊಂಡೆ ಅಂದರೆ ವಿದ್ಯೆಯನ್ನು ಕೋರಿಕೆ ಕೊಂಡಿರುವೆ. ನೀನು ನಿಜವಾಗಿಯೂ ಧೀರನು. ಏಕೆಂದರೆ ಲೋಕದಲ್ಲಿ ಹೆಚ್ಚಾಗಿ ಪ್ರೇಯೋ ಮಾರ್ಗವನ್ನು ಅಂದರೆ ಅವಿದ್ಯೆಯನ್ನು ಕೋರಿಕೊಳ್ಳುತ್ತಿರುತ್ತಾರೆ, ಈ ಪ್ರೇಯೋ ಮಾರ್ಗದಲ್ಲಿ ಲಭಿಸುವ ಸುಖಗಳನ್ನೇ ಕೋರಿಕೊಳ್ಳುತ್ತಾರೆ. ಅವರಿಗೆ, ಯಾವುದು ದುಃಖಕ್ಕೆ ದಾರಿಯಾಗುತ್ತದೆಂದು ತಿಳಿಯದು, ಮೇಲಾಗಿ ತಾವೇ ಪಂಡಿತರೆಂದು ಹೇಳಿ ಭ್ರಮಿಸುತ್ತಿರುತ್ತಾರೆ, ಇವರು ಅನೇಕ ರೀತಿಯ ಪ್ರವೃತ್ತಿಗಳನ್ನು ಹೊಂದಿರುತ್ತಾರೆ.

ಅಂದರೆ ಸಂಪಾದಿಸುವುದಕ್ಕೆ ತರತರದ ಪ್ರಯತ್ನಗಳನ್ನು ಮಾಡುತ್ತಾರೆ. ಕೆಲವರು ವ್ಯಾಪಾರವನ್ನು ಮಾಡಿ ಸಂಪಾದಿಸಿ, ಭೋಗಗಳನ್ನು ಅನುಭವಿಸಬೇಕೆಂದುಕೊಳ್ಳುತ್ತಾರೆ, ಕೆಲವರು ರಾಜಕೀಂಯುದಲ್ಲಿ ಪ್ರವೇಶಿಸಿ ಚೆನ್ನಾಗಿ ಸಂಪಾದಿಸಿ ಅನುಭವಿಸಬೇಕೆಂದುಕೊಳ್ಳುತ್ತಾರೆ. ಇನ್ನು ಕೆಲವರು ಯಾವುದರಲ್ಲಾದರೂ ನೈಪುಣ್ಯವನ್ನು ಸಂಪಾದಿಸಿ ಅದರಲ್ಲಿ ಸಂಪಾದಿಸಬೇಕೆಂದುಕೊಳ್ಳುತ್ತಾರೆ. ಇನ್ನು ಕೆಲವರು ಉನ್ನತವಾದ ಹುದ್ದೆಯನ್ನು ಸಂಪಾದಿಸಬೇಕೆಂದುಕೊಳ್ಳುತ್ತಾರೆ. ಹಾಗೆ ಅವರ ಜೀವನವನ್ನೆಲ್ಲಾ ವಿಶ್ರಾಂತಿ ಇಲ್ಲದೆಯೇ ನಡೆಸುತ್ತಾ ಇರುತ್ತಾರೆ.

ಆದರೆ ಶ್ರೇಯೋ ಮಾರ್ಗವು ಪರಬ್ರಹ್ಮನಿಗೆ ಸಂಬಂಧಿಸಿದ್ದು, ಪರಬ್ರಹ್ಮನನ್ನು ಹೊಂದುವುದು, ಅಂದರೆ ಆತ್ಮಕ್ಕೆ ಸಂಬಂಧಿಸಿದ್ದು, ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದು ಎಂದನು. ಈಗ ಯಾವುದಾದರೆ ಯಮಧರ್ಮ ರಾಜನು ಹೇಳುತ್ತಿದ್ದಾನೋ ಆ ಸಾಧನೆಯನ್ನೇ ಪತ್ರೀಜಿಯವರು ನಮಗೆ ಕೊಟ್ಟಿದ್ದಾರೆ.

ಯಮನು ಇನ್ನು "ಆ" "ಬ್ರಹ್ಮಂ" ವೈಚಾರಿಕತೆಗೆ ತರ್ಕಕ್ಕೆ ನಿಲುಕುವುದಿಲ್ಲ, ಎಂತಹ ಕವಿಗಳು ಹೇಳಿದರೂ, ಏನು ಹೇಳಿದರೂ, ಅಷ್ಟು ಸುಲಭವೇನಲ್ಲ. ಆತ್ಮ ನಿಗೂಢ ಅಂದರೆ ಬಹಳ ರಹಸ್ಯವಾದದ್ದು. ಬಹಳಷ್ಟು ಜನರು ಆತ್ಮ ತತ್ವವನ್ನು ಕುರಿತು ಕೇಳುವುದಕ್ಕೆ ಬಯಸುವುದಿಲ್ಲ, ಅಂದರೆ ಅವರಿಗೆ ಆ ಭಗವಂತನ ಕುರಿತು, ಆ ಪರಬ್ರಹ್ಮನ ಕುರಿತು ತಿಳಿದುಕೊಳ್ಳುವ ಅರ್ಹತೆ ಇಲ್ಲವೆಂದು ಹೇಳಿದನು. ಅಷ್ಟೇ ಅಲ್ಲ, ಆ ಮಾನವರಲ್ಲಿ ಎಷ್ಟೋ ಜನರು ಈ "ಆತ್ಮತತ್ವವನ್ನು" ಕೇಳಬೇಕೆಂದರೂ ಹೇಳುವವರು ದೊರಕುವುದೂ ಕೂಡಾ ಕಷ್ಟವೇ, ಆಶ್ಚರ್ಯವೇ ಎಂದನು ಯಮನು.

ಆದರೆ ಇದು ನನ್ನ ಜೀವನದಲ್ಲಿ ನಡೆಯಿತು. ಪತ್ರೀಜಿಯವರು ಪರಿಚಯವಾಗದಿದ್ದಾಗ ಈ ಧ್ಯಾನದ ಕುರಿತು ತಿಳಿದುಕೊಳ್ಳಬೇಕೆಂದು 2–3 ವರ್ಷಗಳ ಮುಂಚಿನಿಂದಲೂ ಎಷ್ಟೋ ಹಂಬಲಿಸುತ್ತಿದ್ದೆನು. ಎಲ್ಲಿಗೆ ಹೋದರೂ, ಯಾವ ಆಶ್ರಮಕ್ಕೆ ಹೋದರೂ, ಯಾವ ಪ್ರದೇಶಕ್ಕೆ ಹೋದರೂ ಕೇಳುತ್ತಿದ್ದೆನು. ಧ್ಯಾನವನ್ನು ಹೇಗೆ ಮಾಡಬೇಕೋ ಹೇಳಿರಿ? ಮಾಡಿದರೆ ಏನಾಗುತ್ತದೆ ಹೇಳಿರಿ? ಧ್ಯಾನವು ಶ್ರೇಷ್ಠವಾದದ್ದು ಎಂಬ ವಿಷಯ ನನಗೆ ಗೊತ್ತು, ಆದರೆ ಅದರ ಕುರಿತು ತಿಳುವಳಿಕೆ ಇಲ್ಲ ಎಂದು ಕೇಳುತ್ತಿದ್ದೆನು..... ಆದರೆ ನನಗೆ ಸಂತೃಪ್ತಿಕರವಾಗಿ ಯಾರೂ ಹೇಳಲಿಲ್ಲ, ಹೇಳುವವನು ಸಿಗಲಿಲ್ಲ. ಕೊನೆಗೆ ಪತ್ರೀಜಿಯವರು ಲಭಿಸಿದರು, ಆಗ ನಾನು ಅಂದುಕೊಂಡದ್ದು ಲಭಿಸಿತೆಂದು ತೃಪ್ತಿಪಟ್ಟೆನು.

ಯಮನು ಹೇಳುವ ಉಪದೇಶವನ್ನು ಗ್ರಹಿಸಿ ಆಚರಣೆಯಲ್ಲಿ ಇಡುವವರು ಬಹಳ ವಿರಳ. ಅದನ್ನು ಮತ್ತೇ ಮತ್ತೇ ಮನನ ಮಾಡಿಕೊಳ್ಳುತ್ತಾ ಆಚರಿಸುತ್ತಿರುವವರು ಕೂಡಾ ಬಹಳ ಕಡಿಮೆ ಜನರಿರುತ್ತಾರೆ.

ಈಗ ನಾನೇ ಎಷ್ಟೋ ಕಡೆಗೆ ಹೋಗುತ್ತಿದ್ದೇನೆ, ಹೋಗಿ ಇದನ್ನೇ ಹೇಳುತ್ತಿದ್ದೇನೆ. ಪ್ರತಿದಿನ ಧ್ಯಾನವನ್ನು ಮಾಡಿರಿ, ಆ ಪರಬ್ರಹ್ಮನನ್ನು ಹೊಂದಿರಿ, ಆತ್ಮ ಸಾಕ್ಷಾತ್ಕಾರವನ್ನು ಹೊಂದಿರಿ, ದುಃಖದಿಂದ ಶಾಶ್ವತವಾಗಿ ಹೊರಬನ್ನಿರಿ, ನಿಮ್ಮ ಜೀವನವನ್ನು ಧನ್ಯ ಮಾಡಿಕೊಳ್ಳಿರಿ ಎಂದು ಹೇಳುತ್ತಿದ್ದೇನೆ, ಹೇಳುತ್ತಿದ್ದಾರೆ, ಕೇಳುತ್ತಿದ್ದಾರೆ ಆದರೆ! ಆಚರಿಸುವವರು ಬಹಳ ಕಡಿಮೆ.

ಯಮಧರ್ಮ ರಾಜು ಹೇಳಿದ ವಿಧವಾಗಿ ಶ್ರವಣ, ಮನನ, ನಿಧಿಧ್ಯಾಸನ ಮಾಡುವವರು ಎಷ್ಟು ಜನರಿದ್ದಾರೋ ಒಂದು ಬಾರಿ ಆಲೋಚಿಸಿರಿ, ಏನೋ ಕಾರಣವನ್ನು ಹೇಳುತ್ತಾರಾಗಲಿ ಮಾಡುವುದಿಲ್ಲ. ಅಷ್ಟು ಶ್ರೇಷ್ಠವಾದ "ಆತ್ಮವಿದ್ಯೆ, ಬ್ರಹ್ಮವಿದ್ಯೆ"ಯನ್ನು ಬೋಧಿಸುತ್ತಾ ಇದ್ದರೆ ಕೇಳುವುದಕ್ಕೆ ಆಸಕ್ತಿಯನ್ನು ತೋರಿಸುವವರೂ ಕೂಡಾ ಬಹಳ ಕಡಿಮೆ ಜನ.

ಪ್ರಪಂಚದಲ್ಲಿ ಕೋಟ್ಯಾನುಕೋಟಿ ಮಾನವರಿದ್ದರೂ ಈ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಕೂಡಾ ಅರ್ಹತೆ ಇಲ್ಲ. ಒಂದು ವೇಳೆ ತಿಳಿದುಕೊಳ್ಳಬೇಕೆಂದು ಹಂಬಲಿಸಿದರೂ, ಹೇಳುವವರು ಸಿಗುವುದಿಲ್ಲ, ಹೇಳುವವನು ದೊರಕಿದರೂ, ಆಚರಿಸುವವನು ಇಲ್ಲ.

ನೋಡಿರಿ, ನಿಮ್ಮ ಮನೆಯಲ್ಲಿ ನಿಮ್ಮ ಗಂಡನು ಮಾಡದೇ ಹೋಗಬಹುದು, ನಿಮ್ಮ ಹೆಂಡತಿ ಮಾಡದೇ ಹೊಗಬಹುದು, ಕಾರಣ ಅವರಿಗೆ ಅರ್ಹತೆ ಇಲ್ಲ. ಆದ್ದರಿಂದ ಈ ಆತ್ಮ

ತತ್ವವನ್ನು ಪ್ರಾಪಂಚಿಕ ಬುದ್ಧಿಯುಳ್ಳವರು ಉಪದೇಶಿಸಲಾರರು, ಯಾರೆಂದರೆ ಅವರು ಉಪದೇಶಿಸಲಾರರು.

ಹಾಗೆಯೇ ನಮ್ಮ ಸೊಸೈಟಿಯಲ್ಲಿ ಎಷ್ಟೋ ಜನ ಮಾಸ್ಟರ್‌ಗಳಿದ್ದಾರೆ. ಆದರೆ ಆತ್ಮನ ಕುರಿತು, ಆತ್ಮಜ್ಞಾನವನ್ನು ಕುರಿತು ಹೇಳುವುದಿಲ್ಲ, ರೋಗಗಳು ಸಮಸ್ಯೆಗಳು, ಕೋರಿಕೆಗಳು, ಅನುಭವಗಳ ಕುರಿತೇ ಹೇಳುತ್ತಾರೆ.

ಆದಕಾರಣ ಯಮನು ಇನ್ನು ಏನೆಂದನೆಂದರೆ? **'ಓ, ನಚಿಕೇತ' ನನ್ನಂತಹವನಿಂದ ಉಪದೇಶಿಸಲ್ಪಟ್ಟ ಈ ಆತ್ಮ ತತ್ವದಲ್ಲಿ ಸಂಶಯವಿಲ್ಲ ಎಂದು ಹೇಳಿದನು. ಇನ್ನು ಏನು ಹೇಳಿದನೆಂದರೆ? ಈ ಆತ್ಮದರ್ಶನವೆಂದರೆ ಆತ್ಮ ಸಾಕ್ಷಾತ್ಕಾರ ಬಹಳ ಕಷ್ಟ ಸಾಧ್ಯ. ಧ್ಯಾನಶೀಲನಾದವನು ಅಂದರೆ ಯಾವಾಗಲೂ ಧ್ಯಾನ ಮಾಡುವಂತ ಧೀರನು, ಶಬ್ದ, ಸ್ಪರ್ಶಾದಿ ವಿಷಯಗಳಿಂದ ಇಂದ್ರಿಯಗಳನ್ನು ಮರಳಿಸಿ ಆ ಪರಮಾತ್ಮನನ್ನು ತಿಳಿದುಕೊಳ್ಳಬೇಕೆಂಬ ಹಂಬಲವಿರುವವನು, ಆ ವಿಷಯಗಳ ಬಗ್ಗೆ ವಿರಕ್ತಿಯುಳ್ಳವರಾಗಿ ಇರುವವರಿಗೆ ಮಾತ್ರವೇ ಸಾಧ್ಯವಾಗುತ್ತದೆ. ಅಂತಹವರಿಗೆ ಅವುಗಳ ಮೇಲೆ ಮಮಕಾರ ಇರುವುದಿಲ್ಲ. ಅವುಗಳಿಗೆ ಬಹಳ ಕಡಿಮೆ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ಎಷ್ಟು ಹೊತ್ತೂ ತನ್ನ ಮನಸ್ಸನ್ನು ಆತ್ಮದ ಕಡೆಗೆ ಇಡುತ್ತಾರೆಂದು ಯಮನು ಬೋಧಿಸಿದನು.**

ಹಾಗೆ ಮಾಡಬೇಕೆಂದರೆ **"ಶ್ವಾಸದ ಮೇಲೆ ಗಮನವಿಟ್ಟು ಮನಸ್ಸನ್ನು ಅಂತರ್ಮುಖ ಮಾಡಿದರೆ ಆತ್ಮದ ಕಡೆಗೆ ಇರುತ್ತದೆ."** ಆದ್ದರಿಂದ ಸಮಯ ಸಿಕ್ಕರೆ ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳಬೇಕು, ಆಂತಹವನಿಗೆ ಹರ್ಷ, ಶೋಕಗಳಿರುವುದಿಲ್ಲ, ಏನು ನಡೆದರೂ ಲೆಕ್ಕ ಮಾಡುವುದಿಲ್ಲ, ತನ್ನ ಕೆಲಸವನ್ನು ತಾನು ಮಾಡಿಕೊಳ್ಳುತ್ತಾ ಹೋಗುತ್ತಿರುತ್ತಾನೆ. ಅವನಿಗೆ ಪೆಟ್ಟಾದರೂ ಲೆಕ್ಕಿಸನು, ಕಷ್ಟ ಬಂದರೂ ಲೆಕ್ಕಿಸನು, ಸಂಸಾರದಲ್ಲಿ ಏನು ನಡೆದರೂ ಲೆಕ್ಕ ಮಾಡನು, ಆದರೆ ತನಗೆ ಬೇಕಾದವುಗಳನ್ನೆಲ್ಲಾ ನೋಡಿಕೊಳ್ಳುತ್ತಾನೆ. ಯಮನು ಇನ್ನೂ ಏನೆಂದನೆಂದರೆ **"ನಾನು ಹೇಳುವ ಆತ್ಮತತ್ವವನ್ನು ಕೇಳಿದಂತಹವನು ಆಚರಿಸಿದರೆ ಸೂಕ್ಷ್ಮಾತಿ ಸೂಕ್ಷ್ಮವಾದ ಆತ್ಮನನ್ನು ಹೊಂದಿ ಆನಂದಿಸುತ್ತಾನೆ."**

*** ***

**"ಆನಾಪಾನಸತಿಯೆಂದರೆ ಶ್ವಾಸದ ಮೇಲೆ ಗಮನ"**

# 04.

ಯಮಧರ್ಮರಾಜು ಇನ್ನು ಏನೆಂದನೆಂದರೆ?

**"ಋಗ್ವೇದಾದಿಗಳೆಲ್ಲವು ಯಾವ ಪರಮ ಪದವನ್ನು ಹೊಂದಬೇಕಾದದ್ದೆಂದು ಬೋಧಿಸುತ್ತಿವೆಯೋ! ಯಾವುದನ್ನು ಹೊಂದುವುದಕ್ಕೆ ತಪಸ್ಸು ಮಾಡಲ್ಪಡುತ್ತಿವೆಯೋ! ಆ ಪರಮ ಪದವು ಆ ಪರಮಾರ್ಥವು ಓಂ ಶಬ್ದ ವಾಕ್ಯ, ಓಂ ಎಂಬ ಈ ತತ್ವ, ನಾಶವಿಲ್ಲದ ಪರಬ್ರಹ್ಮ"** ಎಂದನು.

**"ಓಂ" ಅಂದರೂ, 'ಪರಬ್ರಹ್ಮ'ವೆಂದರೂ ಒಂದೇ. ಈ ನಾಶರಹಿತ ಪ್ರಣವವನ್ನು ತಿಳಿದುಕೊಂಡು ಉಪಾಸಿಸುವವನು ಯಾವುದನ್ನು ಕೋರುತ್ತಾನೋ ಅದು ಆತನಿಗೆ ಲಭಿಸುತ್ತದೆ. ಋಗ್ವೇದಾದಿಗಳು ಇವೆಲ್ಲವೂ ಕೂಡಾ ಯಾವ ಪರಮ ಪದವನ್ನು ಹೊಂದಬೇಕಾದದೆಂದು ಹೆಸರಿಸುತ್ತಿವೆಯೋ! ಬೋಧಿಸುತ್ತಿವೆಯೋ! ಅದನ್ನು ಹೊಂದಬೇಕು.**

ಪರಮ ಪದ ಸೋಪಾನ ಪಟವೆಂದು ಹೇಳಿ ನಾವು ಚಿಕ್ಕವರಿದ್ದಾಗ ಆಡಿಕೊಳ್ಳುತ್ತಿದ್ದೆವು. ಆ ಪರಮ ಪದ ಸೋಪಾನ ಪಟದಲ್ಲಿ ಏಣಿಗಳಿರುತ್ತವೆ, ಹಾವುಗಳೂ ಇರುತ್ತವೆ. ಆಡುವಾಗ ಇಬ್ಬರೋ, ಮೂವರೋ, ನಾಲ್ವರೋ ಕುಳಿತು ಆಡುತ್ತಿರುತ್ತಾರೆ. ಅವರು ಏಣಿ ಬಂದಾಗ ಮೇಲೆ ಹೋಗುತ್ತಾರೆ. ಮತ್ತೆ ಹಾವಿನ ಬಳಿಗೆ ಬಂದಾಗ ಕೆಳಗಿಳಿದು ಹೋಗುತ್ತಿರುತ್ತಾರೆ.

ಹಾಗೆ ಆ ಪರಮಪದ ಸೋಪಾನ ಪಟದ ಕೊನೆಗೆ ಬರುವುದರೊಳಗೆ ಒಂದು ದೊಡ್ಡ ಹಾವು ಇರುತ್ತದೆ, ಎಷ್ಟು ಮೇಲೆ ಹೋದರೂ ಆ ಹಾವಿನ ಬಳಿಗೆ ಹೋದನೇ! ಮತ್ತೇ ಮೊದಲಿಗೆ ಬರುತ್ತಾನೆ. ಆ ದೊಡ್ಡ ಹಾವನ್ನು ದಾಟಿದನೇ! ಆ ಪರಮ ಪದವನ್ನು ಸೇರಿಕೊಂಡವನಾಗುತ್ತಾನೆ. ಅವನು ಇನ್ನು ಆ ಆಟದಲ್ಲಿ ಭಾಗವಹಿಸಬೇಕಾದ ಕೆಲಸವಿಲ್ಲ, ಅಂದರೆ ಮತ್ತೆ ಜನ್ಮ ತೆಗೆದುಕೊಳ್ಳಬೇಕಾದ ಕೆಲಸವಿಲ್ಲವೆಂದು ಅರ್ಥ, ಅದು ಆ ಆಟವೊಂದರ ಉದ್ದೇಶ.

ಈ ಜನ್ಮದಲ್ಲಿ ನೀವು ಪುಣ್ಯವನ್ನು ಮಾಡಿದರೆ ಭೋಗಗಳನ್ನು ಅನುಭವಿಸುತ್ತೀರಿ, ಸ್ವಲ್ಪ ಉನ್ನತವಾದ ಸ್ಥಿತಿಯನ್ನು ಹೊಂದುತ್ತೀರಿ, ಅಂದರೆ ಏಣಿಯನ್ನು ಹತ್ತಿದಂತೆ ಆದರೆ

ಪಾಪಗಳನ್ನು ಮಾಡಿದರೆ ಕಷ್ಟಗಳ ಪಾಲಾಗುತ್ತೀರಿ. ದುಃಖಕ್ಕೆ ಒಳಗಾಗುತ್ತೀರಿ ಅಂದರೆ ಹಾವಿನ ಬಾಯಿಯಲ್ಲಿ ಬಿದ್ದಂತೆ. ಆದ್ದರಿಂದ ಹೀಗೆ ಬರುವುದು, ಹೋಗುವುದಲ್ಲ, ಅಂದರೆ ಹುಟ್ಟುವುದು ಸಾಯುವುದು ಅಲ್ಲ, ಹುಟ್ಟು–ಸಾವುಗಳಿಲ್ಲದ ಆ ಪರಮಪದಕ್ಕೆ ಸೇರಿಕೊಳ್ಳಬೇಕು ಅಂದರೆ ಸತ್ಯವನ್ನು ಸೇರಿಕೊಳ್ಳಬೇಕು.

ಅದನ್ನೇ ನಮಗೆ ಭಗವದ್ಗೀತೆಯಲ್ಲಿ ಕೂಡಾ ಶ್ರೀಕೃಷ್ಣನು ಹೇಳಿದ್ದಾನೆ.

**ಶ್ಲೋಕ ॥ ಆ ಬ್ರಹ್ಮಾ ಭುವನಾಲ್ಲೋಕ ಪುನರಾವರತ್ತಿ ನೋರ್ಜುನಾ ।**

**ಮಾಮು ಪೇತ್ಯಂತು ಕೌನ್ತೇಯ ಪುನರ್ಜನ್ಮ ನವಿದ್ಯತೇ ॥**

**ತಾತ್ಪರ್ಯ :** ಆ ಬ್ರಹ್ಮಲೋಕಗಳಂತಹ ಲೋಕಗಳಿಗೆ ಅಂದರೆ ಆ ತಪೋ ಲೋಕಗಳಿಗೆ ಸೇರಿಕೊಂಡರೂ! ಮತ್ತೆ ಭೂಮಿಯ ಮೇಲೆ ಬರುವೆ. ಆದರೆ ನಾನು ಇರುವಂತಹ ಸತ್ಯ ಲೋಕವನ್ನು ಸೇರಿಕೊಂಡರೆ ಮತ್ತೇ ಭೂಮಿಯ ಮೇಲೆ ತಿರುಗಿ ಬರುವುದಿಲ್ಲ.

ಆದ್ದರಿಂದ ಎಲ್ಲರು ಸತ್ಯಲೋಕವನ್ನು ಸೇರಿಕೊಳ್ಳುವ ಪ್ರಯತ್ನವನ್ನು ಮಾಡಬೇಕು. ಅದನ್ನೇ ನಚಿಕೇತನು ಕೋರಿಕೊಂಡನು. ನನಗೆ ಆ ಮಾರ್ಗವನ್ನೇ ಹೇಳು, ಆ ವಿದ್ಯೆಯನ್ನೇ ಬೋಧಿಸು, ಅದು ನನಗೆ ಬೇಕು, ಇವನ್ನೆಲ್ಲಾ ನಾನೇನು ಮಾಡಲಿ ಎಂದನು. ಮತ್ತೇ ನಾವು ಕೂಡಾ ಈಗ ಆ ವಿದ್ಯೆಯನ್ನೇ ಅಭ್ಯಸಿಸುತ್ತಿದ್ದೇವೆ, ಆ ಲಕ್ಷ್ಯವನ್ನು ಸೇರಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದೇವೆ.

ಅದಕ್ಕೆ ಷಿರಿಡಿ ಬಾಬಾ ಪ್ರೇಯೋ ಮಾರ್ಗವಲ್ಲ, ಶ್ರೇಯೋ ಮಾರ್ಗವೆಂದರು. ಅವರು ಪ್ರಿಯವಾದವುಗಳು ಅಂದರೆ ಈ ಸುಖಗಳನ್ನು ಭೋಗಗಳಂತವುಗಳನ್ನು ಹೊಂದುವುದಲ್ಲ, ಶ್ರೇಯಸ್ಕರವಾದವು ಅಂದರೆ ಆ ಪರಮ ಪದವನ್ನು ಸೇರಿಕೊಳ್ಳಬೇಕು, ಅಂದರೆ ಆ ಪರಮಾತ್ಮನನ್ನು ಹೊಂದಬೇಕೆಂದರು.

ಅಷ್ಟೇ ಅಲ್ಲ, ಯಾವುದನ್ನು ಹೊಂದುವುದಕ್ಕೆ ತಪಸ್ಸುಗಳು ಮಾಡಲ್ಪಡುತ್ತಿವೆಯೋ! ಎಷ್ಟೋ ಮಂದಿ ಋಷಿಗಳು, ಮಹರ್ಷಿಗಳು, ಯೋಗಿಗಳು, ಸಿದ್ಧರು, ಬಾಲ ಯೋಗಿಗಳು, ಅಂತಹವರೆಲ್ಲಾ ತಪಸ್ಸು ಮಾಡುತ್ತಿದ್ದಾರೋ, ಅದನ್ನೇ ಮಾಡಬೇಕು. ಅವರೆಲ್ಲಾ ಸಂಸಾರವನ್ನು ಸಂಪತ್ತುಗಳನ್ನೆಲ್ಲಾ ಬಿಟ್ಟು, ಹಿಮಾಲಯಗಳಿಗೋ, ಅಡವಿಗಳಲ್ಲೋ, ಆಶ್ರಮಗಳಿಗೋ ಹೋದವರೇ! ಅವರೆಲ್ಲರಿಗೂ ನಾನು ಪರಮಾತ್ಮನನ್ನು ಹೊಂದಬೇಕು, ನನಗಿನ್ನೇನು ಬೇಡ ಎನ್ನುವಂತ ಅಭಿಪ್ರಾಯವಿರುತ್ತಿತ್ತು. ಆದರೆ "ಸಂಸಾರದಲ್ಲಿರುತ್ತಾ, ಎಲ್ಲವನ್ನು ನೋಡಿಕೊಳ್ಳುತ್ತಾ, ಅಗತ್ಯಗಳಿಗೆ ಪರಿಮಿತವಾಗಿ ಆ ಪ್ರಯತ್ನವನ್ನು ಮಾಡಬೇಕು."

ಯಮಧರ್ಮರಾಜು ಏನು ಹೇಳಿದನೆಂದರೆ "ಓಂ ಶಬ್ದ ವಾಕ್ಯ ಅಂದರೆ ಆ ಪರಮಾತ್ಮ, ಆ ಓಂಕಾರ ಎರಡೂ ಒಂದೇ ಎಂದು" ಹೇಳಿದರು. ಅದಕ್ಕೆ ನೀವು ನೋಡಿರಿ ರಾಧಾಸ್ವಾಮಿ ಸತ್ಸಂಗದಲ್ಲಿ ನಾಮಂ ಎನ್ನುತ್ತಾರೆ.

'ನಾಮಂ' ಅಂದರೆ "ಓಂಕಾರ ನಾಮಂ" ನಾವಾಗಲಿ ಈ "ಶ್ವಾಸದ ಮೇಲೆ ಗಮನ" ಇಟ್ಟರೆ ಏನಾಗುತ್ತದೆ ಎಂದರೆ ಮನಸ್ಸು ನಿಶ್ಚಲವಾಗಿ, ನಿರ್ಮಲವಾಗಿ, ಅಂತರ್ ನಿಶ್ಶಬ್ಧವನ್ನು ಸಾಧಿಸುತ್ತೇವೆ. ಆ ಅಂತರ್‌ನಿಶ್ಶಬ್ದದಲ್ಲಿ ಕುಳಿತುಕೊಂಡಂತೆಲ್ಲಾ ಇನ್ನೂ ಪರಿ ನಿಶ್ಶಬ್ಧ ಸ್ಥಿತಿ, ನಿಧಾನವಾಗಿ ಮಹಾ ಪರಿ ನಿಶ್ಶಬ್ಧ ಸ್ಥಿತಿಯನ್ನು ಹೊಂದುತ್ತೇವೆ. ಅಂತಹ ಸ್ಥಿತಿಗೆ ಸೇರಿಕೊಂಡಾಗ ಅಂತರಂಗದಲ್ಲಿ ನಿರಂತರವೂ ಪ್ರತಿಧ್ವನಿಸುತ್ತಿರುವಂತಹ ಆ "ಓಂಕಾರ" ನಾದವನ್ನು ನೀವು ಕೇಳಬಲ್ಲವರಾಗುತ್ತೀರಿ. ಅದನ್ನು ಕೇಳಿದಿರಿ ಅಂದರೆ ನೀವು ಆತ್ಮಸಾಕ್ಷಾತ್ಕಾರಕ್ಕೆ ಬಹಳ ಹತ್ತಿರವಾಗಿ ಬಂದಿದ್ದೀರಿ ಎಂದು ಲೆಕ್ಕ. ಅಂದರೆ ನಂತರ ಆಗುವುದು ಆತ್ಮಸಾಕ್ಷಾತ್ಕಾರವೇ.

ಆದ್ದರಿಂದ ನೆನಪಿಟ್ಟುಕೊಳ್ಳಿ ಧ್ಯಾನವನ್ನು ಮಾಡುವವರು ತೀವ್ರಾತಿ ತೀವ್ರವಾದಂತಹ ಸಾಧನೆಯನ್ನು ಮಾಡುತ್ತಿದ್ದರೆ ಅವರು "ಆ ಓಂಕಾರ" ನಾದವನ್ನು ಕೇಳಬಲ್ಲವರಾಗುತ್ತಾರೆ. ಆದ್ದರಿಂದ ಈ ದೇಹದ ಒಳಗಡೆಯೇ ಆ "ಓಂಕಾರನಾದ" ವಿದೆಯೆಂದು ತಿಳಿದುಕೊಳ್ಳಬೇಕು, ಅಂದರೆ ಆ ಭಗವತ್ ಸ್ವರೂಪನಿದ್ದಾನೆ ಎಂದು ತಿಳಿದುಕೊಳ್ಳಬೇಕು.

ಅದಕ್ಕೆ "ದೇಹವನ್ನು ದೇವಾಲಯದೊಂದಿಗೆ" ಹೋಲಿಸಿದ್ದಾರೆ. ಈ ವಿಷಯವನ್ನು ಹೇಳುವುದಕ್ಕಾಗಿಯೇ ಹೊರಗೆ ಕಟ್ಟಿರುವಂತ ಗುಡಿಗಳ ಅಂತರಾರ್ಥ. ಆದ್ದರಿಂದ ಗುಡಿಗಳನ್ನು ಏಕೆ ಕಟ್ಟಿದ್ದಾರೆಂದರೆ ನಿಮ್ಮ ದೇಹಕ್ಕೆ ಪ್ರತಿರೂಪವಾಗಿ ಕಟ್ಟಿದವುಗಳು.

ಈ ಮಾರ್ಗದಲ್ಲಿ ಕೆಲವು ತೊಂದರೆಗಳಿರುತ್ತವೆ, ಅವುಗಳನ್ನು ಅಧಿಗಮಿಸುತ್ತಾ ನಿಧಾನವಾಗಿ ಆ ಸ್ಥಿತಿಗೆ ಸೇರಬೇಕು. ಆದರೆ ಒಂದೇ ಬಾರಿಗೆ ಬರುವುದಲ್ಲ, ಆದರೆ ಮಾಡುತ್ತಾ ಇದ್ದರೆ ಖಂಡಿತವಾಗಿ ಆ ಸ್ಥಿತಿಯನ್ನು ಹೊಂದುತ್ತೀರಿ.

*** ***

# 05.

ಯಮಧರ್ಮರಾಜನು ಆ ಪರಬ್ರಹ್ಮನ ಕುರಿತು ಏನೆಂದು ಹೇಳಿದರೆಂದರೆ, **"ಸೃಷ್ಟಿ ಮೊದಲಾದಾಗಿನಿಂದ ಅಂತರಂಗದಲ್ಲಿರುವ ಆತ್ಮ, ಮನಸ್ಸಿನ ಮೂಲಕ, ಇಂದ್ರಿಯಗಳ ಮೂಲಕ, ಬಾಹ್ಯ ವಸ್ತುಗಳ ಪರಿಚಯವನ್ನು ಹೊಂದುತ್ತಾ ಇದೆ. ಅಂದರೆ ಬಾಹ್ಯ ಪ್ರಪಂಚದಲ್ಲಿರುವಂತಹ ವಸ್ತುಗಳ ಪರಿಚಯವನ್ನು ಹೊಂದುತ್ತಾ ಇದೆ."**

ಆದ್ದರಿಂದ ಅಂತರ್ಮುಖಿನಾದಂತವನು ಯಾವುದಕ್ಕೂ ಪ್ರಭವಿತವಾಗುವುದಿಲ್ಲ, ಅಂದರೆ ಹಿಡಿಸಿಕೊಳ್ಳುವುದಿಲ್ಲ, ಕೊನೆಗೆ ತನ್ನನ್ನು ತಾನು ತಿಳಿದುಕೊಳ್ಳುತ್ತಾನೆ, ಅವನಿಗೆ ಆತ್ಮತತ್ವವು ತಿಳಿಯುತ್ತದೆ. ಹಾಗೆ ಆತ್ಮತತ್ವವನ್ನು ತಿಳಿದವನು, ಸರ್ವ ದುಃಖಗಳಿಂದ ವಿಮುಕ್ತಿಯನ್ನು ಹೊಂದಿ, ಆನಂದಾನುಭೂತಿಯನ್ನು ಹೊಂದುತ್ತಾನೆ.

ಅಂದರೆ ಅಂತರ್ಮುಖಿನಾದಂತವನು, ಮಾನವನ ಜಾಗ್ರತಾವಸ್ಥೆ, ಸ್ವಪ್ನಾವಸ್ಥೆಯಲ್ಲಿ ಸಾಕ್ಷಿಯಾಗಿ ಎಲ್ಲವನ್ನು ನೋಡುತ್ತಾ ಇರುತ್ತಾನೆ ಅಂದರೆ "ಆತ್ಮ"ವು ಸಾಕ್ಷಿಯಾಗಿ ಎಲ್ಲವನ್ನು ಗಮನಿಸುತ್ತಾ ಇರುತ್ತದೆ. ಇಲ್ಲಿಯೇ ಎಚ್ಚರದಿಂದ ಇರಬೇಕು, ಯಾವುದಕ್ಕೂ ಪ್ರಭಾವಿತಗೊಳ್ಳಬಾರದು, ಏನು ನಡೆಯುತ್ತಿದ್ದರೂ ಹಿಡಿಸಿಕೊಳ್ಳಬಾರದು.

ಆದರೆ ಇಲ್ಲಿ ಯಮಧರ್ಮರಾಜನು ಏನು ಹೇಳುತ್ತಾರೆಂದರೆ **"ಪರಬ್ರಹ್ಮ ಪ್ರತಿಯೊಬ್ಬರಲ್ಲಿಯೂ ಅಂತರಂಗದಲ್ಲಿಯೇ ಇದ್ದಾನೆ, ಸಾಕ್ಷಿಭೂತವಾಗಿದ್ದಾನೆ. ಸಾಕ್ಷಿಭೂತವಾಗಿ ಅಂದರೆ ಎಲ್ಲಾ ತಿಳಿಯುತ್ತಿದ್ದರೂ ತಿಳಿಯದಂತೆ, ನೋಡುತ್ತಿದ್ದರೂ ನೋಡದಂತೆ, ಕೇಳುತ್ತಿದ್ದರೂ ಕೇಳದಂತೆ ಇರುವುದು."**

ನೀವು ದೈವಸ್ಥಿತಿಯನ್ನು ಹೊಂದಿದ್ದೀರಾ? ಇಲ್ಲಾ? ಆತ್ಮಸಾಕ್ಷಾತ್ಕಾರವನ್ನು ಹೊಂದಿದ್ದೀರಾ? ಇಲ್ಲಾ? ಎಂಬುದಕ್ಕೆ ನಿದರ್ಶನ, ನೀವು ಸಾಕ್ಷಿತತ್ವದಲ್ಲಿ ಇರಬಲ್ಲುದೇ. ಹಾಗೇ ನೀವು ಸಾಕ್ಷಿ ತತ್ವದಲ್ಲಿ ಇದ್ದರೆ, ಆ ದೈವ ಸ್ಥಿತಿಯನ್ನು ಹೊಂದಿದಂತೆಯೇ. ನೀವು ಯಾವುದಕ್ಕಾಗಿ ಈ ಶ್ರಮವನ್ನುಪಡುತ್ತಿದ್ದೀರೋ ನೀವು ಆ ದೈವವಾಗಿ ಬದಲಾದಂತೆಯೇ!

ಯಾವುದನ್ನಾಗಲಿ ಸಾಕ್ಷಿ ತತ್ವದಲ್ಲಿ ಜೀವಿಸಬಲ್ಲಿರಾದರೆ ನೀವು ಎಷ್ಟೋ ದೊಡ್ಡದಾಗಿ ಜೀವಿಸಿದಂತೆಯೇ, ಕುಟುಂಬದಲ್ಲಿ ಏನು ನಡೆಯುತ್ತಿದ್ದರೂ ಸರಿ ನಡೆಯಲು ಬಿಡಿ, ಅದಕ್ಕೆ ಏನು ಮಾಡಬೇಕೋ ಅದನ್ನು ಮಾಡಿರಿ, ಅಷ್ಟೇ ಹೊರತು ಅದರ ಕುರಿತು ವಿಪರೀತವಾಗಿ ಆಲೋಚಿಸಬೇಕಾದ ಕೆಲಸವಿಲ್ಲ, ಹೊರಗೆ ಎಷ್ಟೋ ಬದಲಾವಣೆಗಳು ನಡೆಯುತ್ತವೆ,

ನಿಮ್ಮ ಊರಿನಲ್ಲಿ, ರಾಜ್ಯದಲ್ಲಿ, ದೇಶದಲ್ಲಿ, ಪ್ರಪಂಚದಲ್ಲಿ ನಡೆಯುತ್ತಿದ್ದರೂ, ನೋಡುತ್ತಾ ಸುಮ್ಮನಿರಿ, ಪ್ರತಿಸ್ಪಂದಿಸಬೇಡಿ, ನಡೆಯುತ್ತಿರುತ್ತವೆ ಅಷ್ಟೇ. ಹಾಗೆ ಆ ಭಗವಂತನ ಆ ಸಾಕ್ಷಿ ತತ್ವಸ್ಥಿತಿಯನ್ನು ಹೊಂದಬೇಕು, ಅದೇ ದೈವ ಸ್ಥಿತಿ.

ಸಣ್ಣ ಉದಾಹರಣೆ–ನೀವು ಬಸ್ಸಿನಲ್ಲಾಗಲಿ, ರೈಲಿನಲ್ಲಾಗಲಿ, ಕಾರಿನಲ್ಲಾಗಲಿ ಹೋಗುತ್ತಿರುತ್ತೀರಿ. ಎಷ್ಟೋ ಊರುಗಳ ಮೇಲಿನಿಂದ, ಎಷ್ಟೋ ಪ್ರದೇಶಗಳ ಮೇಲಿನಿಂದ ಹೋಗುತ್ತಾ ಇರುತ್ತೀರಿ. ದಾರಿಯಲ್ಲಿ ಎಷ್ಟನ್ನೋ ನೋಡುತ್ತಿರುತ್ತೀರಿ. ಎಷ್ಟೋ ನಡೆಯುತ್ತಾ ಇರುತ್ತವೆ. ಎಷ್ಟೋ ವಿನೋದಗಳು, ಮನೋರಂಜನೆಗಳನ್ನು ಕೂಡಾ ನೋಡುತ್ತಾ ಹಾಗೆ ಹೋಗುತ್ತಾ ಇರುತ್ತೀರಿ, ಆದರೆ ಅವುಗಳನ್ನು ಹಿಡಿಸಿಕೊಳ್ಳುವುದಿಲ್ಲ, ಅವುಗಳ ಕುರಿತು ಆಲೋಚಿಸುವುದಿಲ್ಲ. ಹಾಗೇ ನಿಜ ಜೀವನದಲ್ಲಿ ನಡೆಯುತ್ತಿರುವವುಗಳ ಕುರಿತು ಕೂಡಾ ಹಾಗೇ ಇರುವಂತಾಗಬೇಕು. ಅದನ್ನೇ ದೈವ ಸ್ಥಿತಿ ಎನ್ನುತ್ತಾರೆ.

ಯಮಧರ್ಮರಾಜನು ಏನೆಂದು ಹೇಳಿದನೆಂದರೆ **"ಅಂತರ್ಮುಖವಾದವನು, ಜಾಗ್ರತಾವಸ್ಥೆಯಲ್ಲಿ, ಸ್ವಪ್ನಾವಸ್ಥೆಯಲ್ಲಿ ಸಾಕ್ಷಿಯಾಗಿ ಇರುತ್ತಾ ಎಲ್ಲವನ್ನು ನೋಡುತ್ತಾ ಇರುತ್ತಾನೆ, ನೋಡಿದರೂ ಯಾವುದಕ್ಕೂ ಪ್ರಭಾವಿತಗೊಳ್ಳನು"** ಎಂದನು. ಅಂದರೆ ಜಾಗ್ರತಾವಸ್ಥೆ ಅಂದರೆ ಪ್ರಸ್ತುತ ಇರುವ ಸ್ಥತಿ. ಈ ಜಾಗ್ರತಾವಸ್ಥೆಯಲ್ಲಿ ಎಷ್ಟೋ ನಡೆಯುತ್ತಿರುತ್ತವೆ, ದೇಶಗಳಲ್ಲಿ ನಡೆಯುತ್ತವೆ, ಪ್ರಪಂಚದಲ್ಲಿಯೂ ನಡೆಯುತ್ತವೆ. ಹಾಗೆ ನಡೆಯುವವನ್ನು ಸಾಕ್ಷಿಯಾಗಿ ನೋಡುತ್ತಾ ಇರುವುದೇ, ಅವುಗಳ ಬಗ್ಗೆ ಯಾವ ಸ್ಪಂದನೆಗಳು ಇರಬಾರದು. ಮಾತಿನಿಂದಾಗಲಿ, ಆಲೋಚನೆಗಳಿಂದಾಗಲಿ, ಮನಸ್ಸಿನಲ್ಲಾಗಲಿ ಇರಬಾರದು. ನೀವು ಎಷ್ಟು ಮಾತ್ರವು ಸ್ಪಂದಿಸಿದರೂ ನಿಮ್ಮಲ್ಲಿ ಸಾಕ್ಷಿತತ್ವವು ಇಲ್ಲದಂತೆಯೇ ಲೆಕ್ಕ.

ಆ ಸ್ಥಿತಿಯನ್ನು ಸಂಪಾದಿಸುವುದು ಅಷ್ಟು ಸುಲಭವೇನಲ್ಲ. ಕೊನೆಗೆ ಸ್ವಪ್ನಾವಸ್ಥೆಯಲ್ಲಿ ನಡೆಯುವವನು ಕೂಡಾ ನಡೆಯಲು ಬಿಡಿ, ಕಾಣಿಸಲು ಬಿಡಿ, ಏನೋ ಆಗಲು ಬಿಡಿ, ಏಕೆ ಮತ್ತೇ ಅದರ ಕುರಿತು ಸ್ಪಂದಿಸಿ ಎಲ್ಲರಿಗೆ ಹೇಳಿಕೊಳ್ಳುತ್ತೀರಿ. ನನಗೆ ಈ ದಿನ ಕನಸಿನಲ್ಲಿ ಇದು ನಡೆಯಿತು ಕಣ್ರೀ! ಭಯವಾಗುತ್ತದೆ ರೀ! ನನಗೆ ಈ ಕ್ಷಣ ಬಹಳ ಸಂತೋಷವಾಗಿದೇರಿ, ಕನಸಿನಲ್ಲಿ ಹಾಗೆ ಅನ್ನಿಸಿತು, ಅದನ್ನು ನೋಡಿದೆನು, ನಿಜವಾಗಿಯೂ ಜೀವನದಲ್ಲಿ ಹಾಗೇ ಆಗುತ್ತದೆನೋ! ಎನ್ನುವ ಪ್ರತಿಸ್ಪಂದನೆ ಇರಬಾರದು. ಎಷ್ಟೋ ರೀತಿಯ ಕನಸುಗಳು ಬರುತ್ತವೆ. ಅವನ್ನೆಲ್ಲಾ ನೋಡುತ್ತಾ ಬಿಟ್ಟುಬಿಡುವುದೇ! ಅವುಗಳ ಮೇಲೆ ನಿನ್ನ ಸ್ಪಂದನೆ ಏಕೆ? ಆ ಸ್ಥಿತಿಗೆ ಬೆಳೆಯಬೇಕು.

ಆದ್ದರಿಂದ ನೆನಪಿಟ್ಟುಕೊಳ್ಳಿ, ಪರಬ್ರಹ್ಮನು ಎಲ್ಲವನ್ನು ತಿಳಿದುಕೊಳ್ಳುತ್ತಾನೆ, ಆತನಿಗೆ ಎಲ್ಲಾ ಗೊತ್ತು. ನೀವೇನು ಕೋರುವ ಅಗತ್ಯವಿಲ್ಲ, ಕೇಳಬೇಕಿಲ್ಲ, ಹೇಳಬೇಕಾಗಿಲ್ಲ. ತಿಳಿಯದವನಿಗೆ ಹೇಳಬೇಕು, ಸಮಸ್ತವನ್ನು ತಿಳಿದವನಿಗೆ ಏನು ಹೇಳುತ್ತೀರಿ, ಹೇಳಿರಿ!

*** ***

# 06.

ಯಮಧರ್ಮರಾಜನು ಅಂತರ್ಮುಖವಾದಂತವನ ಕುರಿತು ಹೇಳುತ್ತಿದ್ದಾರೆ. **"ಬಹಿರ್ಮುಖರು, ಅಂತರ್ಮುಖರು ಎಂದು ಎರಡು ರೀತಿಯ ಮಾನವರಿದ್ದಾರೆ. ಮಾನವನ ಇಂದ್ರಿಯಗಳು ಬಾಹ್ಯ ವಸ್ತುಗಳನ್ನು ಗ್ರಹಿಸುತ್ತಾ ಇದ್ದರೆ ಬಹಿರ್ಮುಖನು, ಹಾಗೆಯೇ ಬಾಹ್ಯ ವಸ್ತುಗಳಿಂದ, ಬಾಹ್ಯ ದೃಷ್ಟಿಯಿಂದ, ಇಂದ್ರಿಯಗಳನ್ನು ಹೊರಳಿಸಿ, ಅಂತರ್ಮುಖ ಮಾಡಿ ಒಳಗೆ ಹೊರಳಿಸಿದರೆ, ಅವನನ್ನು ಅಂತರ್ಮುಖನು ಎನ್ನುತ್ತಾರೆ ಎಂದನು."**

ಇದನ್ನೇ ಪತಂಜಲಿ ಮಹರ್ಷಿ ಅಷ್ಟಾಂಗ ಯೋಗ ಮಾರ್ಗದಲ್ಲಿ "ಪ್ರತ್ಯಾಹಾರ"ವೆಂದು ಹೇಳಿದ್ದಾರೆ. ಪ್ರತ್ಯಾಹಾರವೆಂದರೆ ಬಾಹ್ಯ ವಸ್ತುಗಳನ್ನು ಗ್ರಹಿಸುತ್ತಾ ಬಹಿರ್ಮುಖವಾಗಿರುವ ಇಂದ್ರಿಯಗಳನ್ನು ಅಂತರ್ಮುಖ ಮಾಡುವುದು.

ಯಮಧರ್ಮರಾಜನು **"ಯಾರಾದರೆ ಅಂತರ್ಮುಖವಾಗುತ್ತಾನೋ, ಕೊನೆಗೆ ಅವನು ತನ್ನನ್ನು ತಾನು ತಿಳಿದುಕೊಳ್ಳಬಲ್ಲನು"** ಎಂದು ಹೇಳಿದನು. ಪತ್ರೀಜಿಯವರು ಕೂಡಾ ಅದನ್ನೇ ಹೇಳುತ್ತಾರೆ, ಹಾಯಾಗಿ ಕಣ್ಣುಗಳನ್ನು ಮುಚ್ಚಿಕೊ, ನಿನ್ನ ಇಂದ್ರಿಯಗಳು ಅಂತರ್ಮುಖವಾಗುತ್ತವೆ. ಆದರೆ ಒಂದು ಮನಸ್ಸೇ ಅಷ್ಟು ಬೇಗನೆ ಅಂತರ್ಮುಖವಾಗದು. ಅದು ಆಲೋಚನೆಗಳೊಂದಿಗೆ ಹೊರಗೆ ಹೋಗಿ ಬಿಡುತ್ತದೆ.

ಅಂತರ್ಮುಖವಾಗದೇ ಆತ್ಮ ಸಾಕ್ಷಾತ್ಕಾರ ಹೇಗಾಗುತ್ತದೆ? ಆತ್ಮನನ್ನು ಹೇಗೆ ತಿಳಿದುಕೊಳ್ಳಬಲ್ಲೆ? ಆತ್ಮತತ್ವವು ಹೇಗೆ ತಿಳಿಯುತ್ತದೆ? ಆತ್ಮನ ಕುರಿತು ಏನು ತಿಳಿಯುತ್ತದೆ?

ಆದ್ದರಿಂದ ಕಣ್ಣು ಮುಚ್ಚಿದರೆ ಸಾಲದು, ಮನಸ್ಸನ್ನು ಕೂಡಾ ಅಂತರ್ಮುಖ ಮಾಡಬೇಕು. ಮತ್ತೇ ಮನಸ್ಸು ಅಂತರ್ಮುಖವಾಗದಂತೆ ಅಡ್ಡಿ ಮಾಡುತ್ತಿರುವುದು ಯಾರು? ಅಡ್ಡಿ ಮಾಡುತ್ತಿರುವುದು ಆಲೋಚನೆಗಳು, ಕಾರಣ ಮನಸ್ಸು ಬಾಹ್ಯವಾದ ವಸ್ತುಗಳನ್ನೇ ಚಿಂತಿಸುತ್ತಾ ಇರುತ್ತದೆ. ಅಂದರೆ ಜ್ಞಾನೇಂದ್ರಿಯಗಳೆಲ್ಲಾ ಅಂತರ್ಮುಖವಾಗಿದ್ದರೂ, ಅಂತರೇಂದ್ರಿಯವಾದ ಮನಸ್ಸು ಬಹಿರ್ಮುಖವಾಗಿಯೇ ಇರುತ್ತದೆ. ಅದಕ್ಕೆ ಗೈಡಿಂಗ್ ಧ್ಯಾನದಲ್ಲಿ ಮನಸ್ಸೆಂಬುದು ಅಂತರ್ಮುಖವಾಗದು. ಆದ್ದರಿಂದ ಯಮಧರ್ಮರಾಜು ಹೇಳಿದಂತೆ ಅಂತರ್ಮುಖಲಾಗರಾರು.

ಯಾವ ಇಂದ್ರಿಯ ಕೆಲಸ ಮಾಡಿದರೂ ಅಂತರ್ಮುಖವಾಗಲಾರರು, ಅಂತರ್ ಪ್ರಯಾಣ ಸಾಧ್ಯವಾಗದು. ಒಟ್ಟಾಗಿ ಬಾಹ್ಯೇಂದ್ರಿಯಗಳನ್ನು ಅಂತರೇಂದ್ರಿಯವಾದ ಮನಸ್ಸು ಪೂರ್ತಿಯಾಗಿ ಬಾಹ್ಯದಿಂದ ಅಂತರಂಗದೊಳಗೆ ಮರಳಿಸಿದರೇನೆ ಅಂತರ್ಮುಖವಾದಂತೆ ಅದನ್ನೇ "ಪ್ರತ್ಯಾಹಾರ" ಎನ್ನುತ್ತಾರೆ.

ಮತ್ತೆ ಯಾರಾಗಲಿ ಸುಲಭವಾಗಿ ಅಂತರ್ಮುಖವಾಗಬೇಕೆಂದರೆ ಪತ್ರೀಜಿಯವರು ನಮಗೆ ಕೊಟ್ಟಿರುವಂತ "ಶ್ವಾಸದ ಮೇಲೆ ಗಮನ" ಧ್ಯಾನವನ್ನು ಮಾಡಬೇಕು. ಅದಕ್ಕೆ ಋಷಿಗಳು, ಮಹರ್ಷಿಗಳು, ಯೋಗಿಗಳು, ಬಾಲ ಯೋಗಿಗಳು ಇಂತಹವರು ಹಿಮಾಲಯಗಳಿಗೋ, ಅರಣ್ಯಗಳಿಗೋ, ಆಶ್ರಮಗಳಿಗೋ ಹೋಗಿಬಿಡುತ್ತಿದ್ದರು.

ಆದ್ದರಿಂದ ಅವರು ಸುಮ್ಮನೆ ಕಣ್ಣು ಮುಚ್ಚಿದರೆ ಇಂದ್ರಿಯಗಳೆಲ್ಲಾ ಅಂತರ್ಮುಖವಾಗಿ ಬಿಡುತ್ತವೆ, ಅಂದರೆ ಕೆಲಸ ಮಾಡವು. ಆದರೆ ಸಂಸಾರ ಜೀವನದಲ್ಲಿ ಇರುವವರಿಗೆ ಅದು ಸಾಧ್ಯವಾಗದು. ಸುಲಭವಾಗಿ ಅಂತರ್ಮುಖರಾಗಬೇಕೆಂದರೆ ಖಂಡಿತವಾಗಿ "ಶ್ವಾಸದ ಮೇಲೆ ಗಮನ"ವನ್ನು ಇಡಬೇಕಾದದ್ದೇ.

ಯಮಧರ್ಮರಾಜನು, ಅಂತರ್ಮುಖವಾದವನು "ಕೊನೆಗೆ" ಅಂದಿದ್ದಾರೆ. ಅಂದರೆ ಕೊನೆಗೆ ಹಂತಕ್ಕೆ ಬರುವುದರೊಳಗೆ ಆಲೋಚನಾ ರಹಿತ ಸ್ಥಿತಿ ಬರುತ್ತದೆ. ಹಾಗೆಯೇ ಕುಳಿತುಕೊಳ್ಳುತ್ತಾ ಇದ್ದರೆ ಆ ಶಕ್ತಿ ಬೆಳೆದು, ಮನಸ್ಸು ಶುದ್ಧಿಯಾಗುತ್ತಾ ಇರುತ್ತದೆ. ಆದರೂ ಇನ್ನೂ ಕುಳಿತುಕೊಂಡರೆ ಈ ಶುದ್ಧಿಯಾದ ಮನಸ್ಸು ಶೂನ್ಯವಾಗುತ್ತದೆ. ಅದು ಶೂನ್ಯವಾದಾಗಲೇ ಮಾನವನು ತನ್ನನ್ನು ತಾನು ತಿಳಿದುಕೊಳ್ಳಬಲ್ಲನು.

**"ತನ್ನನ್ನು ತಾನು ತಿಳಿದುಕೊಳ್ಳಬಲ್ಲ ಸ್ಥಿತಿ ಅಂದರೆ ತಾನು ಯಾರೋ ಅಲ್ಲ, ಆತ್ಮನೇ, ಆ ಪರಬ್ರಹ್ಮನೇ, ಆ ದೈವವೇ ಎಂದು ಅನುಭವಪೂರ್ವಕವಾಗಿ ತಿಳಿದುಕೊಳ್ಳುವುದು."**

ಅದೇ ಯಮಧರ್ಮರಾಜನು ನಚಿಕೇತನಿಗೆ ಮಗು! ಅಂತರ್ಮುಖನಾಗು. ಕೊನೆಗೆ ನಿನ್ನನ್ನು ನೀನು ತಿಳಿದುಕೊಳ್ಳುವೆ, ಅಂದರೆ ಆತ್ಮಸಾಕ್ಷಾತ್ಕಾರವನ್ನು ಹೊಂದುವೆ ಎಂದನು.

ಅದಕ್ಕೆ ಎಷ್ಟೋ ಜನ್ಮಗಳು ಹಿಡಿಯಬಹುದು. ಒಬ್ಬ ರಮಣ ಮಹರ್ಷಿ, ಒಬ್ಬ ವಿವೇಕಾನಂದ, ಅವತಾರ ಮೆಹರ್‌ಬಾಬ, ಷಿರಿಡಿ ಬಾಬರವರಿಗೆ ಕೂಡಾ ವರ್ಷಾನುಗಟ್ಟಲೆ ಹಿಡಿಯಿತು. ಹಾಗೆ ಒಬ್ಬೊಬ್ಬರು ಕೆಲವು ವರ್ಷಗಳನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಆ ಸಾಕ್ಷಾತ್ಕಾರವನ್ನು ಹೊಂದಿದರು.

ಕೊನೆಗೆ ಹೀಗೆ ಒಂದೊಂದು ಹಂತವನ್ನು ದಾಟಿಕೊಳ್ಳುತ್ತಾ ಕೊನೆಗೆ ಆ ಆತ್ಮ ಸಾಕ್ಷಾತ್ಕಾರ ಅಂದರೆ ತನ್ನನ್ನು ತಾನು ತಿಳಿದುಕೊಳ್ಳಬಲ್ಲವನಾಗುತ್ತಾನೆ. ಅವನಿಗೆ ಸಮಸ್ತವೂ

ತಿಳಿಯುತ್ತವೆ, ಬೋಧೆಯಾಗುತ್ತವೆ ಅವನಿಗೆ ಆತ್ಮತತ್ವವು ಬೋಧೆಯಾಗುತ್ತದೆ. ಬ್ರಹ್ಮಜ್ಞಾನವು ಅರಿವಾಗುತ್ತದೆ.

ಯಮನು ಏನು ಹೇಳಿದನೆಂದರೆ, ಅಂತಹವನು ಸಮಸ್ತ ದುಃಖಗಳಿಂದ ಹೊರಬಂದು ಆನಂದಾನುಭೂತಿಯನ್ನು ಹೊಂದುತ್ತಾನೆ. ಇನ್ನು ಅವನಿಗೆ ಎಷ್ಟು ಕರ್ಮಗಳಿದ್ದರೂ ಜ್ಞಾನಾಗ್ನಿಯಲ್ಲಿ ದಗ್ಧವಾಗುತ್ತವೆ. ಅಂತಹವನಿಗೆ ಇನ್ನು ದುಃಖವೇನಿರುತ್ತದೆ? ಶಾಶ್ವತ ಆನಂದ ಸ್ಥಿತಿಯನ್ನು ಹೊಂದುತ್ತಾನೆ. ಹಾಗೇ ಯಮಧರ್ಮರಾಜನು ನಚಿಕೇತನಿಗೆ ಆತನು ಕೋರಿದಂತ ಆತ್ಮಜ್ಞಾನವನ್ನು ಬೋಧಿಸಿದನು.

ಜೀವನದಲ್ಲಿ ನೀನು 400 ಜನ್ಮಗಳನ್ನು ತೆಗೆದುಕೊಂಡು, ಎಷ್ಟನ್ನೊ ತಿಳಿದುಕೊಂಡರೂ, ಇನ್ನೂ ತಿಳಿದುಕೊಳ್ಳಬೇಕಾಗಿರುವುದು ಇರುತ್ತದೆ. ಆದರೆ ನಿನ್ನನ್ನು ನೀನು ತಿಳಿದುಕೊಂಡರೆ ಅಂದರೆ ಆತ್ಮಸಾಕ್ಷಾತ್ಕಾರವನ್ನು ಹೊಂದಿದರೆ, ಆ ಆತ್ಮ ತತ್ವವು ನಿನಗೆ ಅರ್ಥವಾದರೆ, ಆ ಬ್ರಹ್ಮಜ್ಞಾನವು ನಿನಗೆ ಅರ್ಥವಾದರೆ ಎಲ್ಲವು ಬೋಧೆಯಾದಂತೆಯೇ, ಕಲಿತುಕೊಳ್ಳುವುದಕ್ಕೆ ಇನ್ನೇನು ಇರದು. ಕಲಿತುಕೊಳ್ಳುವುದು ಆದ ನಂತರ ಇನ್ನು ನೀನು ಭೂಮಿಗೆ ಬರಬೇಕಾದ ಅಣತ್ಯವಿಲ್ಲ.

*** ***

# 07. ರಾಗ ದ್ವೇಷಗಳು ಇರಬಾರದು

ಯಮಧರ್ಮರಾಜನು ಇನ್ನು ಏನು ಹೇಳಿದನೆಂದರೆ **"ಓ, ನಚಿಕೇತ ಕುಟೀಲ ಚಿತ್ತವಿಲ್ಲದ, ಜನನಾದಿ ವಿಕಾರಗಳೂ ಇಲ್ಲದ ಪರಬ್ರಹ್ಮನಿಗೆ ಹತ್ತು ದ್ವಾರಗಳಿಂದ ಕೂಡಿರುವಂತಹ ದೇಹವೇ ಪಟ್ಟಣ. ದೇಹದಲ್ಲಿರುವ ಪರಬ್ರಹ್ಮನಿಗೆ, ಹತ್ತು ದ್ವಾರಗಳಿಂದ ರಾಗದ್ವೇಷಾದಿಗಳು ಇಲ್ಲದೆ ಧ್ಯಾನಿಸುವವನು, ಜನನ-ಮರಣ ರೂಪ ಸಂಸಾರ ಬಂಧಗಳಿಂದ ವಿಮುಕ್ತನಾಗುತ್ತಿದ್ದಾನೆ"** ಎಂದನು.

ಈ ಸಂದೇಶವೊಂದರ ಶ್ರೇಷ್ಠತೆ ಏನೆಂದು ಅರ್ಥ ಮಾಡಿಕೊಳ್ಳೋಣ.

ನಚಿಕೇತನಿಗೆ ಎಷ್ಟು ಪ್ರಲೋಭನೆಗಳನ್ನು ಇಟ್ಟರೂ! ಎಷ್ಟು ವರಗಳನ್ನು ಕೊಡುತ್ತೇನೆಂದರೂ! ಏಕೆ ಬೇಡವೆಂದ? ಅಂದರೆ ಯಮಧರ್ಮರಾಜನು ಬೋಧಿಸುವ ಬೋಧೆಯು ಎಷ್ಟು ಶ್ರೇಷ್ಠವಾದದ್ದೋ ನಾವು ಅರ್ಥ ಮಾಡಿಕೊಳ್ಳಬಹುದು.

ಈ ಪ್ರಪಂಚದಲ್ಲಿ ಯಾವಾದರೆ ಶ್ರೇಷ್ಠವಾದವೋ, ಅವನ್ನೆಲ್ಲಾ ಕೊಡುತ್ತೇನೆಂದನು. ಇಷ್ಟು ಕೋಟಿ ಜನರು ಏನೇನನ್ನು ಕೋರಿಕೊಳ್ಳುತ್ತಿದ್ದಾರೋ ಅವೆಲ್ಲವನ್ನು ಕೊಡುತ್ತೇನೆಂದನು.

ಮತ್ತೆ ಎಲ್ಲರು ಕೋರುತ್ತಿಲ್ಲವೆ? ಎಷ್ಟನ್ನು ಕೋರಿಕೊಳ್ಳುತ್ತಿದ್ದಾರೆ? ಎಷ್ಟು ಬೇಕೆನ್ನುತ್ತಿದ್ದಾರೆ? ಗುಡಿಗೆ ಹೋಗಿ ಕೆಲವರು ಕೋರುತ್ತಿದ್ದಾರೆ, ಚರ್ಚಿಗೆ ಹೋಗಿ ಕೋರುತ್ತಿದ್ದಾರೆ, ಮಸೀದಿಗೆ ಹೋಗಿ ಕೋರುತ್ತಿದ್ದಾರೆ, ಗುರುದ್ವಾರಗಳಿಗೆ ಹೋಗಿ ಕೋರುತ್ತಿದ್ದಾರೆ. ಅಂತಹವುಗಳು ಯಾವುವು ಬೇಡವೆಂದನು ನಚಿಕೇತನು. ಯಮಧರ್ಮರಾಜನು ಸುಮ್ಮನೆ ಸರಳವಾಗಿ ಕೊಡುತ್ತೇನೆಂದನು.

ಯಮಧರ್ಮರಾಜನು ಏನು ಹೇಳಿದನೆಂದರೆ ಕುಟಿಲ ಚಿತ್ತವಿಲ್ಲದ ಜನನಾದಿ ವಿಕಾರಗಳು ಇಲ್ಲದ ಎಂದನು. ಅಂದರೆ ಪರಬ್ರಹ್ಮನಿಗೆ "ಕುಟಿಲ ಚಿತ್ತವಿರುವುದಿಲ್ಲ". ಇಲ್ಲಿ ಚಿತ್ತವು ಅಂದರೆ ಮನಸ್ಸು, ಕುಟಿಲ ಅಂದರೆ ಮಾಯೆ, ಕುಟಿಲ ಚಿತ್ತವೆಂದರೆ ಮಾಯಾ ಮಾಟಗಳನ್ನು ಹೇಳುವ, ಕೆಲಸಗಳನ್ನು ಮಾಡುವ ಮನಸ್ಸುಳ್ಳವನು. ಅಂದರೆ ಪರಬ್ರಹ್ಮನಿಗೆ ಅಂತಹವು ಏನೂ ಇರುವುದಿಲ್ಲ.

ಆತನಿಗೆ ಎಲ್ಲಾ ಒಂದೇ, ಅಷ್ಟೇ ಅಲ್ಲ ಆತನಿಗೆ ಜನನಾದಿವಿಕಾರಗಳು ಕೂಡಾ ಇಲ್ಲ. ಜನನಾದಿ ವಿಕಾರಗಳು ಅಂದರೆ ಜನಿಸುವುದು, ಮರಣಿಸುವುದು ಎನ್ನುವ ಯಾವುದು ಇಲ್ಲ. ಅಂದರೆ ಆತನಿಗೆ ಹುಟ್ಟೂ ಇಲ್ಲ, ಸಾವೂ ಇಲ್ಲ.

ಇಲ್ಲಿ ಯಮಧರ್ಮರಾಜನು ಪರಬ್ರಹ್ಮನ ಕುರಿತು ವಿವರಿಸುತ್ತಿದ್ದಾನೆ. **"ಆತನು 10 ದ್ವಾರಗಳಿಂದ ಕೂಡಿರುವಂತಹ ಈ ದೇಹವೇ ಆತನು ಇರುವ ಪಟ್ಟಣ ಎಂದನು. ಅಂದರೆ ಈ ದೇಹದಲ್ಲಿಯೇ ಆತನು ಇರುತ್ತಾನೆ."** ಎಂದು ಹೇಳಿದನು. ಅಷ್ಟು ಶ್ರೇಷ್ಠನಾದಂತಹ ಪರಬ್ರಹ್ಮ ಎಲ್ಲಿದ್ದಾನೆ? ಅಂದರೆ ಈ ದೇಹದಲ್ಲಿಯೇ ಇದ್ದಾನೆ ಎಂದನು.

ಸಾಧಾರಣವಾಗಿ ನವದ್ವಾರೇ ಪುರೇ ದೇಹಿ ಎಂದು ಹೇಳುತ್ತಿರುತ್ತಾರೆ. ಆದರೆ ಇಲ್ಲಿ 10 ದ್ವಾರಗಳು ಎಂದು ಹೇಳಿದ್ದಾನೆ. ನೀನು ಒಂದು ವೇಳೆ ತಲೆಬುರುಡೆಯನ್ನು (Skull) ನೋಡಿದರೆ ಎರಡು ಕಣ್ಣು, ಎರಡು ಮೂಗಿನ ರಂಧ್ರಗಳು, ಎರಡು ಕಿವಿಯ ರಂಧ್ರಗಳು, ಬಾಯಿಯ ರಂಧ್ರ ಒಂದು ಒಟ್ಟು ಏಳು ಕಾಣಿಸುತ್ತದೆ. ಅವಲ್ಲದೆ ಮೂತ್ರ ದ್ವಾರ ಒಂದು, ಮಲ ದ್ವಾರ ಒಂದು ಒಂಭತ್ತಾಗುತ್ತದೆ. ಮತ್ತೆ 10ನೇ ಯದ್ವಾರವೆಂದರೆ ಕಾಣಿಸದ ಸಹಸ್ರಾರ.

ಹಸುಕೂಸಿಗೆ ತಲೆಯ ಮೇಲೆ ಮೆತ್ತಗೆ ಇರುತ್ತದೆ. ಆ ದ್ವಾರದ ಮೂಲಕವೇ ಯೋಗಿಗಳು ನಿಷ್ಕ್ರಮಿಸುತ್ತಾರೆ. ಅದನ್ನೇ ಸಹ ಸ್ರಾರವೆನ್ನುತ್ತಾರೆ. ಇಂತಹ 10 ದ್ವಾರಗಳು ಉಳ್ಳಂತಹ ಈ ದೇಹವೇ ಆತನಿಗೆ ಪಟ್ಟಣವೆಂದು ಹೇಳಲಾಗಿದೆ.

ಮತ್ತೆ ಇಂತಹ ದೇಹದಲ್ಲಿರುವ ಆ ಪರಬ್ರಹ್ಮನು ರಾಗದ್ವೇಷಗಳಿಲ್ಲದಂತೆ ಯಾರಾದರೆ ಧ್ಯಾನಿಸುತ್ತಾರೋ! ಅಂತಹವರು ಜನನ–ಮರಣ ರೂಪ ಸಂಸಾರ ಬಂಧಗಳಿಂದ ವಿಮುಕ್ತನಾಗುತ್ತಾನೆ ಎಂದು ಹೇಳಿದನು. 10 ದ್ವಾರಗಳುಳ್ಳಂತಹ ಇಂತಹ ದೇಹದಲ್ಲಿಯೇ ಪರಬ್ರಹ್ಮನು ಎಲ್ಲಿರುತ್ತಾನೆಂದರೆ ಹೃದಯ ಸ್ಥಾನದಲ್ಲಿ ಎಂದು ಹೇಳಿಕೊಂಡಿದ್ದೇವೆ. ಅಂತಹ ಪರಬ್ರಹ್ಮನು ರಾಗದ್ವೇಷಗಳಿಲ್ಲದೆ ಧ್ಯಾನಿಸಬೇಕೆಂದು ಹೇಳಿದ್ದಾನೆ. ಅಂದರೆ ಯಾರ ಮೇಲೆ ಅನುರಾಗವಿರಬಾರದು, ಯಾರ ಮೇಲೂ ದ್ವೇಷವಿರಬಾರದು. ಸಾಧಾರಣವಾಗಿ ನಮಗೆ ಇಷ್ಟವಾದವರ ಮೇಲೆ ಅನುರಾಗ ಇರುತ್ತದೆ. ಇಷ್ಟವಿಲ್ಲದವರ ಮೇಲೆ ದ್ವೇಷವಿರುತ್ತದೆ. ಆದರೆ ಧ್ಯಾನಿಸುವವನಿಗೆ ಈ ಎರಡೂ ಇರಬಾರದು.

ಈ ಧ್ಯಾನ ಮಾಡುವವರು ಚೆನ್ನಾಗಿ ನೆನಪಿಟ್ಟುಕೊಳ್ಳಬೇಕು. ನಾವೆಲ್ಲಾ ಏಕೆ ಮಾಡುತ್ತಿದ್ದೇವೆ? ಆತ್ಮ ಸಾಕ್ಷಾತ್ಕಾರಕ್ಕೆ. ಆತ್ಮಸಾಕ್ಷಾತ್ಕಾರವೆಂದರೇನು? ಆತ್ಮಾನುಭೂತಿಯನ್ನು ಹೊಂದುವುದಕ್ಕೆ, ನಾನೇ ಆತ್ಮ ಎಂಬ ಸ್ಥಿತಿಗೆ ಬರುವುದು. ಆ ಸ್ಥಿತಿಗೆ ಬರಬೇಕೆಂದರೆ ಮೊದಲು ಹೋಗಬೇಕಾಗಿರುವುದು ಈ ರಾಗದ್ವೇಷಗಳು ನಿನ್ನ ಶತೃವಿನ ಮೇಲೆ ಕೂಡಾ ನಿನಗೆ ದ್ವೇಷವಿರಬಾರದು, ನಿನಗೆ ನಷ್ಟ ಉಂಟು ಮಾಡಿದವನ ಮೇಲೆ ಕೂಡಾ ನಿನಗೆ ದ್ವೇಷವಿರಬಾರದು, ನಿನ್ನನ್ನು ಮೋಸಗೊಳಿಸಿದವನ ಮೇಲೆ ಕೂಡಾ ನಿನಗೆ ದ್ವೇಷವಿರಬಾರದು. ಏಕೆಂದರೆ ಅವನು ಮಾತ್ರ ಯಾರು? ಅವನೂ ನೀನೇ, ಏಕೆ ಹಾಗೆ ವರ್ತಿಸಿದನು?

ಅವನಲ್ಲಿರುವ ಅಜ್ಞಾನದಿಂದ, ಮೂರ್ಖತ್ವದಿಂದ. ಆದ್ದರಿಂದ ಎಲ್ಲಾ ನಾನೇ ಎಂಬ ಸ್ಥಾಯಿಗೆ ನೀವು ಸೇರಬೇಕು ಅಂದರೆ ಈ ರಾಗ ದ್ವೇಷಗಳಿರಬಾರದು.

ರಾಗದ್ವೇಷಗಳು ಇಲ್ಲದಿರುವುದು ಎಂಬುದು ಪರಬ್ರಹ್ಮವೊಂದರ ಲಕ್ಷಣ. ಎಲ್ಲಾ ಒಂದೇ, ಎಲ್ಲಾ ನಾನೇ ಎಂಬ ಸ್ಥಿತಿಯಲ್ಲಿ ಇದ್ದರೆ ಆನಂದಾನುಭೂತಿಯನ್ನು ಹೊಂದುತ್ತೇವೆಂದು ಹೇಳುತ್ತಿದ್ದಾರೆ. ನೀವು ಯಾವಾಗಾದರೆ ಈ ಧ್ಯಾನವನ್ನು ಮಾಡುತ್ತಿರುತ್ತೀರೋ ಮೊದಲು ಈ ವಿಕಾರಗಳನ್ನುಳ್ಳಂತಹ ಮನಸ್ಸು ಶುದ್ಧಿಯಾಗಬೇಕು. ಮನಸ್ಸು ಶುದ್ಧಿ ಆದರೆ ಈ ವಿಕಾರಗಳೆಲ್ಲಾ ಹೋಗುತ್ತವೆ. ನಿಧಾನವಾಗಿ ಮನಸ್ಸಿಲ್ಲದ ಸ್ಥಿತಿಗೆ ಸೇರಿಕೊಳ್ಳಬೇಕು. ಮನಸ್ಸು ಮಲಿನವಾಗಿದ್ದರೆ ಇವೆಲ್ಲವೂ ಇರುತ್ತವೆ. ಮಲಿನವು ಎಂದರೆ ಇಂತಹ ವಿಕಾರಗಳೇ.

ಮನಸ್ಸು ಮಲಿನವು ಅಂದರೆ ಸಾಮಾನ್ಯವಲ್ಲ, ಅದರಲ್ಲಿ ಎಷ್ಟೋ ರೀತಿಯ ವಿಕಾರಗಳು, ಎಷ್ಟೋ ರೀತಿಯ ಕೆಟ್ಟ ಲಕ್ಷಣಗಳು, ಗುಣಗಳು, ಅಭ್ಯಾಸಗಳು, ವ್ಯಸನಗಳು,

ಎಷ್ಟಿವೆಯೋ! ಅಂತಹ ಮನಸ್ಸನ್ನು ಶುದ್ಧಿ ಮಾಡಿದರೆ ಅವೆಲ್ಲವುಗಳಿಂದ ಹೊರ ಬೀಳುತ್ತೀರಿ. ರಾಗ ದ್ವೇಷಗಳಿಲ್ಲದೆ ಧ್ಯಾನಿಸುವವನು ಮಾಡಿದಂತೆಲ್ಲಾ ಕೊನೆಗೆ ಜನ್ಮಿಸನು, ಮರಣಿಸನು. ಅಂತಹ ಸ್ಥಿತಿಯನ್ನು ಹೊಂದುತ್ತಾನೆ.

ಪೂರ್ಣಾತ್ಮ ನಮಗೆ ಒಂದು ಲಕ್ಷ್ಯವನ್ನು ನಿರ್ದೇಶಿಸಿದೆ. ನೀನು ಮತ್ತೇ ನನ್ನ ಸ್ಥಾಯಿಗೆ ಬೆಳೆಯಬೇಕು, ನಾನಿರುವ ಲೋಕಕ್ಕೆ ಸೇರಿಕೊಳ್ಳಬೇಕು, ಅಲ್ಲಿಯವರೆಗೆ ನೀನು ಇದರೊಳಗಿಂದ ಹೊರಬರಲಾರೆ ಎಂದು.

ಆದರೆ ಯಮರಾಜನು ಇಲ್ಲಿ ಸಂಸಾರ ಬಂಧದಿಂದ ವಿಮುಕ್ತನಾಗಬೇಕು ಅಂದರೆ ಇದರಲ್ಲಿಂದ ಹೊರ ಬೀಳಬೇಕು. "ಸತ್ತು ಹುಟ್ಟುವ ಜೀವನವಲ್ಲ" "ಹುಟ್ಟು ಸಾವುಗಳಿಲ್ಲದ ಜೀವನವನ್ನು ಹೊಂದಬೇಕು" ಎಂದು ಹೇಳಿದರು. ಆದರೆ ಆ ಸತ್ಯಲೋಕಕ್ಕೆ ಸೇರಿದರೆ ಇನ್ನು ಸಾವೂ ಇಲ್ಲ, ಹುಟ್ಟೂ ಇಲ್ಲ. ಆದರೆ ಇನ್ನು ಯಾವ ಲೋಕಕ್ಕೆ ಸೇರಿದರೂ ಇವು ಇರುತ್ತವೆ.

ಯಮಧರ್ಮರಾಜನು ರಾಗದ್ವೇಷಗಳು ಇಲ್ಲದೆ ಈ ಹತ್ತು ದ್ವಾರಗಳು ಇರುವಂತಹ ದೇಹದಲ್ಲಿ ಇರುವಂತಹ ಆ ಪರಬ್ರಹ್ಮನನ್ನು ಧ್ಯಾನಿಸಿದರೆ ಜನನ ಮರಣಗಳಿರುವಂತ ಈ ಸಂಸಾರ ಬಂಧಗಳಿಂದ ವಿಮುಕ್ತನು ಆಗುತ್ತಾನೆಂದು ಹೇಳಿದ್ದಾರೆ. ಯಾರಾಗಲಿ ಕೊನೆಗೆ ಆಗಬೇಕಾಗಿರುವುದು, ಸಾಧಿಸಬೇಕಾಗಿರುವುದು ಅದನ್ನೇ. ಅದನ್ನು ಹೊಂದುವುದಕ್ಕೆ ನಾವು ಆ ಪ್ರಯತ್ನವನ್ನು ಮಾಡುತ್ತಿದ್ದೇವೆ.

*** ***

> ನನ್ನನ್ನು ಪ್ರಪಂಚವು ಮೆಚ್ಚಿಕೊಳ್ಳಬೇಕು ಎಂಬ ಕೋರಿಕೆ ನಿನಗೆ ಇದೆ ಎಂದರೆ ನೀನು ಮಾಯೆಯಲ್ಲಿ ಇದ್ದಂತೆಯೇ.
>
> **–ಬ್ರಹ್ಮವಿದ್ವರಿಷ್ಠ ರಾಜ್ಯ ಲಕ್ಷ್ಮಿಯವರು**

# 08. ಆತ್ಮ ಬೇರೆ ಪ್ರಾಣ ಬೇರೆ

ಯಮಧರ್ಮರಾಜನು ಇನ್ನು ಏನು ಬೋಧಿಸಿದನೆಂದರೆ? **"ಯಾರು ಈ ದೇಹವನ್ನು ಬಿಡುವುದರಿಂದ ಈ ದೇಹದಲ್ಲಿ ಏನೂ ಇಲ್ಲದಂತೆ ನಶಿಸಿ ಹೋಗುತ್ತದೋ ಅದೇ ನೀನು ಕೇಳಿದ" ಆತ್ಮಸ್ವರೂಪ, ಅದೇ ಆ "ಪರಬ್ರಹ್ಮ ಸ್ವರೂಪ"ವು ಎಂದು ಹೇಳಿದರು.**

ಯಮಧರ್ಮರಾಜನು ಇನ್ನು ಏನು ಹೇಳಿದರೆಂದರೆ **"ಈ ಸೂರ್ಯಾದಿಗಳು ಆ ಪರಬ್ರಹ್ಮನನ್ನು ಪ್ರಕಾಶಗೊಳಿಸಲಾರವು. ಸೂರ್ಯನು, ಚಂದ್ರನು, ನಕ್ಷತ್ರಗಳೆಲ್ಲವೂ ಕೂಡಾ ಪ್ರಕಾಶ ಸ್ವರೂಪವಾದ ಆ ಪರಬ್ರಹ್ಮನ ಪ್ರಕಾಶದಿಂದಲೇ ಪ್ರಕಾಶಿಸುತ್ತಿವೆ"** ಎಂದನು.

ನಚಿಕೇತನು ಕೇಳಿದ ಪ್ರಶ್ನೆಗೆ ಎಲ್ಲರೂ ಉತ್ತರವನ್ನು ಹೇಳಲಾರರು. ಯಮಧರ್ಮರಾಜನು ಹೇಳಬಲ್ಲನಾದ್ದರಿಂದ ಆತನನ್ನೇ ಹಿಡಿದುಕೊಂಡನು. ಆದ್ದರಿಂದ ಯಮಧರ್ಮರಾಜ ಹೇಳುವಂತವೆಲ್ಲಾ ಸತ್ಯಗಳು.

ಇಲ್ಲಿ ಒಂದು ವಿಷಯವನ್ನು ನೆನಪಿಟ್ಟುಕೊಳ್ಳಬೇಕು. ಮರಣಿಸಿದಾಗ ಬಹಳಷ್ಟು ಜನರು ಪ್ರಾಣ ಹೋಯಿತು ಎನ್ನುತ್ತಾರೆ, ಅಂದರೆ ಅದರ ಅರ್ಥ ಪ್ರಾಣ ಹೋಗುವುದರಿಂದ ಮರಣಿಸಿದನು ಎಂದು ಭಾವಿಸುತ್ತಾ ಇರುತ್ತಾರೆ. ಆದರೆ ಇಲ್ಲಿ ಯಮಧರ್ಮರಾಜನು ಏನು ಹೇಳಿದನೆಂದರೆ, ಆತ್ಮ ಶರೀರವನ್ನು ಬಿಡುವುದರಿಂದಲೇ ಆ ಪ್ರಾಣ ಹೋಯಿತು ಅಂದರೆ ಮರಣಿಸಿದನು ಅಂದರು. ಆದರೆ ಲೋಕದಲ್ಲಿ ಆತ್ಮ ಹೋಗಿ ಬಿಟ್ಟಿತು ಎಂದು ಯಾರೂ ಹೇಳರು, ಪ್ರಾಣ ಹೋಯಿತು ಎನ್ನುತ್ತಾರೆ. ಅದಕ್ಕೆ ನಾವು ಗುರುತಿಟ್ಟುಕೊಳ್ಳಬೇಕಾಗಿರುವುದು "ಪ್ರಾಣ ಬೇರೆ, ಆತ್ಮ ಬೇರೆ" ಎಂದು ಈ ವಿಷಯವು ಬಹಳ ಜನರಿಗೆ ಗೊತ್ತಿಲ್ಲ, ಇನ್ನು ಬಹಳ ಜನ ಈ ಪ್ರಾಣವನ್ನೇ ಆತ್ಮ ಎಂದುಕೊಳ್ಳುತ್ತಾರೆ.

ಏಕೆಂದರೆ ಈ ಪ್ರಾಣ ಕೂಡಾ ಆತ್ಮದಿಂದಲೇ ಇದೆ, ಆತ್ಮವಿಲ್ಲದಿದ್ದರೆ ಪ್ರಾಣ ಕೂಡಾ ಇರುವುದಿಲ್ಲ. ಮತ್ತೆ ಪ್ರಾಣವೆಂದರೆ ಏನು ಎಂಬುದನ್ನು ತಿಳಿಯೋಣ.

"ಶರೀರದಲ್ಲಿ ನಡೆಯುವ ಐದು ರೀತಿಯ ವಾಯುಸಂಚಾರಗಳನ್ನೇ ಪ್ರಾಣವು ಎನ್ನುತ್ತಾರೆ." ಅವುಗಳನ್ನೇ ಪಂಚ ಪ್ರಾಣಗಳೆನ್ನುತ್ತಾರೆ. ಈ ಪಂಚಪ್ರಾಣಗಳು ಕೂಡಾ ಆತ್ಮದಿಂದಲೇ ಕೆಲಸ ಮಾಡುತ್ತವೆ. ಅವು 1. ಪ್ರಾಣ 2. ಅಪಾನ 3. ಉದಾನ 4. ವ್ಯಾನ 5. ಸಮಾನ.

1. ಪ್ರಾಣ : ಅಂದರೆ ಉಚ್ಛ್ವಾಸ ನಿಶ್ವಾಸವನ್ನು ನಡೆಸುತ್ತಿರುತ್ತದೆ, ಶ್ವಾಸಕ್ರಿಯೆ ನಡೆಯುತ್ತಾ ಇರುತ್ತದೆ.

2. ಅಪಾನ : ಅಂದರೆ ಶರೀರದಲ್ಲಿ ತಯಾರಾದಂತಹ ವ್ಯರ್ಥ ಪದಾರ್ಥಗಳನ್ನು ವಿಸರ್ಜಿಸುತ್ತಾ ಇರುತ್ತದೆ.

3. ಉದಾನ : ಅಂದರೆ ಉದರದಲ್ಲಿದ್ದು ತೆಗೆದುಕೊಂಡ ಆಹಾರವನ್ನು ಜೀರ್ಣವಾಗಿಸಿ ಶಕ್ತಿಯಾಗಿ ಬದಲಾಯಿಸುತ್ತದೆ.

4. ವ್ಯಾನ : ಅಂದರೆ ಶರೀರದಲ್ಲೆಲ್ಲಾ ಆ ಶಕ್ತಿಯನ್ನು ವ್ಯಾಪಿಸುವಂತೆ ಮಾಡುತ್ತದೆ.

5. ಸಮಾನ : ಎಂದರೆ ಆ ಶಕ್ತಿ ಎಲ್ಲಿ ಎಷ್ಟು ಅಗತ್ಯವೋ ಅಷ್ಟನ್ನು ಸಮಾನವಾಗಿ ವ್ಯಾಪಿಸುವಂತೆ ಮಾಡುತ್ತದೆ.

ಮಾನವನು ಜನ್ಮ ತೆಗೆದುಕೊಂಡಾಗಿನಿಂದ ಮರಣಿಸುವವರೆಗೂ ಈ ಐದು ರೀತಿಯ ಕೆಲಸಗಳು ನಡೆಯುತ್ತಲೇ ಇರುತ್ತವೆ. ಯಾವ ಕೆಲಸವು ನಡೆಯದಿದ್ದರೂ ತೊಂದರೆಯೇ, ಆದ್ದರಿಂದ ತಕ್ಷಣವೇ ವೈದ್ಯರ ಬಳಿಗೆ ಹೋಗುತ್ತಾರೆ, ಔಷಧಗಳನ್ನು ಬಳಸುತ್ತಾರೆ. ಈ ಐದು ರೀತಿಯ ಕೆಲಸಗಳನ್ನು ವಾಯುಗಳನ್ನೇ ಪಂಚ ಪ್ರಾಣಗಳು ಎನ್ನುತ್ತಾರೆ.

ಅಷ್ಟೇ ಹೊರತು ಇವು ನಿಷ್ಕ್ರಮಿಸುವುದರಿಂದ ಮಾನವನು ಮರಣಿಸುವುದಲ್ಲ, ಆತ್ಮವು ನಿಷ್ಕ್ರಮಿಸುವುದರಿಂದಲೇ ಪಂಚ ಪ್ರಾಣಗಳು ನಿಷ್ಕ್ರಮಿಸುತ್ತವೆ, ಆಗ ಮರಣಿಸಿದನು ಎನ್ನುವರು. ಅಂದರೆ ನೀರು ನೀರಿನಲ್ಲಿ ಬೆರೆತು ಹೋಗುತ್ತದೆ, ಭೂಮಿ ಭೂಮಿಯಲ್ಲಿ ಸೇರಿ ಹೋಗುತ್ತದೆ, ವಾಯುವು ವಾಯುವಿನಲ್ಲಿ ಸೇರಿ ಹೋಗುತ್ತದೆ, ಅಗ್ನಿ ಅಗ್ನಿಯಲ್ಲಿ ಸೇರಿ ಹೋಗುತ್ತದೆ. ಹಾಗೆ ಪಂಚಭೂತಗಳು ಶರೀರದಲ್ಲಿ ಇಲ್ಲದೆ ಹೋಗುತ್ತವೆ.

ಮತ್ತೆ ಇಲ್ಲಿಯವರೆಗೆ ಪಂಚಭೂತಗಳು ಏಕೆ ಇವೆ ಅಂದರೆ, ಆತ್ಮವಿರುವುದರಿಂದಲೇ ಇದ್ದವು. ಯಮಧರ್ಮರಾಜನೂ ಕೂಡಾ ಅದನ್ನೇ ಹೇಳುತ್ತಾನೆ, ಯಾವುದು ಈ ದೇಹವನ್ನು ಬಿಡುವುದರಿಂದ ಈ ದೇಹದಲ್ಲಿ ಏನೂ ಇಲ್ಲದೆ ಹೋಗುತ್ತದೋ ಅದೇ ನೀನು ಕೇಳಿದಂತಹ ಆತ್ಮಸ್ವರೂಪ ಎಂದನು.

ಆತ್ಮನ ಕುರಿತು ಇನ್ನು ಏನನ್ನು ಬೋಧಿಸಿದರೆಂದರೆ **"ಈ ಸೂರ್ಯಾದಿಗಳು ಅಂದರೆ ಸೂರ್ಯನು, ಚಂದ್ರನು, ಅನೇಕ ರೀತಿಯ ಗ್ರಹಗಳು, ನಕ್ಷತ್ರಗಳು, ಆ ಪರಬ್ರಹ್ಮನು ಅಂದರೆ ಆತ್ಮನನ್ನು ಪ್ರಕಾಶಿಸುವಂತೆ ಮಾಡಲಾರವು"** ಎಂದು ಹೇಳಿದರು. ಈಗ ಭೂಮಿಯು ಸೂರ್ಯನ ಬೆಳಕಿನಿಂದಲೇ ಪ್ರಕಾಶಿಸುತ್ತಾ ಇರುತ್ತದೆ, ಅದಕ್ಕೆ ಸೂರ್ಯನು ಉದಯಿಸಿದನು ಎನ್ನುತ್ತಾರೆ.

ಸೂರ್ಯನ ಪ್ರಕಾಶದಿಂದಲೇ ಭೂಮಿಯು ಪ್ರಕಾಶಿಸುತ್ತದೆ. ಹಾಗೆಯೇ ಆತನು ಏನೆನ್ನುತ್ತಾರೆಂದರೆ ಈ ಸೂರ್ಯ, ಚಂದ್ರಾದಿಗಳು ಯಾವುವು ಕೂಡಾ ಆತ್ಮನನ್ನು

ಪ್ರಕಾಶಿಸುವಂತೆ ಮಾಡಲಾರವು ಅಂದನು. ಇನ್ನು ಏನು ಹೇಳಿದನೆಂದರೆ ಸೂರ್ಯನು, ಚಂದ್ರನು, ನಕ್ಷತ್ರಗಳೂ ಇವೆಲ್ಲವೂ ಕೂಡಾ ಆ ಪರಬ್ರಹ್ಮನಿಂದಲೇ, ಆ ಆತ್ಮ ಸ್ವರೂಪದಿಂದಲೇ ಪ್ರಕಾಶಿಸುತ್ತವೆ, ಅವುಗಳಿಗೆ ಪ್ರಕಾಶವನ್ನು ಕೊಟ್ಟಿರುವುದು ಕೂಡಾ ಆತನೇ. ಅದಕ್ಕೆ ಆತನನ್ನು ಕೋಟಿ ಸೂರ್ಯರ ಕಾಂತಿಯುಳ್ಳವನು ಎನ್ನುತ್ತಾರೆ, ಅಂದರೆ ಆತನ ಅಂತಹ ಉನ್ನತಕಾಂತಿಯನ್ನುಳ್ಳವನು ಎಂದು.

ನೋಡಿ, ಈಗ ಧ್ಯಾನ ಮಾಡುತ್ತಿದ್ದೀರಿ ಎಂದುಕೊಳ್ಳಿ, ಆತ್ಮದೊಡನೆ ಅನುಸಂಧಾನವಾದೆವು ಎಂದುಕೊಳ್ಳುತ್ತೀರಿ. ಅದಕ್ಕೆ ಆತ್ಮದ ಮತ್ತೊಂದು ಲಕ್ಷಣ "ಕಾಂತಿ ಸ್ವರೂಪ" ಎನ್ನುತ್ತಾರೆ. ಹೀಗೆ ದೊಡ್ಡವರು ಹೇಳಿದ ಮಾತುಗಳನ್ನು ಆಧರಿಸಿ ಆತ್ಮ ತತ್ವವನ್ನು ನಾವು ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ

ಅದಕ್ಕೆ ಆತ್ಮಶಕ್ತಿ ಸ್ವರೂಪವು, ಕಾಂತಿಸ್ವರೂಪವು, ಆನಂದ ಸ್ವರೂಪವು, ಸಾಕ್ಷಿಭೂತ ಸ್ವರೂಪವು ಇವೆಲ್ಲವೂ ಕೂಡಾ ಆತ್ಮವೊಂದರ ಲಕ್ಷಣಗಳು. ಮತ್ತೇ ಇಷ್ಟು ಲಕ್ಷಣಗಳನ್ನು ಹೊಂದಿರುವ ಆತ್ಮವು ಎಲ್ಲಿದೆ? ಅಂದರೆ ಶರೀದಲ್ಲಿಯೇ ಇದೆ.

ಕಾಂತಿಯೊಂದಿಗೆ ಅನುಸಂಧಾನವೆಂದರೂ, ಆತ್ಮದೊಂದಿಗೆ ಅನುಸಂಧಾನ–ವೆಂದರೂ, ಶಕ್ತಿಯೊಂದಿಗೆ ಅನುಸಂಧಾನವೆಂದರೂ ಒಂದೇ. ಅನಂತವಾದ ಕೋಟಿ ಸೂರ್ಯರ ಪ್ರಕಾಶವುಳ್ಳಂತಹ ಕಾಂತಿ ಪ್ರತಿಯೊಬ್ಬರ ಶರೀರದಲ್ಲಿದೆ.

ಮತ್ತೇ ಆತ್ಮವು ಎಲ್ಲಿದೆ? ಅಂತರಂಗದಲ್ಲಿದೆ. ಅಂತರಂಗದಲ್ಲಿ ಎಲ್ಲಿದೆ? ಮೇಲೆ ಕಾಣಿಸುವುದು ದೇಹ, ಈ ದೇಹದ ಒಳಗೆ ಮನಸ್ಸಿದೆ. ಮನಸ್ಸಿನ ಒಳಗೆ ಆತ್ಮವಿದೆ ಅಂದರೆ ಕಾಂತಿ ಇದೆ. ಈ ಕಾಂತಿಯನ್ನು ಅಂದರೆ ಆತ್ಮನನ್ನು ಮನಸ್ಸು ಆವರಿಸಿದೆ, ಮನಸ್ಸನ್ನು ದೇಹವು ಆವರಿಸಿದೆ.

ಈ "ಶ್ವಾಸದ ಮೇಲೆ ಗಮನ" ಧ್ಯಾನದ ಮೂಲಕ ಏನು ಮಾಡುತ್ತಿರೆಂದರೆ ಮೊಟ್ಟ ಮೊದಲು ಕಣ್ಣುಗಳನ್ನು ಮುಚ್ಚುತ್ತೀರಿ. ತಕ್ಷಣವೇ ಆಲೋಚನೆಗಳು ಬರುತ್ತವೆ ಅಂದರೆ ಮನಸ್ಸಿನೊಂದಿಗೆ ಇರುತ್ತೀರಿ, ಹಾಗೇ ನೀವು ಅಲ್ಲಿಯೇ ನಿಂತುಬಿಡುತ್ತೀರಿ.

"ಶ್ವಾಸದ ಮೇಲೆ ಗಮನ" ಯಾವಾಗಾದರೆ ಇಟ್ಟಿರೋ ನಿಧಾನವಾಗಿ ಆಲೋಚನೆಗಳೆಲ್ಲಾ ನಿಂತು ಬಿಡುತ್ತವೆ, ಅಂತಹ ಆಲೋಚನಾರಹಿತ ಸ್ಥಿತಿಯಲ್ಲಿ ಇನ್ನು ಸಾಧನೆಯನ್ನು ಮಾಡಿದರೆ, ಮನಸ್ಸು ಕೂಡಾ ಇರುವುದಿಲ್ಲ. ಇನ್ನು ಅಲ್ಲಿರುವುದು ಆತ್ಮ ಒಂದೇ, ಅಂದರೆ ನೀವು ಮನಸ್ಸಿನೊಳಗೆ ಹೋದಿರಿ. ಆಗ ನೀವು ಆತ್ಮದೊಂದಿಗೆ ಅಂದರೆ ಕಾಂತಿಯೊಂದಿಗೆ ಅನುಸಂಧಾನವಾದಂತೆ. ಆ ಕೆಲಸವನ್ನೇ "ಶ್ವಾಸದ ಮೇಲೆ ಗಮನ" ಧ್ಯಾನದ ಮೂಲಕ ಮಾಡುತ್ತಿದ್ದೀರಿ.

*** ***

# 09. ಪರಬ್ರಹ್ಮ ಸ್ವರೂಪವನ್ನು ತಿಳಿದುಕೊಳ್ಳಬೇಕು

ಅದಕ್ಕೆ ಪತ್ರೀಜಿಯವರು ಜ್ಞಾನ ನವರತ್ನಗಳಲ್ಲಿ "ಆತ್ಮನೇ ಪರಬ್ರಹ್ಮ"ವೆಂದು ಹೇಳಿದ್ದಾರೆ. ಬ್ರಹ್ಮ ಅಂದರೆ ಶ್ರೇಷ್ಠವಾದವನು ಎಂದು ಅರ್ಥ. ಸೃಷ್ಟಿಯಲ್ಲಿಯೇ ಎಲ್ಲದಕ್ಕಿಂತ ಶ್ರೇಷ್ಠನು, ಎಲ್ಲರಿಗಿಂತ ಶ್ರೇಷ್ಠನು ಪರಬ್ರಹ್ಮನು.

ಈ ಸಂದರ್ಭವಾಗಿ ಯಮಧರ್ಮರಾಜ ಏನು ಹೇಳಿದನೆಂದರೆ, ಈ ನಚಿಕೇತಾ! ಮಾನವನು ಮರಣಿಸಿದ ನಂತರ ದೇಹೇಂದ್ರಿಯ, ಮನೋಬುದ್ಧಿಗಳಿಗಿಂತ ಬೇರೆಯಾದ ಆತ್ಮವಿದೆಯೇ? ಇಲ್ಲಾ? ಎಂಬ ನಿನ್ನ ಪ್ರಶ್ನೆಗೆ ಉತ್ತರವನ್ನು ಹೇಳುತ್ತಿದ್ದೇನೆ.

**"ಯಾವ ಪರಬ್ರಹ್ಮ ಸ್ವರೂಪವು ತಿಳಿಯದೇ ಇರುವುದರಿಂದ ಜೀವಾತ್ಮನು ಮರಣರೂಪ ಸಂಸಾರವನ್ನು ಹೊಂದುತ್ತದೆಯೋ, ಅಂತಹ ಪ್ರಾಚೀನ ರಹಸ್ಯವನ್ನು, ಬ್ರಹ್ಮಸ್ವರೂಪವನ್ನು ಈಗ ಹೇಳುತ್ತಿದ್ದೇನೆ ಕೇಳು"** ಎಂದನು.

ನಚಿಕೇತನು ಕೇಳಿದ ಪ್ರಶ್ನೆಗೆ ಯಮಧರ್ಮರಾಜನು ಈ ವಿಧವಾಗಿ ಹೇಳಿದನು. **"ಈ ಪರಬ್ರಹ್ಮ ಸ್ವರೂಪವನ್ನು ತಿಳಿಯದೇ ಹೋಗುವುದರಿಂದ, ಲೋಕದಲ್ಲಿ ಮಾನವರು ಎಲ್ಲವುದಕ್ಕೂ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ, ಆದರೆ ನಿಜವಾದ ಶ್ರೇಷ್ಠವಾದ ಒಂದೇ ಒಂದಾದ ಆ ಪರಬ್ರಹ್ಮನ ಕುರಿತು ಆಲೋಚಿಸುತ್ತಿಲ್ಲ, ಪ್ರಾಮುಖ್ಯತೆಯನ್ನು ಕೊಡುತ್ತಿಲ್ಲ. ಇದು ಯಾರಿಗೂ ತಿಳಿಯದೆ, ಅದರ ಹೊರತು ಎಲ್ಲವನ್ನು ಹಿಡಿಸಿಕೊಳ್ಳುತ್ತಿದ್ದಾರೆ, ಎಷ್ಟು ವಿಚಿತ್ರವೋ ನೋಡಿರಿ."**

ಅದಕ್ಕೆ ಅದನ್ನು ತಿಳಿಯದಿದ್ದರೆ ಜೀವಾತ್ಮ ಅಂದರೆ ಈ ಶರೀರದಲ್ಲಿರುವಂತ ಆತ್ಮ, ಮರಣರೂಪ ಸಂಸಾರವನ್ನು ಹೊಂದುತ್ತಾ ಇದೆ ಎಂದರು. ಈಗ ಎಲ್ಲರೂ ಸಂಸಾರದಲ್ಲಿಯೇ ಇದ್ದಾರೆ, ಏನೇ ಅನೇಕ ಪ್ರಯತ್ನಗಳನ್ನು ಮಾಡುತ್ತಾ ಕೊನೆಗೆ ಮರಣಿಸುತ್ತಾರೆ. ಮರಣಿಸಿ ಹಾಗೆಯೇ ಇರುತ್ತಾರಾ ಅಂದರೆ ಮತ್ತೇ ಭೂಮಿಗೆ ಬಂದು ಮತ್ತೊಬ್ಬ ತಾಯಿಯ ಗರ್ಭದಲ್ಲಿ ಹುಟ್ಟುತ್ತಾರೆ.

ಆದ್ದರಿಂದ ತಾಯಿ ಬದಲಾಗುತ್ತಾಳೆ, ಪ್ರದೇಶ ಬದಲಾಗುತ್ತದೆ, ಮತವು ಬದಲಾಗುತ್ತದೆ, ಕುಲವು ಬದಲಾಗುತ್ತದೆ. ಪ್ರಾಂತ್ಯವು ಬದಲಾಗುತ್ತದೆ, ಕುಟುಂಬ ಬದಲಾಗುತ್ತದೆ, ಭಾಷೆಯು ಬದಲಾಗಿ ಬಿಡುತ್ತದೆ, ಹೀಗೆ ನೋಡಿದರೆ ಎಲ್ಲಾ ಬದಲಾಗಿ ಬಿಡುತ್ತವೆ. ಏಕೆ? ಅಂದರೆ ಪರಬ್ರಹ್ಮ ಸ್ವರೂಪವು ತಿಳಿಯದೆ ಹೋಗುವುದರಿಂದಲೇ. ಅದೇ

ನೀವು ತಿಳಿದುಕೊಂಡರೆ ಇನ್ನು ಆ ಸಂಸಾರವು ಇರದು, ಈ ಮರಣವು ಇರದು, ಹುಟ್ಟುವುದೂ ಇರುವುದಿಲ್ಲ.

ಆದ್ದರಿಂದ ಅಂತಹ ಪರಬ್ರಹ್ಮವೊಂದರ ರಹಸ್ಯವನ್ನು ಆತನ ಸ್ವರೂಪವನ್ನು ಹೇಳುತ್ತೇನೆ ಕೇಳು ಎಂದು ಯಮನು ಹೇಳಿದನು.

**"ಜನರು ಮರಣವನ್ನು ಹೊಂದಿದ ನಂತರ ಅವರವರ ಕರ್ಮ, ಜ್ಞಾನದ ಪ್ರಕಾರ ದೇಹವನ್ನು ಹೊಂದುವುದಕ್ಕಾಗಿ ಯೋನಿ ದ್ವಾರವನ್ನು ಹೊಂದುತ್ತಿದ್ದಾರೆ, ಮತ್ತೇ ಕೆಲವರು ಸ್ಥಾವರತ್ವವನ್ನು ಹೊಂದುತ್ತಿದ್ದಾರೆ."**

**ಯಮನು "ನಿದ್ರಿಸಿರುವ ಸರ್ವ ಜೀವಿಗಳಲ್ಲೂ ಯಾವ ಪುರುಷನು ಎಚ್ಚರಗೊಂಡಿದ್ದಾನೋ ಅದೇ ನಾಶರಹಿತವಾದ, ಪರಿಶುದ್ಧವಾದ ಬ್ರಹ್ಮವು. ಆ ಬ್ರಹ್ಮದಲ್ಲಿಯೇ, ಪರಮಾತ್ಮನಲ್ಲಿಯೇ ಸಮಸ್ತ ಲೋಕಗಳು ಆಶ್ರಯಿಸಿ ಇವೆ, ಅದನ್ನು ಯಾವನೂ ಅತಿ ಕ್ರಮಿಸಲಾರನು, ಅಲ್ಲವೆನ್ನಲಾರನು, ಇದೇ ನೀನು ಕೇಳಿದ ಆತ್ಮ ಸ್ವರೂಪವು" ಎಂದು ಆತನು ಹೇಳಿದನು.**

ಜನರು ಅಂದರೆ ಮಾನವರು ಮರಣಿಸಿದ ನಂತರ ಅವರವರ ಕರ್ಮ, ಜ್ಞಾನಗಳ ಪ್ರಕಾರ ಜೀವಿಸಿರುವಾಗ ಎಷ್ಟೋ ಕರ್ಮಗಳನ್ನು ಮಾಡುತ್ತಾರೆ. ಹಾಗೆ ಈಗ ಮಾಡಿದ ಕರ್ಮಗಳನ್ನಾಧರಿಸಿ ಮತ್ತೇ ದೇಹವನ್ನುಹೊಂದುತ್ತಾರೆ. ಆದ್ದರಿಂದ ಆ ದೇಹವನ್ನು ಹೊಂದುವುದಕ್ಕಾಗಿ ಯೋನಿದ್ವಾರವನ್ನು ಅಂದರೆ ತಾಯಿ ಗರ್ಭವನ್ನು ಆಯ್ಕೆ ಮಾಡಿಕೊಂಡು, ತಾಯಿಯ ಯೋನಿಯ ಮೂಲಕ ಜನ್ಮವನ್ನು ತೆಗೆದುಕೊಳ್ಳುತ್ತಾರೆ.

ಆತನು ಇನ್ನು ಏನು ಹೇಳಿದನೆಂದರೆ, ಅವರವರ ಕರ್ಮ, ಜ್ಞಾನಗಳ ಪ್ರಕಾರ ಅಂದರೆ ಈ ಮಾನವರಲ್ಲಿ ಕೆಲವರು ಪಾಪ ಕರ್ಮಗಳನ್ನು ಮಾಡುವವರು ಇರುತ್ತಾರೆ, ಪುಣ್ಯಕರ್ಮಗಳನ್ನು ಮಾಡುವವರು ಇರುತ್ತಾರೆ, ಇನ್ನು ಕೆಲವರು ಜ್ಞಾನವನ್ನು ಸಂಪಾದಿಸಿಕೊಳ್ಳುವವರು ಇರುತ್ತಾರೆ. ಯಾರು ಮಾಡಿದಕ್ಕನುಗುಣವಾಗಿ ಅವರು ಯೋನಿ ದ್ವಾರವನ್ನು ಅಂದರೆ ತಾಯಿಯ ಗರ್ಭವನ್ನು ಹೊಂದುತ್ತಿದ್ದಾರೆ.

ಪಾಪಗಳನ್ನು ಮಾಡಿದರೆ ದುಃಖ ಉಂಟಾಗುವಂತ ತಂದೆ ತಾಯಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ, ಪುಣ್ಯಗಳನ್ನು ಮಾಡಿದರೆ ಭೋಗಗಳನ್ನು ಒದಗಿಸುವಂತೆ ಇರುವ ತಂದೆ-ತಾಯಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ, ಜ್ಞಾನವನ್ನು ಹೊಂದಿದರೆ ಯೋಗಿಗಳ ತಂದೆ-ತಾಯಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ, ಇನ್ನು ಇದಕ್ಕಿಂತ ಬೇರೆ ದಾರಿ ಇಲ್ಲ.

ಈ ವಿಷಯವನ್ನಾ ಮರಣಾನಂತರ ಜೀವನದಲ್ಲಿ ಹೇಳಿಕೊಂಡಿದ್ದೇವೆ, ಪಾಪ ಕರ್ಮಗಳನ್ನು ಮಾಡಿದವನು ಭುವರ್ಲೋಕವನ್ನು, ಪುಣ್ಯಕರ್ಮಗಳನ್ನು ಮಾಡಿದವನು

ಸುವರ್ಲೋಕವನ್ನು, ಜ್ಞಾನವನ್ನು ಹೊಂದಿದವನು ಜನಾಲೋಕವನ್ನು ದಾಟಿ ಮಹಾ ಲೋಕವನ್ನೋ, ತಪೋ ಲೋಕವನ್ನೋ ಸೇರಿಕೊಳ್ಳುತ್ತಾರೆಂದು. ಮರಣಾನಂತರ ಜೀವನದಲ್ಲಿ ಇನ್ನೂ ಏನು ಹೇಳಿಕೊಂಡಿದ್ದೇವೆಂದರೆ ಈ ಪಾಪ ಕರ್ಮಗಳನ್ನು, ಪುಣ್ಯ ಕರ್ಮಗಳನ್ನು ಮಾಡಿದವರು ಮರಣಿಸಿದರೆ ಅವರನ್ನು ಕರೆದುಕೊಂಡು ಹೋಗುವುದಕ್ಕೆ ಪಿತೃ ದೇವತೆಗಳು ಬರುತ್ತಾರೆ, ಆದರೆ ಜ್ಞಾನವುಳ್ಳವರು ಮರಣಿಸಿದರೆ ಅವರನ್ನು ಕರೆದುಕೊಂಡು ಹೋಗುವುದಕ್ಕೆ ಯೋಗಿಗಳು ಬಂದು ಕರೆದೊಯ್ಯುತ್ತಾರೆಂದು, ಇದು ಸೃಷ್ಟಿಯಲ್ಲಿರುವ ಏರ್ಪಾಟೆಂದು ಹೇಳಿಕೊಂಡಿದ್ದೇವೆ.

ಪಿತೃದೇವತೆಗಳು ಅಂದರೆ ಯಾರೋ ಅಲ್ಲ, ನಮಗಿಂತಲೂ ಮೊದಲು ಮರಣಿಸಿದವರು, ಅವರನ್ನೇ ಪಿತೃದೇವತೆಗಳು ಎನ್ನುತ್ತಾರೆ. ಭೂಮಿಯ ಮೇಲೆ ಕಾಣಿಸುವುದು 800 ಕೋಟಿ ಆತ್ಮಗಳು, ಆದರೆ ಇನ್ನೂ ಕೋಟ್ಯಾನುಕೋಟಿ ಲೋಕಗಳಲ್ಲಿ, ಕೋಟ್ಯಾನು ಕೋಟಿ ಆತ್ಮಗಳಿವೆ. ಆ ಮೇಲಿನ ಲೋಕಗಳಲ್ಲಿ ಏನು ಮಾಡುತ್ತಿರುತ್ತಾರೆಂದರೆ, ಅವರಿಗೆ ಒಂದೊಂದು ರೀತಿಯಾದ ಕೆಲವನ್ನು ಕೊಡಲಾಗುತ್ತದೆ. ಹಾಗೆ ಯಾವಾಗಿನಿಂದಲೂ ಇರುವವರೂ ಕೂಡಾ ಇರುತ್ತಾರೆ.

ಹಾಗೆ ಕೆಲವರಿಗೆ ಈ ಮರಣಿಸಿದವರನ್ನು ಕರೆದುಕೊಂಡು ಹೋಗುವ ಕೆಲಸವನ್ನು ಒಪ್ಪಿಸಲಾಗುತ್ತದೆ. ಯಾವನು ಯಾವ ಕರ್ಮವನ್ನು ಮಾಡಿದ್ದಾನೋ ಅವನಿಗೆ ಯಾವ ಲೋಕಕ್ಕೆ ಕರೆದುಕೊಂಡು ಹೋಗಬೇಕೆಂಬ ಕೆಲಸವನ್ನು ಹೇಳಲಾಗುತ್ತದೆ. ಅವರನ್ನು ಕರೆದುಕೊಂಡು ಹೋಗಿ ಆ ಲೋಕಕ್ಕೆ ಒಪ್ಪಿಸುತ್ತಾರೆ.

ನೀವು ನೋಡಿ ದೊಡ್ಡ ದೊಡ್ಡ ಇಂಜಿನಿಯರಿಂಗ್ ಕಾಲೇಜುಗಳಲ್ಲಾಗಲೀ, ಮೆಡಿಕಲ್ ಕಾಲೇಜುಗಳಲ್ಲಾಗಲಿ, ವಿಶ್ವವಿದ್ಯಾನಿಲಯಗಳಲ್ಲಾಗಲಿ, ಹೊಸದಾಗಿ ಸೇರಿದವರು ಬಂದಾಗ ಅದಕ್ಕೂ ಮೊದಲು ಇದ್ದ ಸೀನಿಯರ್‌ಗಳು ಪ್ರವೇಶ ದ್ವಾರಗಳ ಬಳಿ ಇದ್ದು ಆ ಬಂದವರಿಗೆ ತರಗತಿ ಕೋಣೆ, ಕಛೇರಿ ಕೋಣೆ, ಹಾಸ್ಟೆಲ್‌ಗಳೆಲ್ಲವನ್ನು ತೋರಿಸುತ್ತಾ ಮಾರ್ಗದರ್ಶನ ಮಾಡುತ್ತಿರುತ್ತಾರೆ. ಇಲ್ಲದಿದ್ದರೆ ಅವರಿಗೆ ಎಲ್ಲಿಗೆ ಹೋಗಬೇಕೆಂದು ಹೇಗೆ ತಿಳಿಯುತ್ತದೆ? ಮತ್ತೇ ಒಂದು ಭೂಮಿಯೇ ಇಷ್ಟೆಲ್ಲಾ ಇದ್ದರೆ ಹಾಗೆ ಅಪಾರವಾಗಿರುವ ಈ ಲೋಕಗಳಲ್ಲಿ ಹೇಗೆ ತಿಳಿಯುತ್ತದೆ? ಹೇಗೆ ಹೊಗಬಲ್ಲನು? ಇವನ್ನೆಲ್ಲಾ ಗೈಡ್ ಮಾಡುವುದಕ್ಕೆ ಅವರಿರುತ್ತಾರೆ.

ಅವರು ಮಾಡಿರುವಂತ ಕರ್ಮಗಳು, ಜ್ಞಾನಗಳ ಪ್ರಕಾರ ದೇಹವನ್ನು ಹೊಂದಬೇಕು. ಆದ್ದರಿಂದ ಒಂದು ಯೋನಿದ್ವಾರವನ್ನು ಅಂದರೆ ತಾಯಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ, ಆ ತಾಯಿಯ ಗರ್ಭದಲ್ಲಿ ಪ್ರವೇಶಿಸುತ್ತಾರೆ. ಹಾಗೆ ಪ್ರವೇಶಿಸಿದವನು. ಆ ತಾಯಿಯ ಗರ್ಭವನ್ನು ಆಯ್ಕೆ ಮಾಡಿಕೊಂಡವರು, ಅದಕ್ಕೂ ಮೊದಲು ಮರಣಿಸಿ, ಶರೀರವನ್ನು ಬಿಟ್ಟು ಮತ್ತೇ ಹೊಸ ಶರೀರವನ್ನು ತೆಗೆದುಕೊಂಡಿರುವಂತವರು.

ಅದಕ್ಕೂ ಮೊದಲು ಒಬ್ಬ ಬಡವನಾಗಿರಬಹುದು, ಒಬ್ಬ ಧನಿಕನಾಗಿ ಇರಬಹುದು, ಸ್ತ್ರೀಯಾಗಿರಬಹುದು, ಪುರುಷನಾಗಿರಬಹುದು, ಬೇಡಿಕೊಳ್ಳುವವನಾಗಿರಬಹುದು, ಹಾಗೆ ಇರುವಾಗ ಮಾಡಿದ ಕರ್ಮಗಳನ್ನಾಧರಿಸಿ ಆ ಯೋನಿದ್ವಾರವನ್ನು ಅಂದರೆ ತಾಯಿ ಗರ್ಭವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ತಾಯಿಯ ಗರ್ಭದಿಂದ ಹೊರಗೆ ಬಂದೊಡನೆ ಎಲ್ಲಾ ಮರೆತು ಹೋಗುತ್ತಾರೆ.

ಆ ಮರೆವು ಎನ್ನುವುದು ಸೃಷ್ಟಿಯಲ್ಲಿರುವ ಏರ್ಪಾಡು. ಅದಕ್ಕೆ ಇವನು ನನ್ನ ಮಗ, ಈಕೆ ನನ್ನ ಮಗಳು ಎಂದುಕೊಳ್ಳುತ್ತಾರೆ. ನೆನಪಿಟ್ಟುಕೊಳ್ಳಿ ಅವರು ಇವರ ಮಗನಲ್ಲ, ಮಗಳು ಅಲ್ಲ, ಅದಕ್ಕು ಮೊದಲು ಮರಣಿಸಿದ ಒಬ್ಬ ಮುದುಕ, ಮತ್ತೆ ಹೊಸದಾಗಿ ಜನ್ಮಿಸಬೇಕಾಗಿದೆ.

ಅದಕ್ಕೆ ಜ್ಞಾನವಿದ್ದವನು ವಿಪರೀತವಾದ ಮಮಕಾರವನ್ನು ಹೊಂದಿರುವುದಿಲ್ಲ, ಅವರಿಗಾಗಿ ಇವರ ಜೀವನವನ್ನು ಹಾಳು ಮಾಡಿಕೊಳ್ಳುವುದಿಲ್ಲ. ಜ್ಞಾನವನ್ನು ಹೊಂದದಿದ್ದರೆ ಜನಾಲೋಕದ ಕೆಳಗೇ ಇರುತ್ತಾರೆ. ಪಾಪ, ಪುಣ್ಯಗಳನ್ನು ಮಾಡುತ್ತಾ ಇದ್ದರೆ ಎಷ್ಟು ಜನ್ಮಗಳನ್ನೆತ್ತಿದ್ದರೂ ಜನಾಲೋಕವನ್ನು ದಾಟಲಾರರು.

ಅದಕ್ಕೆ ನಾನು ಹೇಳುತ್ತಾ ಇರುತ್ತೇನೆ, ನಿಜವಾಗಿಯೂ ಇರುವ ಲೋಕಗಳು ಏನು? ನಾವು ಏನನ್ನು ಸೇರಬೇಕು? ಏನನ್ನು ಸಾಧಿಸಬೇಕು? ಎಂಬುದನ್ನು ತಿಳಿದುಕೊಳ್ಳಬೇಕೆನ್ನುತ್ತೇನೆ.

ಆದ್ದರಿಂದ ಎಷ್ಟು ನೀವು ಜ್ಞಾನವನ್ನು ಹೊಂದಿದರೆ ನೀವು ಅಷ್ಟು ಶ್ರೇಷ್ಠರಾಗುತ್ತೀರಿ, ಉನ್ನತ ಲೋಕಗಳಿಗೆ ಹೋಗುತ್ತೀರಿ, ಮರು ಜನ್ಮದಲ್ಲಿ ಉನ್ನತ ಸ್ಥಿತಿಯನ್ನು ಹೊಂದುತ್ತೀರೆಂದು ತಿಳಿದುಕೊಳ್ಳಿ.

ಶ್ರೀ ಕೃಷ್ಣನು ಹೇಳಿಲ್ಲವೇ? ಯಾರಾದರೆ ಈ ಯೋಗ ಮಾರ್ಗವನ್ನು ಅನುಸರಿಸುತ್ತಾರೋ! ಮರಣಿಸಿದ ನಂತರ ಅವರು ಶ್ರೀಮಂತರ ಕುಟುಂಬದಲ್ಲಿಯಾಗಲಿ, ಯೋಗಿಗಳ ಗೃಹಗಳಲ್ಲಾಗಲಿ ಜನ್ಮಿಸುತ್ತಾರೆಂದು, ಅವರಿಗೆ ಅಂತಹ ಯೋನಿ ದ್ವಾರವು ಲಭಿಸುತ್ತದೆ.

**ಇಲ್ಲಿ ಯಮಧರ್ಮರಾಜನು ಏನು ಹೇಳಿದ್ದಾನೆಂದರೆ "ಕರ್ಮ ಜ್ಞಾನಗಳ ಪ್ರಕಾರ, ದೇಹವನ್ನು ಹೊಂದುವುದಕ್ಕಾಗಿ ಯೋನಿ ದ್ವಾರವನ್ನು ಹೊಂದುತ್ತಿದ್ದಾರೆ" ಎಂದು ಹೇಳಿದ್ದಾರೆ.**

ಯೋನಿ ದ್ವಾರಗಳಲ್ಲಿ ಪ್ರವೇಶಿಸಿದರೆ ಅಂದರೆ ಆ ಗರ್ಭದಲ್ಲಿ ಪ್ರವೇಶಿಸಿದರೇನೇ ಆ ಯೋನಿ ದ್ವಾರದ ಮೂಲಕ ಹೊರಗೆ ಬರುತ್ತಾರೆ. ಇಲ್ಲದಿದ್ದರೆ ಬರಲಾರರು. ಕೆಲವರು

ಸ್ಥಾವರತ್ವವನ್ನು ಹೊಂದುತ್ತಿದ್ದಾರೆ. ಸಂಚರಿಸುವಂತವುಗಳನ್ನು ಜಂಗಮಗಳು ಎನ್ನುತ್ತಾರೆ, ಸಂಚರಿಸದವುಗಳನ್ನು ಸ್ಥಾವರಗಳು ಎನ್ನುತ್ತಾರೆ. ವೃಕ್ಷಗಳು, ಖನಿಜಗಳು ಸ್ಥಾವರಗಳು.

ಚೆನ್ನಾಗಿ ಪಾಪಗಳನ್ನು ಮಾಡಿ, ಪೂರ್ತಿ ಅಜ್ಞಾನದಿಂದ ಜೀವಿಸಿ ಅವನು ಮಾನವನಾಗಿ ಜೀವಿಸುವ ಅರ್ಹತೆ ಇಲ್ಲದಾಗ ಅಂತಹ ಜನ್ಮಗಳು ಬರುತ್ತವೆ. ಅದು ಬಹಳ ಕೆಲ ಜನರಿಗೆ ನಡೆಯುತ್ತದೆಂದು ಪತ್ರೀಜಿಯವರು ಹೇಳಿದ್ದಾರೆ.

ಆದರೆ ಅದೂ ಕೂಡಾ ಅವಕಾಶವಿದೆ, ನಾವು ಇಲ್ಲಿ ಮಾಡುವ ಕರ್ಮಗಳನ್ನಾಧರಿಸಿ, ಕೆಲಸಗಳನ್ನಾಧರಿಸಿ ನೀವು ಅಂತಹ ಜನ್ಮಗಳನ್ನು ತೆಗೆದುಕೊಳ್ಳಬೇಕಾದ ಅಗತ್ಯವೂ ಕೂಡಾ ಇರುತ್ತದೆ. ಆದರೆ ಪತ್ರೀಜಿಯವರು ಏನು ಹೇಳಿದ್ದಾರೆಂದರೆ ಒಂದು ಬಾರಿ ಮಾನವ ಜನ್ಮದಲ್ಲಿ ಪ್ರವೇಶಿಸಿದ ನಂತರ ಮತ್ತೇ ಮಾನವ ಜನ್ಮವೇ ಬರುತ್ತದೆ. ಕೆಲವು ಪ್ರತ್ಯೇಕ ಸಂದರ್ಭಗಳಲ್ಲಿ ಹೊರತು ಎಂಬ ಮಾತನ್ನು ಕೂಡಾ ಅವರು ಬಳಸಿದ್ದಾರೆ.

*** ***

ನೀವು, ನಾನು ಒಂದೇ.....

ನಾನು ಸ್ವಲ್ಪ ಮುಂದೆ..... ನೀವು ಹಿಂದೆ ಅಷ್ಟೇ

**– ಬ್ರಹ್ಮರ್ಷಿ ಪಿತಾಮಹಾ ಪತ್ರೀಜಿ**

ಅಜ್ಞಾನಿಗಳ ಸಂಸಾರ ನರಕವಾಗಿರುತ್ತದೆ.

ಆತ್ಮಜ್ಞಾನಿಗಳ ಸಂಸಾರ ಸ್ವರ್ಗವಾಗಿರುತ್ತದೆ.

**– ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್ ಸಾರ್**

ಆತ್ಮಜ್ಞಾನಿ ಪರಿಸರಕ್ಕನುಗುಣವಾಗಿ ವರ್ತಿಸುವುದಿಲ್ಲ,

ಅಂತರಂಗವನ್ನು ಅನುಸರಿಸಿ ವರ್ತಿಸುತ್ತಾನೆ.

**– ಮೇಡಂ ಬ್ಲಾವುಟಸ್ಕಿ**

# 10. ಸರ್ವ ಜೀವಿಗಳಲ್ಲಿ ಪರಬ್ರಹ್ಮನು ಎಚ್ಚರವಾಗಿರುತ್ತಾನೆ

**"ಯಮಧರ್ಮರಾಜನು ಏನು ಹೇಳಿದನೆಂದರೆ" ನಿದ್ರಿಸಿರುವ ಸರ್ವ ಜೀವಿಗಳಲ್ಲಿ ಯಾವ ಪುರುಷನು ಎಚ್ಚರವಾಗಿ ಇದ್ದಾನೋ ಅದೇ ನಾಶರಹಿತವಾದ, ಪರಿಶುದ್ಧವಾದ ಬ್ರಹ್ಮವೆಂದು ಹೇಳಿದನು.**

ಆ ಪರಮಾತ್ಮನಲ್ಲಿಯೇ ಅಂದರೆ ಆತನಲ್ಲಿಯೇ ಸಮಸ್ತ ಲೋಕಗಳು ಆಶ್ರಯಿಸಿವೆ, ಅದನ್ನು ಯಾರೂ ಅತಿಕ್ರಮಿಸಲಾರರು, ಇದೇ ನೀನು ಕೇಳಿದ ಆತ್ಮಸ್ವರೂವು. ಒಬ್ಬನೇ ಆದ ಅಗ್ನಿ ಯಾವ ವಿಧವಾಗಿ ಲೋಕದೊಳಗೆ ಪ್ರವೇಶಿಸಿ ಆಯಾ ರೂಪಕ್ಕೆ ರೂಪ ಉಳ್ಳದ್ದಾಗಿ ಆಯಿತೋ. ಆ ವಿಧವಾಗಿಯೇ ಒಂದೇ ಆತ್ಮ ಆಯಾ ಭೂತಗಳಲ್ಲಿ ಪ್ರವೇಶಿಸಿ ಹೊರಗಿನಿಂದ ಆಯಾ ರೂಪಗಳಿಗೆ ಸಮಾನ ರೂಪವುಳ್ಳದ್ದಾಗಿ ಆಗುತ್ತದೆ.

ಆ ಪರಬ್ರಹ್ಮವೊಂದರ ಲಕ್ಷಣ ಈ ವಿಧವಾಗಿ ವಿವರಿಸಿದನು. ಒಬ್ಬನೇ ಆದ ಅಗ್ನಿ ಯಾವ ವಿಧವಾಗಿ ಲೋಕವನ್ನು ಪ್ರವೇಶಿಸಿ, ಅಂದರೆ ಅಗ್ನಿಗಳು ಎರಡು ರೀತಿಯಾಗಿ ಏನಿಲ್ಲ, ಒಂದೇ ಅಗ್ನಿ.

ಅಗ್ನಿ ಏನು ಮಾಡಿತೆಂದರೆ ಲೋಕದಲ್ಲಿ ಪ್ರವೇಶಿಸಿತು. ಲೋಕದಲ್ಲಿ ಎಷ್ಟೋ ರೂಪಗಳಿವೆ. ನೋಡುತ್ತಿದ್ದೇವಲ್ಲಾ 84 ಲಕ್ಷಗಳ ರೀತಿಯ ರೂಪಗಳ ಸಮಾನ ರೂಪವುಳ್ಳದಾಗಿ ಆಯಿತು ಎಂದನು.

ಅಂದರೆ ಪ್ರತಿಯೊಬ್ಬರಲ್ಲಿ ಅಗ್ನಿ ಇದೆ ಎಂಬುದು ನಮಗೆ ಅರ್ಥವಾಗುತ್ತದೆ. ಅಂದರೆ ಪ್ರತಿ ರೂಪವು ಅಗ್ನಿಯಿಂದಲೇ ತಯಾರಿಸಲ್ಪಟ್ಟಿದೆ. ಆದ್ದರಿಂದ ಯಾವ ರೂಪವನ್ನು ತೆಗೆದುಕೊಂಡರೂ ಆ ರೂಪವೆಲ್ಲಾ ವ್ಯಾಪಿಸಿದೆ.

ಮಾನವ ರೂಪವನ್ನೇ ತೆಗೆದುಕೊಳ್ಳೋಣ, ಶರೀರವು ಬಿಸಿಯಾಗಿರುತ್ತದೆ, ಅದೇ ಮರಣಿಸಿದ ಮಾನವನ ಶರೀರವು ತಣ್ಣಗಾಗಿಬಿಡುತ್ತದೆ. ಜೀವಿಸಿದ್ದಾನೆ ಅಂದರೆ ಬೆಚ್ಚಗೆ ಇರುತ್ತದೆ, ಕಾರಣ ಅಗ್ನಿ ಇದೆಯಾದರಿಂದ ಪಂಚಭೂತಗಳಲ್ಲಿ ಒಂದಾದಂತ ಅಗ್ನಿ ಇದೆಯಾದ್ದರಿಂದ ಆದ್ದರಿಂದ ಅಗ್ನಿಯು ಶರೀರವನ್ನೆಲ್ಲಾ ವ್ಯಾಪಿಸಿದೆಯಾದ್ದರಿಂದ, ಆ ರೂಪವನ್ನು ತೆಗೆದುಕೊಂಡಿದೆ ಅದು.

ಶರೀರದಲ್ಲಿರುವ ಅಗ್ನಿಯನ್ನು ನೀವು ಫೋಟೋ ತೆಗೆದರೆ ಮಾನವಾಕಾರ ಹೇಗಿದೆಯೋ! ಅದರ ಆಕಾರವು ಕೂಡಾ ಹಾಗೆಯೇ ಇರುತ್ತದೆ. ನೋಡುವುದಕ್ಕೆ

ಪ್ರೇತಾತ್ಮಗಳೆಂದು ಸಿನಿಮಾಗಳಲ್ಲಿ ತೋರಿಸುತ್ತಾರೆ. ಅದೇ ರೀತಿಯಾದ ರೂಪವಾಗಿ ತಯಾರು ಮಾಡುತ್ತಾರೆ.

ಸ್ತ್ರೀಯರಾದರೆ ಸ್ತ್ರೀರೂಪವನ್ನು, ಪುರುಷನಾದರೆ ಪುರುಷ ರೂಪವನ್ನು ತಯಾರು ಮಾಡುತ್ತಾರೆ. ರೂಪವು ಕಾಣಿಸುವುದಿಲ್ಲವಾಗಲಿ, ಆ ಪ್ರೇತಾತ್ಮವೊಂದರ ಆಕಾರವು ಹಾಗೆಯೇ ಕಾಣಿಸುತ್ತದೆ.

ಶರೀರದಲ್ಲಿ ಒಳಗೆ ಅಗ್ನಿಯು ಕಾಣಿಸುವುದಿಲ್ಲವಾಗಲಿ, ಒಟ್ಟು ಶರೀರವೆಲ್ಲಾ ವ್ಯಾಪಿಸಿದೆ. ಎಲ್ಲಿ ನಾವು ಮುಟ್ಟಿದರೂ ಆ ಬಿಸಿಯು ಕಾಣಿಸುತ್ತದೆ. ನಿಮಗೆ ಹೆಚ್ಚಾಗಿ ಶೀತಕಾಲದಲ್ಲಿ ಗಮನಿಸಿದರೆ ಚೆನ್ನಾಗಿ ತಿಳಿಯುತ್ತದೆ. ಚಳಿಗಾಲದಲ್ಲಿ ಗಂಡ–ಹೆಂಡತಿ ಆ ಉಷ್ಣತೆಗಾಗಿಯೇ ಒಂದಾಗುತ್ತಿರುತ್ತಾರೆ. ಎಷ್ಟು ರಗ್ಗುಗಳನ್ನು ಹೊದ್ದುಕೊಂಡರೂ ಚಳಿ ಹೋಗದು. ಆದರೆ ಗಂಡ–ಹೆಂಡತಿ ಒಂದಾದರೆ ಆ ಚಳಿಯು ಹೋಗುತ್ತದೆ, ಕಾರಣ ಇಬ್ಬರಲ್ಲೂ ಕೂಡಾ ಅಷ್ಟು ಬಿಸಿ ಇರುತ್ತದೆಯಾದ್ದರಿಂದ.

ಅಗ್ನಿಯು ಶರೀರವೆಲ್ಲಾ ವ್ಯಾಪಿಸಿದೆ ಎಂದು ಹೇಳುವುದೇ ಇದರ ಉದ್ದೇಶ. ಒಬ್ಬನೇ ಆದ ಅಗ್ನಿಯು ಯಾವ ವಿಧವಾಗಿ ಲೋಕದಲ್ಲಿ ಪ್ರವೇಶಿಸಿ ಆಯಾ ರೂಪಕ್ಕೆ ಸಮಾನ ರೂಪವುಳ್ಳದ್ದಾಗಿ ಆಯಿತೋ, ಆ ವಿಧವಾಗಿಯೇ ಒಂದೇ ಆದಂತಹ ಆತ್ಮ ಆಯಾ ಭೂತಗಳಲ್ಲಿ ಪ್ರವೇಶಿಸಿ ಹೊರಗೆ ಇರುವ ಆಯಾ ರೂಪಗಳಿಗೆ ಸಮಾನ ರೂಪವುಳ್ಳದ್ದಾಗಿ ಆಗುತ್ತದೆ.

ಎಲ್ಲೆಡೆ ಇರುವ ಅದರ ಫೋಟೋವನ್ನು ತೆಗೆದರೆ ಏನಾಗುತ್ತದೆ? ಅದೇ ರೂಪವಾಗಿ ಕಾಣಿಸುತ್ತದೆ. ಆತ್ಮ ಅಂದರೆ ಪ್ರೇತಾತ್ಮ, ಅಂದರೆ ಮರಣಿಸಿದವರು ಆ ಪ್ರೇತಾತ್ಮವನ್ನು ತೋರಿಸಬೇಕೆಂದರೆ ಅದನ್ನೇ ತೋರಿಸುತ್ತಾರೆ. ಪ್ರೇತಾತ್ಮದ ಬಾಹ್ಯರೂಪವನ್ನು ತೋರಿಸುವುದಿಲ್ಲ ಆದರೆ ಅದೇ ರೂಪವುಳ್ಳಂತೆ ತೋರಿಸುತ್ತಾರೆ. ಸಿನಿಮಾದಲ್ಲಿ ಕಾಣಿಸುವುದಕ್ಕೆ ನಮಗೆ ಅರ್ಥವಾಗುವುದಕ್ಕೆ ಬಿಳಿಯ ಬಟ್ಟೆಗಳನ್ನು ಹಾಕುತ್ತಾರೆ. ನಿಜವಾಗಿ ಬಿಳಿಯ ಬಟ್ಟೆಗಳನ್ನು ಎಲ್ಲಿ ಹಾಕಿಕೊಳ್ಳುತ್ತಾರೆ?

ಆದ್ದರಿಂದ ಶರೀರವೆಲ್ಲಾ ವ್ಯಾಪಿಸಿದೆ. ಸೃಷ್ಟಿಯಲ್ಲಿಯೇ ಅಣುವಣುವು ಇರುವಾಗ ಶರೀರದಲ್ಲಿ ಇರುವುದಿಲ್ಲವೇ? ಶರೀರದಲ್ಲಿ ಪ್ರತಿ ಅಣುವಿನಲ್ಲಿಯೂ ಆತ್ಮಶಕ್ತಿ ಇದೆಯಾದ್ದರಿಂದ ಆ ಅಣುವು ಜೀವಿಸಿದೆ.

ಆದ್ದರಿಂದ ಶರೀರವೆಂಬುದು ಕೋಟ್ಯಾನು ಕೋಟಿ ಅಣುಗಳಿಂದ ಮಾಡಲ್ಪಟ್ಟಿದೆ. ಪ್ರತಿ ಅಣುವಿನಲ್ಲಿಯೂ ಇದೆ. ಆ ಶಕ್ತಿ ಯಾವ ಅಣುವಿನಲ್ಲಿದ್ದರೆ ಆ ಅಣುವು ಜೀವಿಸಿರುತ್ತದೆ, ಆ ಶಕ್ತಿ ಯಾವ ಅಣುವಿನಲ್ಲಿ ನಿಷ್ಕ್ರಮಿಸುತ್ತದೋ ಆ ಅಣುವು ಅದೃಶ್ಯವಾಗುತ್ತದೆ.

ನೀವು ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಮಾನವನು ಮಾನಸಿಕ ಆಂದೋಲನದಲ್ಲಿದ್ದರೂ, ಅಶಾಂತಿಯಿಂದ ಇದ್ದರೂ, ಆತಂಕದಲ್ಲಿದ್ದರೂ, ಮನಸ್ಸು ಮಲಿನವಾಗಿದ್ದರೂ ಏನಾಗುತ್ತದೆ ಎಂದರೆ ಆತ್ಮಶಕ್ತಿ ಕಡಿಮೆಯಾಗುತ್ತಾ ಇರುತ್ತದೆ. ಕಾರಣ ಆತ್ಮಶಕ್ತಿಯ ಸುತ್ತಲೂ ಮನಸ್ಸು ಆವರಿಸಿದೆ. ಆತ್ಮ ಸುತ್ತಲೂ ಆವರಿಸಿ ಇರುವ ಮನಸ್ಸು ಮಲಿನವಾಗಿರುವುದಿರಂದ ಆ ಆತ್ಮಶಕ್ತಿಯು ಈ ದೇಹದಲ್ಲಿ ವ್ಯಕ್ತವಾಗದು. ಒಂದೊಂದು ಸಾರಿ ಕೆಲವು ಭಾಗಗಳಲ್ಲಿ ಆತ್ಮಶಕ್ತಿಯು ವ್ಯಕ್ತವಾಗುವುದಿಲ್ಲ. ಆ ಮನಸ್ಸೊಂದರ ಪ್ರಭಾವವು ಹೆಚ್ಚಾಗಿರುವುದರಿಂದ, ಆಗ ಏನಾಗುತ್ತದೆ ಎಂದರೆ ಆ ಭಾಗದಲ್ಲಿ ಇರುವಂತ ಅಣುಜಾಲವು ಈ ಆತ್ಮಶಕ್ತಿ ಇಲ್ಲದಿರುವಂತಾದ್ದಾಗಿ ಬಿಡುತ್ತವೆ.

ಆತ್ಮಶಕ್ತಿ ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಆ ಅಣುಗಳಲ್ಲಿ ಈ ಬ್ಯಾಕ್ಟೀರಿಯಾಗಳು, ವೈರಸ್‌ಗಳಂತವುಗಳು ವ್ಯಾಪಿಸುತ್ತವೆ, ಆ ಅಣುಗಳನ್ನು ತುಂಡರಿಸುತ್ತವೆ, ಆ ಅಣುಗಳಲ್ಲಿ ನಾಶ ಮಾಡುತ್ತವೆ. ಅವು ಕೊಳೆಯುತ್ತವೆ, ಶರೀರದಲ್ಲಿ ಅದು ಚೆನ್ನಾಗಿ ವೃದ್ಧಿಯಾದರೆ, ಯಾವುದೋ ಒಂದು ಅನರ್ಥಕ್ಕೆ ದಾರಿಯಾಗುತ್ತದೆ.

ಹಾಗೆ ಏನೇ ವ್ಯತ್ಯಾಸವಾದಾಗ ಡಾಕ್ಟರ್ ಬಳಿಗೆ ಹೋದರೆ, ಏನೆನ್ನುತ್ತಾರೆಂದರೆ ನಿನಗೆ ಸೋಂಕು ತಗುಲಿದೆ, ಏಡ್ಸ್, ಕ್ಯಾನ್ಸರ್ ಇಂತಹವು ಬಂದಿವೆ ಎನ್ನುತ್ತಾರೆ. ಏಕೆ ಬಂದಿತು? ಅಂದರೆ ಆ ಭಾಗದಲ್ಲಿ ಆತ್ಮಶಕ್ತಿಯು ಕ್ಷೀಣಿಸಿದೆ. ಯಾವಾಗಾದರೆ ಶರೀರದಲ್ಲಿ ಯಾವ ಭಾಗದಲ್ಲಾದರೂ ಆತ್ಮಶಕ್ತಿಯು ಇಲ್ಲದೆ ಹೋದರೂ ಈ ಬ್ಯಾಕ್ಟೀರಿಯಾ, ವೈರಸ್ ಇವೆಲ್ಲಾ ಕೂಡಾ ತಕ್ಷಣವೇ ಕ್ಷಣಗಳಲ್ಲಿ ಸೇರಿಕೊಂಡು ಬಿಡುತ್ತವೆ.

ಮತ್ತೆ ಅಲ್ಲಿಯವರೆಗೆ ಏಕೆ ಸೇರಿಕೊಳ್ಳಲಿಲ್ಲ ಅಂದರೆ ಈ ಶಕ್ತಿಯು ಕಾಪಾಡುತ್ತಿದೆ, ಅಣುವಣುವನ್ನು ಕಾಪಾಡುತ್ತಿದೆ, ಅಂದರೆ ನಿಮ್ಮನ್ನು ಇಷ್ಟಾಗಿ ಕಾಪಾಡುತ್ತಿದೆ, ಅನುಕ್ಷಣವು ರಕ್ಷಿಸುತ್ತಿದೆ, ಈ ಆತ್ಮವೊಂದರ ಶಕ್ತಿಯನ್ನು ಗುರುತಿಟ್ಟುಕೊಳ್ಳಬೇಕೆಂದು ಯಾರಿಗೂ ಅರ್ಥವಾಗುತ್ತಿಲ್ಲ. ಎಷ್ಟು ಹೊತ್ತೂ ನಾನು ನಾನು ಎನ್ನುತ್ತೀರಿ. ಆ ಶಕ್ತಿಯು ರಕ್ಷಿಸಿದ್ದರಿಂದಲೇ ನೀನು ಇರುವೆ, ಇಲ್ಲದಿದ್ದರೆ ನೀನು ಅದೃಶ್ಯವಾಗಿಬಿಡುವೆ.

ಅದಕ್ಕೆ ನೀವು ನೋಡಿ, ಯಾರಾದರೆ ಮರಣಿಸಿದಾಗ ನೀವು ಗಮನಿಸಿದರೆ ಅವರಲ್ಲಿ ಆತ್ಮವು ಪೂರ್ತಿಯಾಗಿ ನಿಷ್ಕ್ರಮಿಸುತ್ತದೆ. ಮರಣಿಸಿದ ಶವದಲ್ಲಿ ಬ್ಯಾಕ್ಟೀರಿಯಾಗಳು, ವೈರಸ್‌ಗಳೆಲ್ಲವು ಒಳಗೆ ನಿಮಿಷಗಳಲ್ಲಿ ವೃದ್ಧಿಯಾಗಿ ಬಿಡುತ್ತವೆ. ಅದಕ್ಕೆ ದೊಡ್ಡವರು ಬೇಗ ಬೇಗ ತೆಗೆದುಕೊಂಡು ಹೋಗಿರಿ ಎನ್ನುತ್ತಾರೆ.

ತೆಗದುಕೊಂಡು ಹೋಗದಿದ್ದರೆ ಏನಾಗುತ್ತದೆ ಅಂದರೆ ಆ ವೈರಸ್‌ಗಳು ಎಲ್ಲ ದ್ವಿಗುಣಗೊಂಡು ಹುಳುಗಳಾಗಿ ತಯಾರಾಗಿ ಆ ಹೊಟ್ಟೆಯು ಉಬ್ಬಿಬಿಡುತ್ತದೆ. ಇನ್ನೂ

ಹಾಗೆಯೇ ಇಟ್ಟರೆ ಹೊಟ್ಟೆಯು ಬಿರಿದುಬಿಡುತ್ತದೆ. ಹೊಟ್ಟೆಯೊಡೆದು ಈ ಬ್ಯಾಕ್ಟೀರಿಯಾ ಎಲ್ಲಾ ಹೊರಗೆ ಬಂದು ಗಾಳಿಯಲ್ಲಿ ಬೆರೆತು ಹೋಗಿ ಎಲ್ಲರಲ್ಲಿ ಸೇರಿಕೊಂಡು ಬಿಡುತ್ತವೆ.

ಅವರಿಗೆ ಮತ್ತೇ ಅನೇಕ ರೀತಿಯ ರೋಗಗಳು ಬರುತ್ತವೆ. ಅದಕ್ಕೆ ತೆಗೆದುಕೊಂಡು ಹೋಗಿ ಬಿಡಬೇಕೆನ್ನುತ್ತಾರೆ. ಇನ್ನು ಅದನ್ನು ಹಾಗೆಯೇ ಹೊರಗೆ ಹಾಗೇ ಇಟ್ಟರೂ ಕೂಡಾ ಆ ಬ್ಯಾಕ್ಟಿರಿಯಾಗಳಿಂದ ವೈರಸಗಳಿಂದಾಗಿ ಅನೇಕ ರೀತಿಯ ರೋಗಗಳು ಬರುತ್ತವೆ. ಅದಕ್ಕೆ ಸುಡುವುದೋ, ಮುಚ್ಚಿ ಹೂಳುವುದೋ ಮಾಡುತ್ತಾರೆ. ಕೆಲವು ಮತಾಚಾರಗಳ ಪ್ರಕಾರ ಸುಡುತ್ತಾರೆ, ಕೆಲವು ಮತಾಚಾರಗಳ ಪ್ರಕಾರ ಮುಚ್ಚಿ, ಹೂಳಿಡುತ್ತಾರೆ.

ಇದೆಲ್ಲಾ ಏಕೆ ನಡೆಯಿತು ಎಂದರೆ? ಈ ಶರೀರದಲ್ಲಿ ಆತ್ಮಶಕ್ತಿಯು ಇಲ್ಲದೇ ಹೋಗಿದ್ದರಿಂದ ಜೀವಿಸಿರುವ ಯಾವ ಭಾಗದಲ್ಲಿ ಆತ್ಮಶಕ್ತಿಯು ಲೋಪಿಸುತ್ತದೋ ಅಲ್ಲಿ ಅವು ದಾಳಿ ಮಾಡುತ್ತವೆ. ಅವೇ ಕ್ಯಾನ್ಸರ್, ಏಡ್ಸ್‌ನಂತಹ ರೋಗಗಳು.

ಅದಕ್ಕೆ ಪತ್ರೀಜಿಯವರು ಅನುನಿತ್ಯ ಧ್ಯಾನವೆನ್ನುತ್ತಾರೆ. ಕಾರಣ ಶರೀರದಲ್ಲಿ ಆತ್ಮಶಕ್ತಿ ಹೆಚ್ಚಿಸಿಕೊಳ್ಳುವುದಕ್ಕೆ. ಯಮಧರ್ಮರಾಜನು ಪರಬ್ರಹ್ಮನ ಕುರಿತು, ಪರಮಾತ್ಮನ ಕುರಿತು ಬೋಧಿಸಿದನು. ಇದು ಅರ್ಥವಾದರೆ ಆತ್ಮಕ್ಕೆ ಎಷ್ಟೋ ಪ್ರಾಮುಖ್ಯತೆಯನ್ನು ಕೊಡುತ್ತಾರೆ.

ಆತ್ಮನ ಮುಂದೆ ದೇಹವು ಬಹಳ ಅಲ್ಪಾತಿ ಅಲ್ಪವಾದದ್ದು. ಅಂತಹ ದೇಹಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ, ಆದರೆ ಅನಂತ ಶಕ್ತಿವಂತವಾದಂತಹ "ಆತ್ಮ"ಕ್ಕೆ ನಿಜವಾಗಿಯೂ ಬೆಲೆಯನ್ನು ಕೊಡುತ್ತಿಲ್ಲ, ಹಿಡಿಸಿಕೊಳ್ಳುತ್ತಿಲ್ಲ. ಆದರೆ ಆತ್ಮವೇ ಎಲ್ಲಕ್ಕೂ ಮೂಲ. ಮತ್ತೇ ಅಂತಹ ಮೌಲ್ಯವುಳ್ಳ ಆತ್ಮನ ಕುರಿತು ತಿಳಿದುಕೊಳ್ಳದೇ ಹೋದರೆ ಈ ಜೀವನವು ವ್ಯರ್ಥ. ಭೂಮಿಗೆ ಬಂದಿರುವುದು ಮೋಜು, ಮಸ್ತಿಗಾಗಿ ಅಲ್ಲ, ಆತ್ಮಗಳಾದ ನಾವು ಆತ್ಮನನ್ನು ಹಿಡಿಸಿಕೊಳ್ಳದೇ ಹೋದರೆ ಆತ್ಮಹಂತಕರು ಆಗುತ್ತೇವೆ.

ನಚಿಕೇತನು ಯಾವ ಪರಬ್ರಹ್ಮನ ಕುರಿತು ಕೇಳಿದನೋ ಆ ಪರಬ್ರಹ್ಮ ಶರೀರದಲ್ಲಿರುವ ಪ್ರತಿ ಕಣದಲ್ಲೂ ವ್ಯಾಪಿಸಿದೆ ಎಂದು ತಿಳಿದುಕೊಳ್ಳಬೇಕು.

*** ***

# 11. ಪರಬ್ರಹ್ಮ ಸರ್ವವನ್ನೂ ಸ್ವಾಧೀನಪಡಿಸಿಕೊಂಡಿದ್ದಾನೆ

**ಯಮಧರ್ಮರಾಜನು ಆತ್ಮನ ಶ್ರೇಷ್ಠತೆಯನ್ನು, ಆ ಪರಬ್ರಹ್ಮನ ಶ್ರೇಷ್ಠತೆಯನ್ನು ಕುರಿತು ಇನ್ನು ಏನು ಹೇಳಿದನೆಂದರೆ ''ಯಾವ ಸ್ವರೂಪವು ಸರ್ವವನ್ನು ಸ್ವಾಧೀನಪಡಿಸಿಕೊಂಡಿದೆಯೋ, ಸರ್ವ ಭೂತಾಂತರಾತ್ಮ ಆದಂತಹ ಯಾವ ಪರಮಾತ್ಮ, ಯಾವ ಮೂಲವನ್ನು, ಅಂದರೆ, ಅವ್ಯಕ್ತವನ್ನು ಅನೇಕ ರೀತಿಯಲ್ಲಿ ಮಾಡುತ್ತಿದ್ದಾನೋ, ಅಂತಹ ಹೃದಯಾಕಾಶದಲ್ಲಿರುವ ಆತ್ಮನನ್ನು ಯಾವ ಧೀರರು ಪ್ರತ್ಯಕ್ಷವಾಗಿ ನೋಡುತ್ತಿದ್ದಾರೋ, ಅಂದರೆ ಸಾಕ್ಷಾತ್ಕರಿಸಿಕೊಳ್ಳುತ್ತಾರೋ, ಅವರಿಗೆ ಶಾಶ್ವತ ಸುಖ ಒದಗುತ್ತದೆ."**

ಇದರ ಕುರಿತು ಸ್ವಲ್ಪ ತಿಳಿದುಕೊಳ್ಳೋಣ. ನಚಿಕೇತನು ಯಮಧರ್ಮರಾಜನ ಪ್ರಲೋಭನೆಗಳಿಗೆ ಬಗ್ಗಲಿಲ್ಲ, ನನಗೆ ಆತ್ಮಸಾಕ್ಷಾತ್ಕಾರ ಮಾರ್ಗವೇ ಬೇಕೆಂದನು. ಇನ್ನು ಏನು ಮಾಡಲಾಗದೆ ಯಮಧರ್ಮರಾಜನು ಪರಬ್ರಹ್ಮನ ಕುರಿತು ಹೇಳಲು ಪ್ರಾರಂಭಿಸಿದನು."

**"ಯಾವ ಸ್ವರೂಪವು ಸರ್ವವನ್ನು ಸ್ವಾಧೀನಪಡಿಸಿಕೊಂಡಿದೆಯೋ, ಸಮಸ್ತವನ್ನು ತನ್ನೊಳಗೆ ಸೆಳೆದುಕೊಂಡಿದೆಯೋ। ಅದೇ ಪರಬ್ರಹ್ಮ"** ಸಮಸ್ತವು ಅಂದರೆ ಈ ಸೃಷ್ಟಿಯಲ್ಲಿ ಎಷ್ಟೋ ರೀತಿಯ ಜೀವರಾಶಿಗಳಿವೆ, ಅಂದರೆ 84 ಲಕ್ಷ ರೀತಿಯವು ಎಂದು ದೊಡ್ಡವರು ಹೇಳಿದ್ದಾರೆ. ಸ್ಥಾವರ ಜಂಗಮಗಳೆಂದು ಅನ್ನುತ್ತಿರುತ್ತಾರೆ. ಅಂದರೆ ಎಷ್ಟೋ ರೀತಿಯ ಜಾತಿಗಳಿವೆ. ವೃಕ್ಷಜಾತಿ, ಖನಿಜ ಜಾತಿ ಇದೆ. ದೇವತೆಗಳು, ಯಕ್ಷರು, ಕಿನ್ನರರು, ಕಿಂಪುರುಷರು, ಗಂಧರ್ವರು ಎನ್ನುವಂತ ಜಾತಿಗಳಿವೆ. ದಿವ್ಯಜಾತಿ ದೇವರು. ಆ ಸ್ವರೂಪ ಅಂದರೆ, 'ಪರಬ್ರಹ್ಮ'ದಲ್ಲಿಯೇ ಇವರೆಲ್ಲರೂ ಇದ್ದಾರೆ. ಇವರು ಹೊರಗೆ ಎಲ್ಲೋ ಇಲ್ಲ.

ಇನ್ನು ಕಣ್ಣಿಗೆ ಕಾಣುವ ಲೋಕಗಳೂ ಇವೆ, ಈ ಕಣ್ಣಿಗೆ ಕಾಣಿಸದ ಲೋಕಗಳೂ ಇವೆ. ಕಾಣದ ಲೋಕಗಳು ಎಷ್ಟೋ ರೀತಿಯಾಗಿವೆ. ಸೂಕ್ಷ್ಮ ಲೋಕಗಳು, ಕಾರಣ ಲೋಕಗಳು, ಮಹಾಕಾರಣ ಲೋಕಗಳು ಎಂದು ಎಷ್ಟೋ ಇವೆ. ಕಾಣಿಸುವ ಲೋಕಗಳನ್ನು ಭೌತಿಕ ಲೋಕಗಳೆನ್ನುತ್ತಾರೆ, ಇವು ಕೋಟ್ಯಾನು ಕೋಟಿ ಇವೆ, ಇವೆಲ್ಲವೂ ಕೂಡಾ ಆತನಲ್ಲಿಯೇ ಇವೆ.

ಈಗ ನೋಡಿ, ನಾವೆಲ್ಲಾ ಕೂಡಾ ಎಲ್ಲ ಜೀವಿಸುತ್ತಿದ್ದೇವೆಂದರೆ ಈ ಭೂಮಿಯ ಮೇಲೆ ಜೀವಿಸುತ್ತಿದ್ದೇವೆ. ಯಾರಾದರೂ ನಡೆಯುತ್ತಾ ಈ ಭೂಮಂಡಲವನ್ನು ಸುತ್ತಿ ಬರಬೇಕೆಂದರೆ ಎಷ್ಟು ವರ್ಷ ಬೇಕಾಗುತ್ತದೋ ಹೇಳಲಾರೆವು. ಅಷ್ಟು ದೊಡ್ಡದು ಈ ಭೂಮಿ, ಆದರೆ ಈ ಪರಬ್ರಹ್ಮನ ಸೃಷ್ಟಿಯಲ್ಲಿ ಇಷ್ಟು ದೊಡ್ಡ ಭೂಮಂಡಲವು ಒಂದು ಕಣದಂತಾದ್ದು ಎಂದು ನೆನಪಿಟ್ಟುಕೊಳ್ಳಿ. ಪರಬ್ರಹ್ಮನ ಶ್ರೇಷ್ಠತೆಯು ನಿಮಗೆ ತಿಳಿಯಬೇಕೆಂದರೆ, ಇಂತಹ ಭೂಮಂಡಲಗಳು ಕೋಟ್ಯಾನು ಕೋಟಿ ಇವೆಯೆಂದು ತಿಳಿದುಕೊಳ್ಳಬೇಕು.

ಅಷ್ಟು ಶ್ರೇಷ್ಠವಾದ ಭೂಮಿಯಲ್ಲಿ ಎಷ್ಟೋ ಖಂಡಗಳು, ದೇಶಗಳು, ರಾಜ್ಯಗಳು, ಜಿಲ್ಲೆಗಳು, ಮಂಡಲ–ತಾಲ್ಲೂಕುಗಳು, ಗ್ರಾಮಗಳು ಎಷ್ಟಿವೆ! ಇವೆಲ್ಲಾ ಸೇರಿದರೆ ಆತನು ಮಾಡಿದ ಸೃಷ್ಟಿಯಲ್ಲಿ ಭೂಮಿ ಒಂದು ಕಣದಂತಾದ್ದು. ಇಂತಹ ಭೌತಿಕವಾದ ಲೋಕಗಳು ಕೋಟ್ಯಾನು ಕೋಟಿ ಇವೆ. ಕಣ್ಣಿಗೆ ಕಾಣಿಸುವ ಭೂಮಿಯೇ ಅಲ್ಲ ಸೂರ್ಯನು, ಚಂದ್ರನು, ನವಗ್ರಹಗಳು, ನಕ್ಷತ್ರಗಳು ಇಂತವುಗಳು ಕೋಟ್ಯಾನುಕೋಟಿ ಇವೆ. ಇಂತಹವು ಎಷ್ಟೋ ಸೇರಿದರೇನೆ ಒಂದು ವಿಶ್ವ. ಇಂತಹ ವಿಶ್ವಗಳು ಎಷ್ಟೋ ಇವೆ.

ಇವೇ ಅಲ್ಲಾ, ಕಾಣಿಸದ ಸೂಕ್ಷ್ಮಲೋಕಗಳೂ ಇವೆ, ಕಾರಣ ಲೋಕಗಳಿವೆ, ಮಹಾ ಕಾರಣ ಲೋಕಗಳಿವೆ. ಎಲ್ಲಿವೆ ಅಂದರೆ? ಆತನಲ್ಲಿಯೇ ಇವೆ. ಮತ್ತೆ ಇವುಗಳಲ್ಲಿ ಎಷ್ಟು ರೀತಿಯವರು ಇದ್ದಾರೆ, 84 ಲಕ್ಷ ರೀತಿಯವರಿದ್ದಾರೆ. ಜೀವಿಗಳು, ಜೀವರಾಶಿಗಳು ಅವೆಲ್ಲಾ ಎಲ್ಲಿವೆ? ಆತನಲ್ಲಿಯೇ ಇವೆ. ಆತನು ಸಮಸ್ತವನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಿದ್ದಾನೆ. ಸ್ವಾಧೀನಪಡಿಸಿಕೊಂಡಿದ್ದಾನೆ.

ಮೂರ್ಖ ಮಾನವರು ಅಂತಹ ಶ್ರೇಷ್ಠವಾದವನ್ನು ಬಿಟ್ಟು, ಒಂದು ಸಣ್ಣ ವಿಗ್ರಹವನ್ನು ಆರಾಧಿಸುತ್ತಿದ್ದಾರೆ, ಅದೇ ದೊಡ್ಡದೆಂದುಕೊಳ್ಳುತ್ತಿದ್ದಾರೆ.

ಅದಕ್ಕೆ ನಚಿಕೇತನು ನನಗೆ ಆ ಪರಬ್ರಹ್ಮ, ಆ ಪರಮಾತ್ಮ ಆ ಆತ್ಮನ ಕುರಿತು ಬೋಧಿಸು ಎಂದನು. ಆತನೇ ಸತ್ಯವಾದವನು, ಶಾಶ್ವತವಾದವನು, ಬದಲಾವಣೆ ಇಲ್ಲದವನು, ಯಾವಾಗಲೂ ಇರುವವನು. ಆತನ ಕುರಿತೇ ಬೋಧಿಸು ಎಂದನು.

ಪತ್ರೀಜಿಯವರು ಕೂಡಾ ನಮಗೆ ಅದನ್ನೇ ಹೇಳಿದ್ದಾರೆ. **"ಏಕೆ ನೀನು ಮಾಡಿದ ಸಣ್ಣ ಗೊಂಬೆಯನ್ನು ಇಟ್ಟುಕೊಳ್ಳುತ್ತಿರುವೆ? ನಿನ್ನನ್ನು ಮಾಡಿದ ಆತನನ್ನೇ ಹಿಡಿದುಕೋ ಎನ್ನುತ್ತಾರೆ. ಆತನು ಸರ್ವವನ್ನೂ ಸ್ವಾಧೀನಪಡಿಸಿಕೊಂಡಿದ್ದಾನೆ.** ಆತನಲ್ಲಿಯೇ ಸಮಸ್ತವೂ ಇದೆ. ಅಂತಹ ಶ್ರೇಷ್ಠವಾದವನನ್ನು ಹಿಡಿದುಕೋ ಎಂದಿದ್ದಾರೆ. ಆ ಮಾರ್ಗವೇ "ಶ್ವಾಸದ ಮೇಲೆ ಗಮನ"ವೆಂದು ಬೋಧಿಸಿದರು. ಆದರೆ ಇದು ಯಾರಿಗೂ ಅರ್ಥವಾಗುತ್ತಿಲ್ಲ.

ಆ ಬ್ರಹ್ಮವನ್ನು ಬಿಟ್ಟು, ಎಲ್ಲವನ್ನೂ ಹಿಡಿದುಕೊಳ್ಳುತ್ತಿದ್ದಾರೆ. ಎಷ್ಟು ವಿಚಿತ್ರವೋ! ಆದ್ದರಿಂದ ಆತ್ಮ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸುವವನಿಗಿಂತ ಮೀರಿದವನು ಯಾರೂ ಇಲ್ಲ ಎಂದು ತಿಳಿದುಕೊಳ್ಳಬೇಕು. ಆ ಕೆಲಸವನ್ನೇ ನಾವೆಲ್ಲಾ ಮಾಡುತ್ತಿದ್ದೇವೆ, ಅದನ್ನೇ ನಚಿಕೇತನು ಕೇಳಿದನು.

ಯಾವ ಸ್ವರೂಪವು ಸರ್ವವನ್ನು ಸ್ವಾಧೀನಪಡಿಸಿಕೊಂಡಿದೆಯೋ ಎಂಬ ಮಾತಿನಲ್ಲಿ ಎಷ್ಟು ಅರ್ಥವಿದೆಯೋ ನೋಡಿರಿ, ನಂತರ ಯಮನು ಇನ್ನು ಏನು ಹೇಳಿದನೆಂದರೆ, **"ಸರ್ವಭೂತಾಂತರಾತ್ಮ ಆದ ಆತನೇ ಪರಮಾತ್ಮ"** ಎಂದು ಕೂಡಾ ಹೇಳಿದ್ದಾನೆ.

ವಿಚಿತ್ರವೇನೆಂದರೆ **"ಎಲ್ಲಾ ಆತನಲ್ಲಿಯೇ ಇವೆ, ಆತನೇ ಎಲ್ಲದರಲ್ಲೂ ಇದ್ದಾನೆ**. ಇದು ಎಷ್ಟು ವಿಚಿತ್ರವೋ! ನೋಡಿರಿ "ಆತನಲ್ಲಿ ಎಲ್ಲರೂ ಇದ್ದಾರೆ ಎಲ್ಲರಲ್ಲೂ ಆತನು ಇದ್ದಾನೆ", ಇದು ಎಲ್ಲಿಯಾದರೂ ಅರ್ಥವಾಗುತ್ತಿದೆಯೇ? ಅದಕ್ಕೆ **"ಸೃಷ್ಟಿಯಲ್ಲಿ ನೀನು ಇರುವೆ, ನಿನ್ನಲ್ಲಿ ಸೃಷ್ಟಿ ಇದೆ"** ಎಂದು ದೊಡ್ಡವರು ಹೇಳುತ್ತಾರೆ.

ಇದನ್ನೇ ಇಲ್ಲಿ ಯಮಧರ್ಮರಾಜನು ಹೇಳುತ್ತಿದ್ದಾನೆ. "ಆ ಪರಮಾತ್ಮನು ಸರ್ವವನ್ನು ಸ್ವಾಧೀನಪಡಿಸಿಕೊಂಡಿದ್ದಾನೆ", ಸರ್ವಭೂತಾಂತರಾತ್ಮ ಅಂದರೆ ಸಮಸ್ತ ಭೂತಗಳು (ಜೀವಿಗಳ) ಅಂತರಂಗದಲ್ಲಿ ಇರುವಂತ ಆತ್ಮ. ಮತ್ತೇ ಅಂತಹ ಪರಮಾತ್ಮ ಏನು ಮಾಡುತ್ತಿದ್ದಾನೆ?

ಯಾವ ಮೂಲವನ್ನು ಅಂದರೆ ಇವೆಲ್ಲವುಗಳಿಗೆ ಮೂಲ ಅಂದರೆ ಸೃಷ್ಟಿಗೆ ಮೂಲ ಆತನು, ಆತನಿಂದಲೇ! ಆತನಿಂದಾಗಿಯೇ! ಆತನನ್ನಾಧರಿಸಿ ಎಲ್ಲಾ ಇವೆ. ಮತ್ತೊಂದು ಇಲ್ಲ. ಅದಕ್ಕೆ ಆತನಿಗೆ ಆದಿ, ಅಂತ್ಯಗಳಿಲ್ಲ ಎನ್ನುತ್ತಾರೆ. ಇನ್ನು ಆತನಿಗೆ ಹುಟ್ಟು ಇಲ್ಲ, ಸಾವೂ ಇಲ್ಲ ಎನ್ನುತ್ತಾರೆ. ಅದಕ್ಕೆ ಆದಿಯಲ್ಲಿ ಅಂದರೆ ಪ್ರಾರಂಭದಲ್ಲಿ ಇರುವುದು ಆತನೇ! ಅಂದರೆ ಅಂತ್ಯದಲ್ಲಿ ಅಂದರೆ ಸಮಸ್ತ ಸೃಷ್ಟಿಯು ಅಂತ್ಯವಾಗಿ ಹೋದರೂ ಇರುವುದೇ ಆತನು.

ಆತನು ಈ ಸೃಷ್ಟಿಯನ್ನು ಮಾಡಿ ಎಷ್ಟು ಕೋಟ್ಯಾನು ಕೋಟಿ ವರ್ಷಗಳಾದವೋ! ಯಾರೂ ಹೇಳಲಾರರು, ಆತನ ಕುರಿತು ಯಾರೂ ವರ್ಣಿಸಲಾರರು, ಯಾರಿಗೆ ತಿಳಿಯದೂ ಕೂಡಾ! ಹೋಗಲಿ ಆತನಿಗೆ ಏನಾದರೂ ರೂಪವಿದೆಯಾ? ಅಂದರೆ ರೂಪವಿಲ್ಲ, ಕಾಣಿಸುತ್ತಾನಾ? ಅಂದರೆ ಕಾಣಿಸನು.

ಅಂತಹ ಅವ್ಯಕ್ತದಿಂದಲೇ ಅಂದರೆ ಏನೂ ಇಲ್ಲದ್ದರಲ್ಲಿಂದಲೇ ಇಷ್ಟು ಲೋಕಗಳು, ಇಷ್ಟು ಜೀವಿಗಳು, ಜೀವರಾಶಿಗಳು ಸೃಷ್ಟಿಸಲ್ಪಟ್ಟಿವೆ. ಏನೂ ಇಲ್ಲದ ಅಂದರೆ

ಶೂನ್ಯದಿಂದಲೇ ಅಂದರೆ ಶೂನ್ಯಾತಿ ಶೂನ್ಯದೊಳಗಿನಿಂದ ಕೋಟ್ಯಾನು ಕೋಟಿ ಲೋಕಗಳು, ಕೋಟ್ಯಾನು ಕೋಟಿ ಜೀವರಾಶಿಗಳನ್ನು ಸೃಷ್ಟಿ ಮಾಡಿದನು, ಅನೇಕ ರೀತಿಯಲ್ಲಿ ಸೃಷ್ಟಿಸಿದನು.

ಯಮಧರ್ಮರಾಜನು ಆತನ ಹಿರಿಮೆಯನ್ನು ಎಷ್ಟಾಗಿ ವಿವರಿಸಿದ್ದಾನೊ ಒಂದು ಬಾರಿ ಆಲೋಚಿಸಿರಿ!

ಯಾರ ಕುರಿತಾದರೆ ಪ್ರತಿದಿನ ನಾವು ಧ್ಯಾನಿಸುತ್ತಿದ್ದೆವೋ! ಆತನ ಕುರಿತೇ ಯಮಧರ್ಮರಾಜನು ಬೋಧಿಸಿದರೆ ಈಗ ಪತ್ರೀಜಿಯವರು ನಮಗೆ ಬೋಧಿಸಿದ್ದಾರೆ. ಯಾವ ಮೂಲವನ್ನು ಅಂದರೆ ಅವ್ಯಕ್ತವನ್ನು ಅನೇಕ ರೀತಿಗಳಲ್ಲಿ ವರ್ಣಿಸುತ್ತಿದ್ದಾನೋ! ಅಂತಹ ಹೃದಯಾಕಾಶದಲ್ಲಿರುವ ಆತ್ಮನನ್ನು "ಶ್ವಾಸದ ಮೇಲೆ ಗಮನ" ಧ್ಯಾನದ ಮೂಲಕ ನಾವೆಲ್ಲಾ ಪ್ರತಿದಿನ ಆಶ್ರಯಿಸುತ್ತಿದ್ದೇವೆ.

ಪ್ರತಿಯೊಬ್ಬರಲ್ಲೂ, ಪ್ರತಿಯೊಂದು ಜೀವಿಯು ಶರೀರದಲ್ಲಿಯು ಹೃದಯಾಕಾಶದಲ್ಲಿದ್ದಾನೆ. ಈ ವಿಷಯವನ್ನು ನಾವು ಮಂತ್ರ ಪುಷ್ಪದಲ್ಲಿ ಹೇಳಿಕೊಂಡಿದ್ದೇವೆ. ಮಂತ್ರ ಪುಷ್ಪದಲ್ಲಿ ಅಂದರೆ ಬಹಳಷ್ಟು ಜನರು ಏನೆಂದುಕೊಳ್ಳುತ್ತಾರೆಂದರೆ, ಹೂಗಳನ್ನು ಕೈಯಲ್ಲಿಡಿದುಕೊಂಡು, ಮಂತ್ರಗಳನ್ನು ಓದಿ ನಂತರ ಪುಷ್ಪಗಳನ್ನು ತಟ್ಟೆಯಲ್ಲಿ ಹಾಕಿ ನಮಸ್ಕಾರ ಮಾಡಿಕೊಂಡು ಕೋರಿಕೆಗಳನ್ನು ಕೋರುವುದು ಎಂದುಕೊಳ್ಳುತ್ತಾರೆ.

ಆದರೆ ಮಂತ್ರ ಪುಷ್ಪವೂ ಖೂಢಾ ಆ ಪರಬ್ರಹ್ಮವೊಂದರ ಶ್ರೇಷ್ಟತೆಯನ್ನು ವಿವರಿಸುತ್ತಾ, ಅಂತಹ ಪರಬ್ರಹ್ಮನನ್ನು ಧ್ಯಾನಿಸಬೇಕು ಎಂದು ಹೇಳುತ್ತಿದೆ. ಮಂತ್ರ ಪುಷ್ಪದಲ್ಲಿ ಕೂಡಾ ಆಗಲಿ ಉಪನಿಷತ್ತುಗಳಲ್ಲಾಗಲಿ, ಎಲ್ಲ ಬೋಧಿಸಿದರೂ ಅದೇ ಬೋಧಿಸಲ್ಪಟ್ಟಿದೆ. ಆ ಕೆಲಸವನ್ನೇ ನಾವು ಮಾಡುತ್ತಿದ್ದೇವೆ.

ಈ ವಿಷಯಗಳೆಲ್ಲವೂ ಸಂಸ್ಕೃತದಲ್ಲಿ ಇವೆ. ಅವುಗಳು ಪಂಡಿತರಂತವರಿಗೆ ಅರ್ಥವಾಗದೇ, ಒಂದು ಬೊಂಬೆಯನ್ನಿಟ್ಟು, ಒಂದು ಫೋಟೋವನ್ನಿಟ್ಟು ಪೂಜೆ ಮಾಡು ಎನ್ನುತ್ತಾರೆ, ಅದನ್ನೇ ಬೋಧಿಸುತ್ತಾರಾಗಲಿ ನೀವು ಮಾಡಬೇಕಾಗಿರುವುದು ಅದು ಅಲ್ಲ ಎಂದು ಪತ್ರೀಜಿಯವರು ನಮ್ಮೆಲ್ಲರಿಗೂ ಸ್ಪಷ್ಟವಾಗಿ ಹೇಳಿದ್ದಾರೆ.

ಆ ಪರಬ್ರಹ್ಮ, ಅವ್ಯಕ್ತವನ್ನು ಅಂದರೆ ಶೂನ್ಯವನ್ನು ವ್ಯಕ್ತವಾಗಿ ಬದಲಾಯಿಸುತ್ತಿದ್ದಾನೆ. ಕಾಣಿಸದೇ ಇರುವುದನ್ನು ಕಾಣಿಸುವ ರೀತಿಯಲ್ಲಿ ಬದಲಾಯಿಸುತ್ತಿದ್ದಾನೆ, ಎಂತಹ ಶ್ರೇಷ್ಟನೋ ನೋಡಿರಿ. ನೀವು ಏನಾದರೂ ಒಂದನ್ನು ಸೃಷ್ಟಿಸಬೇಕೆಂದರೆ ಅದಕ್ಕೆ ಕಚ್ಚಾವಸ್ತುಗಳು ಇರಬೇಕು. ಒಂದು ಕುರ್ಚಿಯೋ, ಟೇಬಲ್ಲೋ ಮಾಡಬೇಕೆಂದರೆ ಕಟ್ಟಿಗೆ ಬೇಕು. ಒಂದು ಬೀರುವ ಮಾಡಬೇಕೆಂದರೆ ಕಬ್ಬಿಣ ಬೇಕು, ಮನೆ ಕಟ್ಟಬೇಕು. ಅಂದರೆ

ಸಿಮೆಂಟ್, ಮರಳು, ಇಟ್ಟಿಗೆ ಕೂಡಾ ಬೇಕು. ಏನೂ ಇಲ್ಲದೆ ಏನೂ ಮಾಡಲಾರಿರಿ, ಏನಾದರು ಇದ್ದರೇನೇ ಏನಾದರೂ ಮಾಡುತ್ತೀರಿ, ಅಂದರೆ ಇರುವುದನ್ನೇ ಬದಲಾಯಿಸುತ್ತೀರಿ, ಮಾನವನೊಬ್ಬನ ಬುದ್ಧಿವಂತಿಕೆಯ ಸಂಪತ್ತು ಅಷ್ಟೇ.

ಆದರೆ ಆತನು ಏನೂ ಇಲ್ಲದಿದ್ದರೂ ಎಷ್ಟೋ ಸೃಷ್ಟಿಸುತ್ತಾ ಇರುತ್ತಾನೆ, ಸೃಷ್ಟಿಸಿದ್ದಾನೆ ಕೂಡಾ. ಒಂದು ಬಾರಿ ಆತನ ಸೃಷ್ಟಿಯ ಕುರಿತು ಆಲೋಚಿಸಿರಿ? ಎಷ್ಟು ಆಶ್ಚರ್ಯವೆನಿಸುತ್ತದೆ! ನಾನು "ಆಶ್ಚರ್ಯ ಆಶ್ಚರ್ಯ" ಎಂಬ ಒಂದು ಪುಸ್ತಕವನ್ನು ಬರೆದೆನು. ಆ ಪುಸ್ತಕವನ್ನು ಒಮ್ಮೆ ಓದಿರಿ, ಪರಬ್ರಹ್ಮನ ಹಿರಿಮೆಯು ನಿಮಗೆ ಅರ್ಥವಾಗಲಿಲ್ಲ ಅಂದರೆ, ಆ ಪುಸ್ತಕವು ಬೇಸರ ತಂದಿತು ಎಂದರೆ ಆ ಪರಬ್ರಹ್ಮನ ಕುರಿತು ತಿಳಿದುಕೊಳ್ಳುವುದಕ್ಕೆಇನ್ನು ಬಹಳ ಕಾಲ ಬೇಕಾಗುತ್ತದೆ.

ಯಮಧರ್ಮರಾಜನು ಅದನ್ನೇ ಹೇಳುತ್ತಿದ್ದಾನೆ.... ಅಂತಹ ಪರಬ್ರಹ್ಮ ಅಂದರೆ ಹೃದಯಾಕಾಶದಲ್ಲಿ ಇರುವಂತಹ ಆತ್ಮನನ್ನು ಯಾವ ಧೀರರು, ಅಂದರೆ ಧೀರತ್ವವುಳ್ಳವರು, ಅಂದರೆ ಧೈರ್ಯವುಳ್ಳವರು ಅಂದರೆ ವಿಗ್ರಹಗಳನ್ನು ಬಿಡಬೇಕೆಂದರೂ, ಫೋಟೋವನ್ನು ಬಿಡಬೇಕೆಮದರೂ, ಪೂಜೆಗಳನ್ನು ಬಿಡಬೇಕೆಂದರೂ ಧೀರತ್ವವಿರಬೇಕು.

ಆ ಧೀರತ್ವವಿರುವವನು "ಶ್ವಾಸದ ಮೇಲೆ ಗಮನ" ಧ್ಯಾನದ ಮೂಲಕ ಆತನನ್ನು ಪ್ರತ್ಯಕ್ಷವಾಗಿ ನೋಡಬಲ್ಲರು. ಪತ್ರೀಜಿಯವರು ಹೇಳಿದ "ಶ್ವಾಸದ ಮೇಲೆ ಗಮನ" ಧ್ಯಾನವನ್ನು ಮಾಡಿದರೆ ನಾವೆಲ್ಲಾ ಯಾವುದೋ ಒಂದು ದಿನ ಆತನನ್ನು ಸಾಕ್ಷಾತ್ಕರಿಸಿಕೊಳ್ಳುತ್ತೇವೆ ಅಂದರೆ "ಆತ್ಮ ಸಾಕ್ಷಾತ್ಕಾರವನ್ನು" ಹೊಂದುತ್ತೇವೆ.

ಇದು ಅರ್ಥವಾಗುವುದಕ್ಕೆ ಒಂದು ಉದಾಹರಣೆ.... ಒಬ್ಬ ಕಟ್ಟಿಗೆ ಕಡಿಯುವವನು ಒಂದು ದೊಡ್ಡದಾದ ಕಾಂಡ ಇರುವಂತ ಮರವನ್ನು ಕಡಿಯುತ್ತಾ ಇದ್ದಾನೆ. ಹೊಡೆಯುತ್ತಾ ಇದ್ದರೆ ಅದು ಮುರಿಯುತ್ತದೆ. ಹಾಗೇ ಕಡಿಯುತ್ತಲೇ ಇದ್ದಾನೆ. ಹೊಡೆಯುತ್ತಲೇ ಇದ್ದಾನೆ, ಮರವು ಅರ್ಧ ಮುರಿದು ಹೋಯಿತು. ಆತನು ಹಾಗೇ ಇದೆಯೆಂದು ಇದನ್ನು ಕಡಿಯುತ್ತಲೇ ಇದ್ದಾನೆ. ಆದರೆ ಕೆಳಗೆ ಬೀಳಲಿಲ್ಲ, ಅವನು ನನ್ನಿಂದ ಆಗದು ಎಂದು ಬಿಟ್ಟುಬಿಟ್ಟರೆ ಮರವು ಹಾಗೇ ಇರುತ್ತದೆ. ಆದರೆ ನಿರುತ್ಸಾಹಗೊಳ್ಳದೆ ಇನ್ನು ಕಡಿದನು ಎಂದುಕೊಳ್ಳಿ, ಇಷ್ಟು ಏಟುಗಳನ್ನು ಹಾಕಿದರೂ ಕದಲದ ಮರವು, ಬೀಳದ ಮರವು ಯಾವುದೋ ಒಂದೇ ಏಟಿಗೆ ಟಪ್ ಎಂದು ಬಿದ್ದು ಬಿಡುತ್ತದೆ. ಆ ಕೊನೆಯ ಏಟು ಬೀಳಲಿಲ್ಲ ಎಂದುಕೊಳ್ಳಿ, ಆ ಮರವು ಹಾಗೇ ಇರುತ್ತದೆ.

ಹಾಗೇ ನೀವು ಕೂಡಾ ಧ್ಯಾನದಲ್ಲಿ ಕುಳಿತಂತೆಲ್ಲಾ, ಕುಳಿತಂತೆಲ್ಲಾ, ಹಾಗೇ ದಿನಗಳು, ವಾರಗಳು, ತಿಂಗಳುಗಳು, ವರ್ಷಗಳೂ ಕೂಡಾ ಕುಳಿತುಕೊಳ್ಳಬಹುದು. ಆದರೆ

ಯಾವುದೋ ಒಂದು ಕ್ಷಣದಲ್ಲಿ ಆ ಸಾಕ್ಷಾತ್ಕಾರವನ್ನು ನೀವು ಹೊಂದಬಹುದು. ಆದರೆ ಆ ಕ್ಷಣ ಯಾವುದೋ ನಿಮಗೆ ತಿಳಿಯದು. ನಿರುತ್ಸಾಹಪಟ್ಟು ಬಿಟ್ಟರೆ, ಅಲ್ಲಿಯವರೆಗೆ ಕಷ್ಟಪಟ್ಟದ್ದು ವ್ಯರ್ಥವಾಗುತ್ತದೆ. ಅದಕ್ಕೆ ಧೀರರು ನಿರಾಶೆ ಹೊಂದರು, ಮಾಡುವ ಕೆಲಸದಿಂದ ವಿರಮಿಸುವುದಿಲ್ಲ, ಹಾಗೆ ಮಾಡುತ್ತಲೇ ಇರುತ್ತಾರೆ, ಕೊನೆಗೆ ಸಾಧಿಸುತ್ತಾರೆ.

ಅದಕ್ಕೆ ಯಮಧರ್ಮರಾಜನು ಧೀರರು ಎಂದಿದ್ದಾನೆ. ಆತನು ಧೀರರು ಎಂಬ ಪದವನ್ನು ಏಕೆ ಉಪಯೋಗಿಸಿದ್ದಾನೋ ಅರ್ಥ ಮಾಡಿಕೊಳ್ಳಬೇಕು. ಧೀರತ್ವ ಅಂದರೆ ಮಾತುಗಳೇ?

ಅದಕ್ಕೆ ಶಿರಿಡಿ ಬಾಬಾ ಶ್ರದ್ಧೆ, ಸಬೂರಿ ಎಂದಿದ್ದಾರೆ. ಶ್ರದ್ಧೆ ಅಂದರೆ? ಧ್ಯಾನ ಸಾಧನೆಯಲ್ಲಿ ಶ್ರದ್ಧೆ ಇದ್ದರೆ ನಿಯಮ ತಪ್ಪದೇ ಪ್ರತಿದಿನ ಮಾಡುತ್ತಾ ಇರಬೇಕು. ಸಬೂರಿ ಅಂದರೆ, ಸಹಿಸಿಕೊಳ್ಳುವ ಗುಣ, ಕಣ್ಣು ತೆರೆಯಬೇಕು ಎಂದು ಅನಿಸುತ್ತದೆ, ಕುಳಿತುಕೊಳ್ಳಲಾರಿರಿ, ಆದರೂ ಸಹನೆಯಿಡಿ. ಕಣ್ಣು ತೆರೆಯಬೇಡ ಮಾಡುತ್ತಲೇ ಇರು. ಅಷ್ಟೇ ಅಲ್ಲ ಪಟ್ಟು ಬಿಡದೇ ಇರಬೇಕು, ಪ್ರಲೋಭನೆಗಳಿಗೆ ಒಳಗಾಗಬಾರದು, ಆತಂಕಗಳಿಗೆ ಬೆದರಬಾರದು. ನೀನು ಆತ್ಮಸಾಕ್ಷಾತ್ಕಾರ ಪ್ರಯತ್ನವನ್ನು ಮಾಡುತ್ತಾ ಇದ್ದರೆ, ನೀನು ಅದನ್ನು ಹೊಂದುವುದರೊಳಗೆ ಎಷ್ಟೋ ಪರೀಕ್ಷೆಗಳಿರುತ್ತವೆ. ಆದರೂ ಬಿಡಬಾರದು. ಹಾಗೆ ಎಷ್ಟೋ ಆತಂಕಗಳು ಬರುತ್ತವೆ, ಎಷ್ಟೋ ಪರೀಕ್ಷೆಗಳು ಇರುತ್ತವೆ, ಎಷ್ಟೋ ಅಡ್ಡಿಗಳು ಬರುತ್ತವೆ. ಯಾವ ಪರೀಕ್ಷೆಗಳು ಇಲ್ಲದೆ ಆತನ ಸಾಕ್ಷಾತ್ಕಾರ ಹೇಗೆ ಲಭಿಸುತ್ತದೆ ನಿನಗೆ?

ಧ್ಯಾನದಲ್ಲಿ ಕೂಡಾ ಸಂಸಾರ ಪರವಾಗಿ, ಆರ್ಥಿಕ ಪರವಾಗಿ, ಕುಟುಂಬ ಪರವಾಗಿ, ಅಕ್ಕ-ಪಕ್ಕದವರ ಪರವಾಗಿ ಎಷ್ಟೋ ಬರುತ್ತವೆ, ಬರಲಿ ಬಿಡಿ, ನಿಮ್ಮ ಕೆಲಸವನ್ನು ಬಿಡಬಾರದು. ನಿಮ್ಮ ಪ್ರಯತ್ನವನ್ನು ಬಿಡಬಾರದು, ಧೀರರಾಗಿ ಇರಬೇಕು. ಆಗ ಅಂದುಕೊಳ್ಳದ ಹಾಗೆ ಯಾವುದೋ ಒಂದು ಕ್ಷಣದಲ್ಲಿ ನೀವು ಸಾಕ್ಷಾತ್ಕಾರವನ್ನು ಹೊಂದಬಲ್ಲವರಾಗುತ್ತೀರಿ, ಆ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳುತ್ತೀರಿ. ಯಮಧರ್ಮರಾಜ ಅಂತಹವರಿಗೆ ಶಾಶ್ವತವಾಗಿ ಶಾಶ್ವತ ಸುಖವುಂಟಾಗುತ್ತದೆ ಎಂದಿದ್ದಾರೆ. ಶಾಶ್ವತ ಸುಖ ಅಂದರೆ ಶಾಶ್ವತವಾಗಿ ದುಃಖದಿಂದ ಹೊರಬರುವುದು, ಅದೇ ಯಮಧರ್ಮರಾಜನು ನಚಿಕೇತನಿಗೆ ಹೇಳಿದನು.

*** ***

# 12. ಯಮಧರ್ಮರಾಜನು ಹೇಳಿದ್ದೇ ಭಗವದ್ಗೀತೆಯಲ್ಲೂ ಕೂಡಾ ಹೇಳಲಾಗಿದೆ

ಯಮಧರ್ಮರಾಜನು, "ಯಾವ ಸ್ವರೂಪವು ಸರ್ವವನ್ನು ಸ್ವಾಧೀನಪಡಿಸಿಕೊಂಡಿದೆಯೋ ಎಂದಿದ್ದಾನೆ." ಈ ವಿಷಯವನ್ನೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಭಗವಾನನು ಹೇಳಿದ್ದಾನೆ.

**ಶ್ಲೋಕ ॥ ಇಹೈಕಸ್ಥಂ ಜಗತ್‌ಕೃತ್ಸ್ನಂ ಪಶ್ಯಾದ್ಯ ಸಚರಾಚರಮ್ ।**
**ಮಮ ದೇಹೇ ಗುಡಾಕೇಶ ಯಚ್ಚಾನ್ಯ ದ್ದ್ರಷ್ಟುಮಿಚ್ಛಸಿ ॥**

**(ಭ.ಗಿ. 11–7)**

**ತಾತ್ಪರ್ಯ :** ಅಂದರೆ ಓ, ಅರ್ಜುನಾ! ಈ ಸಮಸ್ತ ಚರಾಚರ ಪ್ರಪಂಚವನ್ನು ಇನ್ನೂ ಏನನ್ನು ನೋಡಬೇಕೆಂದಿರುವೆಯೋ, ಅದನ್ನು ಈ ನನ್ನ ಶರೀರದಲ್ಲಿ ಒಂದೇ ಕಡೆ ಇರುವಂತೆ ಈಗ ನೋಡು ಎಂದನು.

ಅಂದರೆ ಇದರ ಅರ್ಥ ಸಮಸ್ತ ಚರ, ಅಚರ ಅಂದರೆ ಚಲಿಸುವುದು, ಚಲಿಸಲಾರದ್ದು ಎಲ್ಲಾ ಕೂಡಾ ನನ್ನ ಶರೀರದಲ್ಲಿ ಇವೆಯೆಂದು ಆತನು ವಿಶ್ವರೂಪವನ್ನು ತೋರಿಸಿದನು. ನೀನು ನನ್ನನ್ನು ಏನೋ ಅಂದುಕೊಳ್ಳುತ್ತಿರುವೆ, ನನ್ನ ನಿಜರೂಪವನ್ನು ನೋಡು, ನಿನಗೆ ಬಾಹ್ಯವಾಗಿ ಕಾಣಿಸುವುದು ಅಲ್ಲ ಎಂದು ಆತನು ವಿಶ್ವರೂಪವನ್ನು ತೋರಿಸಿದನು. ಆ ಒಂದು ಮಾತಿನಲ್ಲಿ ಎಷ್ಟು ಅರ್ಥ ಇದೇರಿ! ಯಮಧರ್ಮರಾಜನು ಹೇಳಿರುವುದನ್ನು ನಾವು ಹಗುರವಾಗಿ ಬಿಟ್ಟುಬಿಡುತ್ತೇವೆ.

ಅಲ್ಲಿ ಯಾವ ಸ್ವರೂಪ ಸರ್ವಸ್ವವನ್ನು ಸ್ವಾಧೀನಪಡಿಸಿಕೊಂಡಿದೆಯೋ, ಸಮಸ್ತವನ್ನು ತನ್ನಲ್ಲಿ ಅಳವಡಿಸಿಕೊಂಡಿದೆಯೋ ಅಂದರೆ ಅರ್ಥ ಮಾಡಿಕೊಳ್ಳುವುದು ಅಷ್ಟು ಸುಲಭವೇ?

84 ಲಕ್ಷ ರೀತಿಯ ಜೀವರಾಶಿಗಳು, ಖನಿಜಗಳಿಂದ ಮಾನವರವರೆಗೆ ಎಷ್ಟು ರೂಪಗಳು, ಒಂದೊಂದು ರೂಪದಲ್ಲಿ ಎಷ್ಟು ಕೋಟ್ಯಾನು ಕೋಟಿ ಜೀವರಾಶಿಗಳು, ಸಮುದ್ರಗಳು, ಬೆಟ್ಟಗಳು, ಪರ್ವತಗಳು, ನದಿಗಳು ಎಷ್ಟಿವೆಯೋ ಎಲ್ಲಾ ಆತನಲ್ಲಿಯೇ ಇವೆ. ಇಂತಹ ಲೋಕಗಳು ಕೋಟ್ಯಾನು ಕೋಟಿ ಇವೆ. ಅವು ಆತನೊಳಗೆ ಇವೆ. ಅಂದರೆ ಆತನು ಎಷ್ಟು ಶ್ರೇಷ್ಠವಾದನು ಎನ್ನುವುದು ತಿಳಿಯುತ್ತದೆ. ಇದನ್ನು ತಿಳಿದುಕೊಂಡರೆ ನೀವು ಧ್ಯಾನವನ್ನು ಬಿಡುವುದಿಲ್ಲ.

ಆದ್ದರಿಂದ ತಿಳಿದುಕೊಳ್ಳಿ, ಅಂತಹ ಮಹಿಮಾನ್ವಿತನನ್ನು ಹಿಡಿದುಕೊಂಡರೇನೇ ನೀವು ಅಷ್ಟು ಶ್ರೇಷ್ಠರಾಗುತ್ತೀರಿ. ಅದಕ್ಕೆ ಅನ್ನುತ್ತಾರೆ ಸದ್ಗುರುವನ್ನು ಹಿಡಿದುಕೊಂಡರೆ ಮೋಕ್ಷವನ್ನು ಹೊಂದುತ್ತೀರಿ, ಬಾಧೆ ಗುರುವನ್ನು ಹಿಡಿದುಕೊಂಡರೆ ಬಾಧೆಯನ್ನು ಹೊಂದುತ್ತೀರಿ ಎಂದು, ಕಾರಣ ಸದ್ಗುರುವು ಸತ್ಯವನ್ನು ಹೇಳುತ್ತಾನೆ, ಸರಿಯಾದ ಮಾರ್ಗವನ್ನು ತೋರಿಸುತ್ತಾನೆ. ಕಷ್ಟವಾದರೂ ನಿನ್ನಿಂದ ಮಾಡಿಸುತ್ತಾನೆ, ಕೊನೆಗೆ ಮೋಕ್ಷವನ್ನು ಹೊಂದುವ ಅವಕಾಶವನ್ನು ಕಲ್ಪಿಸುತ್ತಾನೆ.

ಆ ಪರಬ್ರಹ್ಮನ ಶ್ರೇಷ್ಠತೆಯನ್ನು ಮಂತ್ರ ಪುಷ್ಪದಲ್ಲಿ ಹೇಳಲಾಗಿದೆ. ಅದನ್ನು ಓದಿದರೆ ನೀವು ಮಾಡುತ್ತಿರುವ "ಶ್ವಾಸದ ಮೇಲೆ ಗಮನ" ಎನ್ನುವುದು ಎಷ್ಟು ಮಹತ್ವದ್ದೋ ತಿಳಿಯುತ್ತದೆ.

ಶ್ರೀ ಕೃಷ್ಣ ಭಗವಾನನು ಇನ್ನು

**ಶ್ಲೋಕ ॥ ಮಯಾ ತತಮಿದಂಸರ್ವಂ ಜಗದವ್ಯಕ್ತ ಮೂರ್ತಿನಾ ।**

**ಮತ್ ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥**

**(ಭ.ಗೀ. 9–4)**

**ತಾತ್ಪರ್ಯ :** ನಾನು ಅವ್ಯಕ್ತ ರೂಪದಲ್ಲಿ ಈ ಜಗತ್ತನ್ನೆಲ್ಲಾ ವ್ಯಾಪಿಸಿದ್ದೇನೆ, ಸಮಸ್ತ ಪ್ರಾಣಿ ಕೋಟಿಗಳು ನನ್ನಲ್ಲಿ ಇವೆ, ನನಗೆ ಅವು ಆಧಾರವಲ್ಲ. ಯಮಧರ್ಮರಾಜು ಹೇಳಿದ ಮಾತನ್ನು ಶ್ರೀ ಕೃಷ್ಣ ಭಗವಾನನು ಎಷ್ಟು ವಿವರವಾಗಿ ಹೇಳಿದ್ದಾನೆ!

ಯಾವ ಸ್ವರೂಪ ಸರ್ವವನ್ನು ಸ್ವಾಧೀನಪಡಿಸಿಕೊಂಡಿದೆಯೋ! ಅಂದರೆ ಸಮಸ್ತವೂ ತನ್ನಲ್ಲಿ ಅಳವಡಿಸಿಕೊಂಡಿದೆಯೆಂದು ತಿಳಿದುಕೊಳ್ಳಬೇಕು. ಆತನು ಇನ್ನು ಏನು ಹೇಳಿದ್ದಾನೆಂದರೆ ಸರ್ವಭೂತಾಂತರಾತ್ಮ ಆದ ಪರಮಾತ್ಮನು, ಅಂದರೆ ಸರ್ವ ಭೂತಗಳಲ್ಲಿ (ಪ್ರಾಣಿ, ಜೀವರಾಶಿಗಳಲ್ಲಿ) ಆತನೇ ಇದ್ದಾನೆ. ಯಾವ ಮೂಲವನ್ನು ಅಂದರೆ ಅವ್ಯಕ್ತವನ್ನು, ಕಾಣಿಸದಂತಾದ್ದಾಗಿ ಅನೇಕ ರೀತಿಗಳಲ್ಲಿ ಮಾಡುತ್ತಿದ್ದಾನೋ! ಅಂದರೆ ಸೃಷ್ಟಿಸುತ್ತಿದ್ದಾನೆಂದು ತಿಳಿದುಕೊಳ್ಳಬೇಕು.

**ಶ್ಲೋಕ ॥ ಪಶ್ಯ ಮೇ ಪಾರ್ಥ ರೂಪಾಣಿ ಶತಶೋಥ ಸಹಸ್ರಶಃ ।**

**ನಾನಾ ವಿಧಾನಿ ದಿವ್ಯಾನಿ ನಾನಾ ವರ್ಣಾಕೃತಿನಿಚ ॥**

**(ಭ.ಗೀ. 11–5)**

**ತಾತ್ಪರ್ಯ :** ಓ ಅರ್ಜುನಾ! ಅನೇಕ ವಿಧಗಳಾಗಿವುಳ್ಳವು, ಅಲೌಕಿಕವಾದ ವಿವಿಧ

ವರ್ಣಗಳು, ಆಕಾರಗಳುಳ್ಳ, ಅಸಂಖ್ಯಾತವಾಗಿ ವರ್ತಿಸುವಂತಹ ನನ್ನವೊಂದು ರೂಪಗಳನ್ನು ನೋಡು ಅಂದರೆ ದೃಷ್ಟಿಸು ಎಂದನು.

ಅಂದರೆ ಆ ಪರಬ್ರಹ್ಮ ಅವ್ಯಕ್ತದೊಳಗಿಂದ ಇಷ್ಟು ವಿಧಗಳಾಗಿ ಸೃಷ್ಟಿ ಮಾಡಿದ್ದಾನೆ. ಇದನ್ನೇ ಭಗವದ್ಗೀತೆಯಲ್ಲಿ ಹೇಳುತ್ತಿದ್ದಾನೆ. ಅನೇಕ ವಿಧಗಳಾಗಿ ಇರುವಂತವು, ಅಲೌಕಿಕವಾದ ವಿವಿಧ ವರ್ಣಗಳುಳ್ಳವು, ಆಕಾರವುಳ್ಳವು, ಅಸಂಖ್ಯೆ (ಅಗಣಿತವಾಗಿ) ವರ್ತಿಸುವಂತವು, ಅಂದರೆ ಒಂದರ ವರ್ತನೆ ಇನ್ನೊಂದಕ್ಕೆ ಸಂಬಂಧವಿಲ್ಲ.

ಮಾಂಸಾಹಾರ, ಶಾಖಾಹಾರ ಪ್ರಾಣಿಗಳು, ತೆವಳುವಂತಹವು, ನೀರಿನಲ್ಲಿ ಈಜುವಂತಹವು, ಬಿಲಗಳಲ್ಲಿ ಇರುವಂತಹವು, ಒಂದು ರೀತಿಯ ಇರುವೆಗಳು, ಸೊಳ್ಳೆಗಳು, ಆನೆಗಳು, ಬಂಡೆಗಳು, ಜಿರಾಫೆಗಳು ಘೇಂಡಾಮೃಗಗಳು ಇವೆಲ್ಲವು ಎಲ್ಲಿಂದ ಬಂದವು? ಅಂದರೆ ಆತನಿಂದಲೇ ಅಂದರೆ ಯಾರು? ಅವ್ಯಕ್ತ ಒಂದು ರೀತಿಯಲ್ಲಿ ಹೇಳಬೇಕೆಂದರೆ ಆಕಾಶಕ್ಕಿಂತ ಶೂನ್ಯಾತಿ ಶೂನ್ಯವೆಂದು ಹೇಳಬಹುದು.

ಇನ್ನು ಶ್ರೀಕೃಷ್ಣ ಭಗವಾನನು ಏನು ಹೇಳಿದ್ದಾರೆಂದರೆ,

**ಶ್ಲೋಕ ॥ ಅಥವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ ।**

**ವಿಷ್ಟಭ್ಯಾಹ ಮಿದಂ ಕೃತ್ಸ್ನ ಮೇಕಾಂಶೇನ ಸ್ಥಿತೋ ಜಗತ್ ॥**

**(ಭ.ಗೀ. 10–42)**

**ತಾತ್ಪರ್ಯ :** ಓ, ಅರ್ಜುನಾ! ಇಲ್ಲಿಯವರೆಗೆ ವಿವರಿಸಿದ್ದ ವಿಸ್ತಾರವಾದ ಈ ಜ್ಞಾನದಿಂದ ನಿನಗೆ ಏನು ಪ್ರಯೋಜನ? ಈ ಜಗತ್ತನ್ನೆಲ್ಲಾ ನಾನು ವ್ಯಾಪಿಸಿದ್ದೇನೆ ಎಂದು ತಿಳಿದುಕೋ! ಎಂದನು. ಈ ಸೃಷ್ಟಿಯೆಲ್ಲಾ ನಾನೇ ಇದ್ದೇನೆ, ನಾನು ಇಲ್ಲದ್ದು ಎಲ್ಲಿ? ಎಂದು ಹೇಳಿದರು.

ಅರ್ಜುನನನ್ನು ನೋಡು ಎಂದನು, ಆಂತಹ ಮಹಾತ್ಮನ ಸ್ವರೂಪವನ್ನು ಅರ್ಜುನನು ಈ ಕಣ್ಣುಗಳಿಂದ ನೋಡಬಲ್ಲನೇ? ಆತನಿಗೆ ಏನೂ ಕಾಣಿಸಲಿಲ್ಲ, ಅಷ್ಟು ಅಖಂಡವಾದ ತೇಜಸ್ಸಿನಲ್ಲಿ ಇನ್ನೇನು ಕಾಣಿಸುತ್ತದೆ? ಆತನು ಕೋಟಿ ಸೂರ್ಯರ ಕಾಂತಿಯುಳ್ಳವನು, ಒಬ್ಬ ಸೂರ್ಯನನ್ನೇ ಐದು ನಿಮಿಷಗಳು ನೋಡಿದರೇನೇ ನಿಮಗೆ ಏನು ಕಾಣಿಸದು, ಕಣ್ಣು ಕುರುಡಾಗಿ ಬಿಡುತ್ತವೆ.

ಅಂತಹುದು, ಕೋಟಿ ಸೂರ್ಯರ ಕಾಂತಿಯುಳ್ಳ ಆ ಪರಬ್ರಹ್ಮನ ವಿಶ್ವರೂಪವನ್ನು ಎದುರಿಗಿದ್ದು ತೋರಿಸುತ್ತಾ ಇದ್ದರೂ, ಅರ್ಜುನನು ಆತನನ್ನು ಈ ಕಣ್ಣುಗಳಿಂದ ಏನು ನೋಡುತ್ತಾನೆ!

**ಆಗ ಶ್ರೀ ಕೃಷ್ಣ ಭಗವಾನನು ಸ್ಪಷ್ಟವಾಗಿ ಹೇಳಿದನು**

**ಶ್ಲೋಕ ॥ ನ ತು ಮಾಂ ಶಕ್ಯಸೇ ದ್ರಷ್ಟು ಮನೇನೈವ ಸ್ವಚಕ್ಷುಪಾ ।**

**ದಿವ್ಯಂ ದಾದಾಮಿ ತೇ ಚಕ್ಷುಃ ಪಶ್ಯಮೇ ಯೋಗ ಮೈಶ್ವರಮ್ ॥**

**(ಭ.ಗೀ. 11–8)**

**ತಾತ್ಪರ್ಯ :** ಈ ನಿನ್ನ ಮಾಂಸಮಯ ನೇತ್ರಗಳಿಂದ ಅಂದರೆ ನಿನ್ನ ಭೌತಿಕವಾದ ಕಣ್ಣುಗಳಿಂದ ನೀನು ನನ್ನ ವಿಶ್ವರೂಪವನ್ನು ನೋಡಲಾರೆ, ಅಂದರೆ ನನ್ನ ನಿಜವಾದ ಸ್ವರೂಪವನ್ನು ನೀನು ನೋಡಲಾರೆ. ಆದ್ದರಿಂದ ದಿವ್ಯವಾದ ಜ್ಞಾನ ನೇತ್ರವನ್ನು ನಿನಗೆ ಪ್ರಸಾದಿಸುತ್ತಿದ್ದೇನೆ, ಅದರಿಂದ ಈಶ್ವರ ಸಂಬಂಧವಾದ ನನ್ನ ಯೋಗ ಮಹಿಮೆಯನ್ನು ನೋಡು ಎಂದು ಹೇಳಿದನು.

ಈ ಕಣ್ಣುಗಳಿಂದ ಕೃಷ್ಣನ ಗೊಂಬೆಗಳನ್ನು, ಶಿವನ ಗೊಂಬೆಗಳನ್ನು, ಫೋಟೋಗಳನ್ನು ನೋಡುತ್ತೀರಿ, ಆದರೆ ಆತನ ನಿಜ ಸ್ವರೂಪವನ್ನು ಯಾರೂ ನೋಡಲಾರರು.

ಅದಕ್ಕೆ ಪತ್ರೀಜಿಯವರು ಜ್ಞಾನನೇತ್ರವನ್ನು ಸಂಪಾದಿಸಿಕೊಂಡರೆ ಆತ್ಮಸಾಕ್ಷಾತ್ಕಾರ, ಆ ಪರಬ್ರಹ್ಮನ ಸಾಕ್ಷಾತ್ಕಾರನ್ನು ನೀವು ಹೊಂದಬಲ್ಲಿರಿ ಎಂದು ಹೇಳಿದ್ದಾರೆ. ಆದರೆ ಅದು ಅಷ್ಟು ಸುಲಭವಲ್ಲ.

ಅದನ್ನು "ಶ್ವಾಸದ ಮೇಲೆ ಗಮನ"ವಿಟ್ಟು ಧ್ಯಾನ ಮಾಡುವ ಯೋಗಿಗಳಿಗೆ ಸಾಧ್ಯ, ನೀವೂ ಕೂಡಾ ಛಲದಿಂದ ಪಟ್ಟು ಬಿಡದೇ ಆ ಜ್ಞಾನನೇತ್ರವನ್ನು ಸಂಪಾದಿಸಿ ಆತನನ್ನು ನೋಡಿದರೆ ಆಶ್ಚರ್ಯಪಡುತ್ತೀರಿ. ಏನ್ರೀ! ಒಂದು ಬಾರಿ ಆಲೋಚಿಸಿರಿ, ಈ ಕಣ್ಣುಗಳಿಂದ ನೋಡುವವೆಲ್ಲವೂ ಪೊಳ್ಳುಗಳು, ಖಾಲಿಯಾದಂತವು. ಆದರೆ ಇವುಗಳನ್ನೇ ನೀವು ದೊಡ್ಡವೆಂದುಕೊಳ್ಳುತ್ತೀರಿ.

ಆದರೆ ಜ್ಞಾನ ನೇತ್ರದಿಂದ ಎಷ್ಟು ಶ್ರೇಷ್ಠವಾದವುಗಳನ್ನು ನೋಡಬಲ್ಲಿರೋ! ವೀಕ್ಷಿಸಬಲ್ಲಿರೋ! ಆಲೋಚಿಸಿರಿ. ಅದಕ್ಕೆ ಆ ಸ್ಥಿತಿಗೆ ಸೇರಿಕೊಂಡವರು, ಆತ್ಮಸಾಕ್ಷಾತ್ಕಾರ ಸ್ಥಿತಿಯನ್ನು ಹೊಂದಿದವರು ಹೊರಗೆ ಬರುವುದಿಲ್ಲ. ಆ ಆನಂದವು ವರ್ಣನಾತೀತವು, ಅನಿರ್ವಚನೀಯವು, ಹೊರ ಬಾ ಎಂದರೂ ಬರುವುದಿಲ್ಲ.

ಅಂತಹ ಸ್ಥಿತಿಯನ್ನು ಸಮಾಧಿ ಸ್ಥಿತಿ ಎನ್ನುತ್ತಾರೆ. ಸಮಸ್ತವೂ ತಿಳಿಯುತ್ತದೆ. ಅಲ್ಲಿ ಎಲ್ಲವೂ ಸ್ಪಷ್ಟವಾಗಿ ಬಿಡುತ್ತವೆ, ನೇರವಾಗಿ ನೀನೇ ನೋಡುತ್ತಾ ಇರುವೆ, ತಿಳಿಯದ್ದು ಎಂಬುದು ಏನೂ ಇರುವುದಿಲ್ಲ.

**ಅದಕ್ಕೆ ಶ್ರೀ ಕೃಷ್ಣ ಭಗವಾನನು**

**ಶ್ಲೋಕ ॥ ಆಶ್ಚರ್ಯವ ತ್ವಶ್ಯತಿ ಕಶ್ಚಿದೇನಂ ಆಶ್ಚರ್ಯವ ದ್ವದತಿ ತಥೈವಚಾನ್ಯಃ ।**

**ಆಶ್ಚಯವ ಚ್ಚೈನಮನ್ಯಃ ಶೃಣೋತಿ ಶ್ರುತ್ವಾಪ್ಯೇನಂ ವೇದನ ಚೈವ ಕಶ್ಚಿತ್ ॥**

**(ಭ.ಗೀ. 2–29)**

**ತಾತ್ಪರ್ಯ :** ಯೋಗಿ ಧ್ಯಾನದಲ್ಲಿ ಆತ್ಮನನ್ನು ಅಂದರೆ ಪರಬ್ರಹ್ಮನನ್ನು ಇನ್ನೊ ಸೃಷ್ಟಿಯಲ್ಲಿರುವ ಅದ್ಭುತಗಳನ್ನು ಆಶ್ಚರ್ಯದಿಂದ ನೋಡುತ್ತಾ ಇರುತ್ತಾನೆ. ಹಾಗೇ ಇನ್ನೊಬ್ಬನು ಅವುಗಳನ್ನು ಆಶ್ಚರ್ಯದಿಂದ ಹೇಳುತ್ತಾ ಇರುತ್ತಾನೆ. ಹೊರಗೆ ಬಂದವನು ಅದನ್ನು ಬಹಳ ಆಶ್ಚರ್ಯದಿಂದ ಹೇಳುತ್ತಾ ಇರುತ್ತಾನೆ.

ಪತ್ರೀಜಿಯವರು ಹೇಳುತ್ತಿದ್ದರೆ ಕೇಳುವ ನಮಗೆ ಆಶ್ಚರ್ಯ ಎಂದು ಅನಿಸುತ್ತದೆ. ಕೆಲವು ಜನ ಕೇಳಿದರೂ ತಿಳಿದುಕೊಳ್ಳಲಾರಿರಿ, ನಂಬುವುದಿಲ್ಲ.

ಅಚಿತಹ ಆತ್ಮನು ಅಂದರೆ ಪರಬ್ರಹ್ಮನನ್ನು ಯಾವ ಧೀರರು ಪ್ರತ್ಯಕ್ಷವಾಗಿ ನೋಡುತ್ತಿದ್ದಾರೋ, ಸಾಕ್ಷಾತ್ಕರಿಸಿಕೊಳ್ಳುತ್ತಾರೋ! ಅವರಿಗೆ ಶಾಶ್ವತ ಸುಖವು ಲಭಿಸುತ್ತದೆ. ಅಂದರೆ ದುಃಖವು ಶಾಶ್ವತವಾಗಿ ತೊಲಗಿ ಹೋಗುತ್ತದೆ ಎಂದು ಯಮಧರ್ಮರಾಜನು ನಚಿಕೇತನಿಗೆ ಹೇಳಿದ್ದಾನೆ.

*** ***

# 13. "ಆತ್ಮ ಯಾರೋ ಅಲ್ಲ ನಾನೇ!"

**ಯಮಧರ್ಮರಾಜನು ಇನ್ನು ಏನು ಹೇಳಿದ್ದಾನೆಂದರೆ "ಓ, ನಚಿಕೇತಾ! ಜನನ–ಮರಣಗಳಿಲ್ಲ, ಅಂದರೆ ಜನ್ಮಾದಿ ವಿಕಾರಗಳಿಲ್ಲದ ಆತ್ಮ ಸ್ಥಿತಿಯನ್ನು ಹೊಂದಬೇಕು" ಎಂದನು.**

ಈ ವಿಕಾರಗಳು ಆರು 1. ಹುಟ್ಟುತ್ತದೆ 2. ವೃದ್ಧಿ ಹೊಂದುತ್ತದೆ, 3. ಪರಿಣಿತಿ ಹೊಂದುವುದು 4. ಕ್ಷೀಣಿಸುವುದು 5. ವ್ಯಾಧಿಗೆ ಗುರಿಯಾಗುವುದು 6. ನಾಶವಾಗುತ್ತದೆ.

ಇಂತಹ ಆರು ವಿಕಾರಗಳು ಇಲ್ಲದ ಆತ್ಮ, ದೇಹವು ನಶಿಸಿದ ಮಾತ್ರಕ್ಕೆ ನಶಿಸದು ಎಂದು ಹೇಳಿದನು.

ಯಮಧರ್ಮರಾಜನು ಇನ್ನು ಆತ್ಮದ ಕುರಿತು, ಆತ್ಮವೊಂದರ ಹಿರಿಮೆಯನ್ನು ಕುರಿತು ವಿವರಿಸಿದ್ದಾನೆ. ಸೃಷ್ಟಿಯಲ್ಲಿ 84 ಲಕ್ಷಗಳ ರೀತಿಯ ಜೀವಿಗಳಿವೆ, ಅವೆಲ್ಲವುಗಳಿಗೆ ಈ ವಿಕಾರಗಳು ಇವೆ, ಜನ್ಮಿಸುತ್ತವೆ ಎಂದರೆ ಹುಟ್ಟುತ್ತವೆ, ವೃದ್ಧಿಯನ್ನು ಹೊಂದುತ್ತವೆ ಅಂದರೆ ಬೆಳೆಯುತ್ತಾ ಇರುತ್ತವೆ, ಪರಿಣಿತಿ ಹೊಂದುತ್ತವೆ. ಅಂದರೆ ಬದಲಾವಣೆ

ಹೊಂದುತ್ತಾ ಇರುತ್ತವೆ, ಕ್ಷೀಣಿಸುತ್ತವೆ ಅಂದರೆ ನಿಧಾನವಾಗಿ ಕೃಷಿಸುತ್ತವೆ, ವ್ಯಾಧಿಗ್ರಸ್ತವಾಗುತ್ತವೆ, ಕೊನೆಗೆ ನಾಶವಾಗುತ್ತವೆ. ಅಂದರೆ ಅದೃಶ್ಯವಾಗುತ್ತವೆ.

ಆದ್ದರಿಂದ ಯಾವುವು ಅದೃಶ್ಯವಾಗುತ್ತವೆಯೋ ಎಂದು ತಿಳಿಯೋಣ.

ಮಾನವನ ರೂಪಗಳಂತೆ ಎಷ್ಟೋ ರೂಪಗಳು, ಎಷ್ಟೋ ಜಾತಿಗಳು ಇವೆ, ಅವುಗಳಿಗೆಲ್ಲಾ ಅದೇ ಪರಿಸ್ಥಿತಿ ಎಂದು ಆತನು ಹೇಳಿದ್ದಾನೆ.

ಆದರೆ ಆತ್ಮಕ್ಕೆ "ಜನನವಿಲ್ಲ, ಮರಣವಿಲ್ಲ", "ಹುಟ್ಟೂ ಇಲ್ಲ ಸಾವೂ ಇಲ್ಲ" ಆತ್ಮ ದೇಹವು ನಶಿಸಿದ ಮಾತ್ರಕ್ಕೆ ನಶಿಸುವುದಿಲ್ಲ ಎಂದು ಹೇಳಿದನು. ಆದ್ದರಿಂದ ಆತ್ಮವು ಎಷ್ಟು ಶ್ರೇಷ್ಠವಾದದ್ದು ಎಂದು ತಿಳಿದುಕೊಳ್ಳಿ.

ಯಾವ ಆತ್ಮ ಸಾಕ್ಷಾತ್ಕಾರಕ್ಕಾಗಿ ಮಾನವರು ಹಪಹಪಿಸುತ್ತಾರೋ ಪ್ರಯತ್ನಿಸುತ್ತಾರೋ, ಕೃಷಿ ಮಾಡುತ್ತಾರೋ, ಕಷ್ಟ ಪಡುತ್ತಾರೋ ಕೊನೆಗೆ ಆ ಆತ್ಮ ಯಾರೋ ಅಲ್ಲ, ನಾನೇ ಎಂಬ ವಿಷಯವನ್ನು ತಿಳಿದುಕೊಳ್ಳುತ್ತಾರೆ, ಆಶ್ಚರ್ಯಪಡುತ್ತಾರೆ.

ಆತ್ಮಸಾಕ್ಷಾತ್ಕಾರವೆಂದರೇನು? ಈ ಕಣ್ಣುಗಳಿಂದ ನೋಡುವುದಿಲ್ಲ, ಆ ಆತ್ಮಾನುಭವವನ್ನು ಹೊಂದಬೇಕು. ಆ ಆತ್ಮ ಯಾರೋ ಅಲ್ಲ ನಾನೇ ಎಂಬ ಅನುಭವವು ಆಗ ಉಂಟಾಗುತ್ತದೆ. ಇಷ್ಟಕ್ಕೂ ನಾನು ಪ್ರಯತ್ನ ಮಾಡುವುದು ನನ್ನನ್ನು ನಾನು ತಿಳಿದುಕೊಳ್ಳುವುದಕ್ಕಾ? ಮತ್ತೆ ಆಶ್ಚರ್ಯವಲ್ಲದೇ ಮತ್ತೇನು? ಯಾರನ್ನಾದರೆ ಶ್ರೇಷ್ಠನು ಅಂದುಕೊಂಡೆವೋ ಅದು ನಾನೇ ಎಂಬುದು ಅರಿವಾಗುತ್ತದೆ, ಅನುಭವದೊಳಗೆ ಬರುತ್ತದೆ. ಅಷ್ಟೇ ಅಲ್ಲ, ಈ ಜೀವನೇ ದೇವನು ಎಂದು ತಿಳಿದುಕೊಳ್ಳುತ್ತಾನೆ. ಇದನ್ನೇ "ಜೀವ, ಬ್ರಹ್ಮೈಕ್ಯಂ" ಎನ್ನುತ್ತಾರೆ. ಅಂದರೆ "ನಾನು ಬೇರೆ, ದೇವರು ಬೇರೆ ಎಂಬ ಸ್ಥಿತಿಯಿಂದ" "ಆ ಬ್ರಹ್ಮನೇ ನಾನು" ಎಂದು ತಿಳಿಸುಕೊಳ್ಳುವುದೇ "ಜೀವ ಬ್ರಹ್ಮೈಕ್ಯ" ಅದನ್ನೇ ಆತ್ಮ ಸಾಕ್ಷಾತ್ಕರ, ಆತ್ಮಾನುಭವ ಎನ್ನುತ್ತಾರೆ. ಆ ಪ್ರಯತ್ನವೇ ಈಗ ನಾವೆಲ್ಲಾ ಮಾಡುತ್ತಿದ್ದೇವೆ.

ಅದಕ್ಕೆ ಅನುಗುಣವಾದ "ಶ್ವಾಸದ ಮೇಲೆ ಗಮನ" ಧ್ಯಾನವನ್ನು ಮಾಡುತ್ತಿದ್ದೇವೆ. ಕೊನೆಗೆ ಯಾವುದೋ ಒಂದು ದಿನ ನಮಗೆ ತಿಳಿಯದೆಯೇ ಆ ಅನುಭೂತಿಯನ್ನು ಹೊಂದುತ್ತೇವೆ. ಆಗಲೇ ನಮಗೆ ಆಶ್ಚರ್ಯವಾಗುತ್ತದೆ. ಏನಿದು, ದೇವರು ಬೇರೆ ಇಲ್ಲವೇ? ಬೇರೆ ಇದ್ದಾನೆಂದು ಇಷ್ಟು ದಿನ ಪೂಜೆ ಮಾಡಿದೆನು, ಭಜನೆಗಳನ್ನು ಮಾಡಿದೆನು, ಸ್ತೋತ್ರಗಳನ್ನು ಓದಿದೆನು. ಇಷ್ಟು ದಿನ ಕೂಡಾ ನಾನು ಕೇಳುತ್ತಿರುವವೆಲ್ಲಾ, ನಾನು ಕೋರುತ್ತಿರುವವೆಲ್ಲಾ, ನನ್ನನ್ನೇ ಕೇಳುತ್ತಿದ್ದೇನಾ ಎಂದು ಆಶ್ಚರ್ಯಪಡುತ್ತೀರಿ, ನಗುತ್ತೀರಿ, ನಿಮ್ಮಷ್ಟಕ್ಕೆ ನೀವೇ! ಅದಕ್ಕೆ ಯೋಗಿ ವೇಮನ

**ಪೂಜ ಚೇಯ ಚೇಯ ಪುಜಾರಿ ತಾನಾಯೇ**

**ಪೂಜವಸ್ತು ವೆನ್ನ ಭುವಿನಿ ತಾನೇ ।**

**ಯಾಡ ಪೂಜಸೇಯು । ನೆಲ್ಲ ದಿಕ್ಕುಲ ತಾನೇ!**

**ತಾನೇ ನೇನು, ನೇನೇ ತಾನು, ವೇಮ ॥ ಎಂದಿದ್ದಾರೆ.**

**ತಾತ್ಪರ್ಯ :** ನೀನು ಹಾಗೆ ಪೂಜೆಗಳನ್ನು ಮಾಡುತ್ತಾ ಇದ್ದರೆ ಒಬ್ಬ ಪೂಜಾರಿಯಾಗಿ ತಯಾರಾಗುವೆ. ಎಲ್ಲೆಂದು ಪೂಜೆ ಮಾಡುವೆ? ನೀನು ಪೂಜಿಸುವ ಆ ವಸ್ತುವು ಏನೋ ಅಲ್ಲ, ನೀನೇ! "ಆತನು ನೀನೇ–ನೀನೇ ಆತನು" ಎಂದು ಹೇಳಿದ್ದಾನೆ ವೇಮನ ಯೋಗಿ.

ಇದು ಬಹಳ ಆಶ್ಚರ್ಯಕರವಾದ ವಿಷಯ, ನಮಸ್ಕಾರಗಳನ್ನು ಮಾಡುತ್ತೀರಿ, ಸಂಕಲ್ಪಗಳನ್ನು ಇಡುತ್ತೀರಿ, ಕೋರಿಕೆಗಳನ್ನು ಕೋರುತ್ತೀರಿ, ರಕ್ಷಿಸು ತಂದೆ, ಕಾಪಾಡು ತಂದೆ ಎನ್ನುತ್ತೀರಿ. ಕೊನೆಗೆ ಹಾಗೇ ರಕ್ಷಿಸು ಎನ್ನುವ ತಾನೇ ದೇವರು ಎಂದು ತಿಳಿಯುತ್ತದೆ.

ಅದಕ್ಕೆ "ದೇವರೇ! ದೇವರೇ! ಎಂದು ದೇವರಾಡುವವನೇ ದೇವರು" ಅನ್ನುತ್ತಾರೆ ಪತ್ರೀಜಿಯವರು. ಪೂಜೆ ಮಾಡುವ ಪೂಜಾರಿಯೇ ದೇವರು ಎಂದು ಪತ್ರೀಜಿ ಹೇಳುತ್ತಾರೆ. ಆದ್ದರಿಂದ ಪೂಜೆಯಲ್ಲಿ ಮಾಡಬೇಕಾದದ್ದು ಧ್ಯಾನವೆನ್ನುತ್ತಾರೆ. ಧ್ಯಾನ ಮಾಡಿದರೆ ಆ ದೇವರು ನೀನೇ ಎಂದು ತಿಳಿಯುತ್ತದೆ ಎನ್ನುವರು.

ನೀನೇ ಅವನಾದರೆ! ಎಲ್ಲಿಂದ ಬರುತ್ತಾನೆ? ಆದ್ದರಿಂದ "ನಿನ್ನನ್ನು ನೀನೇ ಉದ್ಧರಿಸಿಕೊಳ್ಳಬೇಕು" ಎನ್ನುತ್ತಾರೆ ಪತ್ರೀಜಿ. ಪತ್ರೀಜಿಯವರು ಹೇಳುವುದನ್ನೇ ಬುದ್ಧನು "ಅಪ್ಪೋ ದೀಪೋ ಭವ"ವೆಂದು ಹೇಳಿದ್ದಾನೆ. ಆದರೆ ಯಾರಿಗೆ ಅರ್ಥವಾಗುತ್ತಿಲ್ಲ. ಶ್ರೀ ಕೃಷ್ಣನು ಕೂಡಾ "ಉದ್ದರೇದಾತ್ಮನಾತ್ಮಾನಂ" ಎಂದಿದ್ದಾರೆ.

ಆದ್ದರಿಂದ ಪತ್ರೀಜಿಯವರು ಹೇಳಿದಂತೆ ಈ "ಶ್ವಾಸದ ಮೇಲೆ ಗಮನ"ವಿಟ್ಟು ಧ್ಯಾನವನ್ನು ಮಾಡಿದರೆ ಈ ಸತ್ಯವನ್ನು ತಿಳಿದುಕೊಳ್ಳುತ್ತೀರಿ, ಅಂತಹ ಉನ್ನತವಾದ ಆತ್ಮ ನೀನೇ ಎಂಬ ವಿಷಯವನ್ನು ತಿಳಿದುಕೊಳ್ಳುತ್ತೀರಿ, ನಿನಗೆ ಸಾವು ಇಲ್ಲ ಎಂಬ ವಿಷಯ ತಿಳಿಯುತ್ತದೆ.

ಅದನ್ನೇ ಹೇಳುತ್ತಾನೆ ಯಮಧರ್ಮರಾಜನು. ಈ ದೇಹಗಳು ನಶಿಸಿದ ಮಾತ್ರಕ್ಕೆ ಆತ್ಮವು ನಶಿಸದು ಎಂದಿದ್ದಾನೆ.

**ಭಗವದ್ಗೀತೆಯಲ್ಲಿ ಕೂಡಾ,**

**ಶ್ಲೋಕ : ನಜಾಯಿತೇ ಮ್ರಿಯತೇ ವಾ ಕದಾಚಿತ್ ನಾಯಂ**
**ಭೂತ್ವಾ ಭವಿತಾ ವಾ ನ ಭೂಯಃ ।**
**ಅಜೋ ನಿತ್ಯ ಶಾಶ್ವತೋ ಯಂ ಪುರಾಣೋ ನ ಹ**
**ನ್ಯತೇ ಹನ್ಯಮಾನೇ ಶರೀರೇ ॥**

**(ಭ.ಗೀ. 2–20)**

**ತಾತ್ಪರ್ಯ :** ಈ ಆತ್ಮ ಎಂದರೆ ಬ್ರಹ್ಮ ಅಂದರೆ ಸತ್ಯವು ಎಂದಿಗೂ ಹುಟ್ಟುವುದಿಲ್ಲ, ಸಾಯುವುದೂ ಇಲ್ಲ. ಹುಟ್ಟಿ ಮತ್ತೆ ಹೊಸದಾಗಿ ಇರುವುದೂ ಅಲ್ಲ. ಕಾರಣ ಇದು ಮತ್ತೆ ಹುಟ್ಟಿ ಹೊಸದಾಗಿ ಇರುವುದೂ ಅಲ್ಲ. ಕಾರಣ ಇದು ಜನ್ಮವಿಲ್ಲದ್ದು, ನಿತ್ಯವಾದದ್ದು, ಸನಾತನವಾದದ್ದು, ಪುರಾತನವಾದದ್ದು. ಶರೀರವನ್ನು ಸಾಯಿಸಿದರೂ, ಆತ್ಮ ಎನ್ನುವುದು ಸಾಯಿಸಲ್ಪಡುವುದಿಲ್ಲ.

ಅಂದರೆ ಆತ್ಮವು ಹುಟ್ಟುತ್ತಿಲ್ಲ, ಸಾಯುತ್ತಿಲ್ಲ. ಹೊಸ ಜನ್ಮ ಅಂದರೆ ಹೊಸ ಆತ್ಮವು ಬರುತ್ತಿಲ್ಲ, ಆ ಆತ್ಮವೇ ಇನ್ನೊಂದು ಶರೀರವನ್ನು ಧರಿಸಿ ಬರುತ್ತದೆ. ತಿಳಿದುಕೋ, ಈ ದೇಹವು ಆತ್ಮನಾದ ನೀನು ಧರಿಸಿರುವ ಒಂದು ಶರ್ಟ್.

ಅದನ್ನೇ ಶ್ರೀಕೃಷ್ಣ ಭಗವಾನನು ಹೇಳಿದ್ದಾನೆ.

**ಶ್ಲೋಕ : ವಾಸಾಂಸಿ ಜೀರ್ಣಾನಿ ಯಥಾ ವಿಹೋಯ**
**ನವಾನಿ ಗೃಹ್ಣೋತಿ ನರೋಪರಾಣಿ ।**
**ತಥಾ ಶರೀರಾಣಿ ವಿಹೋಯ ಜೀರ್ಣಾ**
**ನ್ಯನ್ಯಾನಿ ಸಂಯಾತಿ ನವಾನಿದೇಹಿ ॥**

**(ಭ.ಗೀ. 2–22)**

**ತಾತ್ಪರ್ಯ :** ಮಾನವನು ಹರಿದು ಹೋದ ಹಳೆಯ ಬಟ್ಟೆಗಳನ್ನು ಬಿಟ್ಟು ಹೊಸ ಬಟ್ಟೆಗಳನ್ನು ಹೇಗೆ ಧರಿಸುತ್ತಾನೋ! ಹಾಗೆಯೇ ಆತ್ಮ ಮುದಿಯಾಗಿ ಹೋದ ಹಳೆಯ ಶರೀರವನ್ನು ಬಿಟ್ಟು ಹೊಸ ಶರೀರವನ್ನು ಧರಿಸುತ್ತದೆ.

ಈ ಶ್ಲೋಕವು ಅರ್ಥವಾದರೆ ಆತ್ಮಹತ್ಯೆಯನ್ನು ಯಾರೂ ಮಾಡಿಕೊಳ್ಳರು. ಪೂರ್ತಿ ಅಜ್ಞಾನದಲ್ಲಿ ಇರುವವನೇ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾನೆ.

ಕಷ್ಟಗಳೆನ್ನುವಂತವು ಮಾಡಿದ ಕರ್ಮಗಳನ್ನು ಆಧರಿಸಿ ಬರುತ್ತದೆ. ನೀನು ಶರೀರವನ್ನು ಬದಲಾಯಿಸುತ್ತೇನೆಂದರೆ ತಪ್ಪಿಸಿಕೊಳ್ಳಲು ಆಗದು. ಆದ್ದರಿಂದ ಮಾಡುವ ಕರ್ಮಗಳನ್ನು ಎಚ್ಚರದಿಂದ ಮಾಡಬೇಕು.

ಕರ್ಮಗಳನ್ನು ಬಿಟ್ಟು ಬಿಡು ಎಂದರೆ ನೀನು ಏನು ಬಿಡುವುದಿಲ್ಲ, ನಿನ್ನಿಂದಾಗದು. ನೀನು ಮಾಡುವ ಕರ್ಮಗಳು ನಿನ್ನ ಗುಣವನ್ನಾಧರಿಸಿ ಇರುತ್ತವೆ. ಆದ್ದರಿಂದ ಗುಣವನ್ನು ಬದಲಾಯಿಸಿಕೋ, ಬುದ್ಧಿಯನ್ನು ವಿಕಸನ ಮಾಡಿಕೊ, ನಿನ್ನ ಬುದ್ಧಿಯು ವಿಕಸಿಸಿದರೆ ಕಷ್ಟಗಳು ಬರುವಂತ ಕರ್ಮಗಳನ್ನು ಮಾಡುವುದಿಲ್ಲ. ಆಗ ಕಷ್ಟಗಳನ್ನು ಬಾ ಎಂದರೂ ಬರುವುದಿಲ್ಲ.

ಅದಕ್ಕಾಗಿ ಭೀಮವರಂ ಬರಬೇಕು, ಬಿಡದಂತೆ ಶ್ರದ್ಧೆಯಿಂದ ಸಾಧನೆಯನ್ನು ಮಾಡಬೇಕು, ಬುದ್ಧಿಯನ್ನು ವಿಕಸನ ಮಾಡಿಕೊಳ್ಳಬೇಕು ಎನ್ನುತ್ತೇನೆ. ಆಗ ನಿಮ್ಮ ವರ್ತನೆಯಲ್ಲಿ ವಿಪರೀತವಾದ ಬದಲಾವಣೆ ಬರುತ್ತದೆ, ತಪ್ಪುಗಳನ್ನು ಮಾಡು ಎಂದರೂ ಮಾಡುವುದಿಲ್ಲ. ಮನಸ್ಸು ಶುದ್ಧಿಯಾದಾಗ, ಅಂತರಾತ್ಮದಿಂದ ನಿಮಗೆ ಧರ್ಮಗಳು ತಿಳಿಯುತ್ತವೆ. ಆದ್ದರಿಂದ ಮೊದಲು ಬುದ್ಧಿ ಸಂಪಾದಿಸಿಕೊಳ್ಳಬೇಕು, ನಂತರ ಜ್ಞಾನ, ನಂತರ ಆತ್ಮ ಸಾಕ್ಷಾತ್ಕಾರವು.

ಆದಕಾರಣ ಈ ಶರೀರವನ್ನು ಒಂದು ವಸ್ತ್ರದಂತಾದ್ದೇ ಈ ಶರೀರವೆಂದು ಹೇಳಿದ್ದಾನೆ ಶ್ರೀ ಕೃಷ್ಣನು. ಅಷ್ಟೇ ಅಲ್ಲ ಆತ್ಮವು ಎಷ್ಟು ಶ್ರೇಷ್ಠವಾದದ್ದೆಂದು ಹೇಳಿದ್ದಾನೆ. ಶರೀರವನ್ನು ನಾಶ ಮಾಡಬಹುದು, ಆದರೆ ಆತ್ಮನನ್ನು ಯಾರೂ ಏನೂ ಮಾಡಲಾರರು ಎಂದಿದ್ದಾನೆ ಕೃಷ್ಣ.

**ಶ್ಲೋಕ : ನೈನಂ ಭಿನ್ದನ್ತಿ ಶಸ್ತ್ರಾಣಿ, ನೈನಂದಹಾತಿ ಪಾಪಕಃ ।**

**ನ ಚೈನಂ ಕ್ಲೇದಯನ್ತ್ಯಾಪೋ ನ ಶೋಷಯತಿ ಮಾರುತಃ ॥**

**(ಭ.ಗೀ. 2–23)**

**ತಾತ್ಪರ್ಯ :** ಆತ್ಮನನ್ನು ಶಸ್ತ್ರಗಳು ಛೇದಿಸಲಾರವು, ಅಗ್ನಿಯು ದಹಿಸುವುದಿಲ್ಲ, ನೀರು ತೋಯಿಸಲಾರದು, ವಾಯುವು ಆರಿಸಲಾಗದು ಎಂದು ಹೇಳಿದ್ದಾನೆ ಶ್ರೀ ಕೃಷ್ಣನು. ಅಷ್ಟು ಅತ್ಯುನ್ನತವಾದ ಆತ್ಮ ಎಂದಿದ್ದಾನೆ. ಆತ್ಮನಾದ ನಿಮ್ಮನ್ನು ಯಾವನು ಏನು ಮಾಡಲಾರನು.

ಅವನು ಸಾಯಿಸುತ್ತೇನೆ ಎನ್ನುತ್ತಾನೆ, ಕತ್ತಿಗಳು ನಿನ್ನನ್ನು ಏನೂ ಮಾಡಲಾರವು. ಬೆಂಕಿಯಲ್ಲಿ ಹಾಕುತ್ತೇನೆ ಎನ್ನುತ್ತಾನೆ, ಅದೂ ಕೂಡಾ ಏನೂ ಮಾಡಲಾರವು.

ನೀವು ಭಕ್ತ ಪ್ರಹ್ಲಾದನ ಸಿನಿಮಾವನ್ನು ನೋಡಿರಿ. ನಿಮಗೆ ಅರ್ಥವಾಗುತ್ತದೆ. ಆ ಹಿರಣ್ಯಕಶಿಪನು ಪ್ರಹ್ಲಾದನನ್ನು ನಾಶ ಮಾಡಬೇಕೆಂದುಕೊಂಡನು. ಹಾವುಗಳಿಂದ ಕಡಿಸಿದನು, ಬೆಂಕಿಯಲ್ಲಿ ಹಾಕಿಸಿದನು, ಸಮುದ್ರದಲ್ಲಿ ಬಿಸಾಡಿದನು, ಕತ್ತಿಗಳಿಂದ ಕಡಿಸಿದನು, ಏನು ಮಾಡಿದರೂ ಪ್ರಹ್ಲಾದನು ಹಾಗೆಯೇ ಇದ್ದನು.

ಇದರ ಅರ್ಥ ಯಾರಿಗೂ ಸಾವು ಇಲ್ಲ, ಅದನ್ನು ಪ್ರಹ್ಲಾದನು ತಿಳಿದುಕೊಂಡನು. ಅದಕ್ಕೆ ನಿಶ್ಚಿಂತೆಯಾಗಿ ಇದ್ದನು. ಇದನ್ನೇ ಹೇಳುತ್ತಿದ್ದಾನೆ, ಯಮಧರ್ಮರಾಜು, ಈ

ನಚಿಕೇತ "ಜನನ ಮರಣಗಳಿಲ್ಲದ" ಅಂದರೆ ಜನ್ಮಾದಿ ವಿಕಾರಗಳು ಇಲ್ಲದ "ಆತ್ಮ" ದೇಹವು ನಶಿಸಿದರೂ, ನಶಿಸುವುದಿಲ್ಲ, ಆತ್ಮ ಅಷ್ಟು ಉನ್ನತವಾದದ್ದು. ಅಂತಹ ದೇಹಗಳು ಆ ಪರಬ್ರಹ್ಮವೊಂದರ ಸೃಷ್ಟಿ. ಆ ಪರಬ್ರಹ್ಮನಿಂದ ಉದ್ಭವಿಸಿವೆ, ಆತನಿಂದಲೇ ಬಂದಿವೆ.

ಈ ಉಪನಿಷತ್ತುಗಳಲ್ಲಿ ಏನು ಹೇಳಲ್ಪಟ್ಟಿದೆಯೋ ಅದೇ ಭಗವದ್ಗೀತೆಯಲ್ಲಿ ಕೂಡಾ ಇದೆ. ಉಪನಿಷತ್ತುಗಳ ಸಾರವೆಲ್ಲಾ ಭಗವದ್ಗೀತೆಯಲ್ಲಿದೆ. ಭಗವದ್ಗೀತೆ ನಿಮಗೆ ಚೆನ್ನಾಗಿ ಅರ್ಥವಾದರೆ ಸಮಸ್ತವೂ ಅರ್ಥವಾದಂತೆಯೇ. ಅದಕ್ಕೆ ಭಗವದ್ಗೀತೆಯನ್ನು ಓದಬೇಕು ಎನ್ನುತ್ತಾರೆ.

*** ***

ಆತ್ಮಜ್ಞಾನಿ ಶರೀರ ಅನಿತ್ಯ, ಆತ್ಮ ನಿತ್ಯ ಎಂಬ
ಸತ್ಯವನ್ನು ತಿಳಿದುಕೊಳ್ಳುತ್ತಾನೆ

**–ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್‌ರವರು**

ದೈವವು ತಾನಾಗಿದ್ದು, ದೈವವನ್ನು ಬೇರೊಂದು ಕಡೆ
ಹುಡುಕುವವನು ಅಜ್ಞಾನಿ

**–ಬ್ರಹ್ಮವಿದ್ವರಿಷ್ಠ ರಾಜ್ಯಲಕ್ಷ್ಮಿ ಅಮ್ಮನವರು**

# 14. ಪರಮಾನಂದವನ್ನು ಹೊಂದಬೇಕೆಂದರೆ?

ಯಮಧರ್ಮರಾಜನು ಬೋಧಿಸಿದ ವಿಷಯವನ್ನು ತಿಳಿದುಕೊಳ್ಳೋಣ. "ಮನೋನಿಗ್ರಹವಿಲ್ಲದ ಮಾನವನು ಪರಿಶುದ್ಧತೆ ಇಲ್ಲದವನಾಗಿ ಅಕ್ಷರ ಸ್ವರೂಪನಾದ ಆತ್ಮನನ್ನು ಹೊಂದದೇ, ಸಂಸಾರವನ್ನು ಹೊಂದುತ್ತಿದ್ದಾನೆ."

"ಜ್ಞಾನವುಳ್ಳವನು, ಮನೋನಿಗ್ರಹವಿರುವವನು ಸದಾ ಪರಿಶುದ್ಧನಾದ ಮಾನವನು ಮತ್ತೆ ಹುಟ್ಟಿಲ್ಲದ ಪರಮ ಪದವನ್ನು ಹೊಂದುತ್ತಿದ್ದಾನೆ."

ಮನೋನಿಗ್ರಹವಿಲ್ಲದ ಮಾನವನು ಅಂದರೆ ಮನಸ್ಸು ಚಂಚಲವಾಗಿರುವವನು, ಒಂದು ರೀತಿಯಲ್ಲಿ ಹೇಳಬೇಕೆಂದರೆ ಧ್ಯಾನವನ್ನು ಮಾಡದವನು, ಮನಸ್ಸು

ಹಿಡಿತದಲ್ಲಿಟ್ಟುಕೊಳ್ಳಲಾರದವನು ಅಂದರೆ ಅವನಿಗೆ ಅನೇಕ ರೀತಿಯಲ್ಲಿ ಮನಸ್ಸು ಓಡುತ್ತಾ ಇರುತ್ತದೆ ಎಂದು ಅರ್ಥ.

ಅಂತಹವನಿಗೆ ಮನಸ್ಸಿನ ಶುದ್ಧತೆ ಇರುವುದಿಲ್ಲ. ಅಂತಹವನು ಅಕ್ಷರ ಸ್ವರೂಪ ಆತ್ಮನನ್ನು ಅಂದರೆ ನಾಶವಿಲ್ಲದ ಆತ್ಮನನ್ನು ಅಂದರೆ ಬ್ರಹ್ಮನನ್ನು ಹೊಂದಲಾರದೆ ಸಂಸಾರವನ್ನು ಹೊಂದುತ್ತಿದ್ದಾನೆ, ಅಂದರೆ ಹುಟ್ಟು ಸಾವುಗಳ ಜೀವನವನ್ನು ಹೊಂದುತ್ತಿದ್ದಾನೆ ಎಂದು ಯಮಧರ್ಮರಾಜನು ಹೇಳುತ್ತಿದ್ದಾನೆ. ಅಂತಹ ಜೀವನವು ಯಾವಾಗಲೂ ದುಃಖದಿಂದಲೇ ಕೂಡಿರುತ್ತದೆ.

ಹಾಗಾಗಿ ಅಂತಹ ಸ್ಥಿತಿಯನ್ನು ಅಧಿಗಮಿಸಬೇಕೆಂದರೆ? ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು, ಮನೋ ನಿಗ್ರಹವನ್ನು ಹೊಂದಿರಬೇಕು. ಅದಕ್ಕೆ ನೀವು ಧ್ಯಾನವನ್ನು ಎಷ್ಟು ತೀವ್ರವಾಗಿ ಮಾಡಿದರೆ ನಿಮ್ಮ ಮನಸ್ಸು ನಿಗ್ರಹದಲ್ಲಿ ಇರುತ್ತದೆ, ಮೊದಲು ಅದನ್ನು ಸಾಧಿಸಬೇಕು.

ಮನಸ್ಸು ನಿಶ್ಚಲವಾದರೆ ಅವನು ಮನಸ್ಸನ್ನು ನಿಗ್ರಹಿಸಿದಂತೆಯೇ ಲೆಕ್ಕ. ಅಂತಹವರು ಕಣ್ಣು ಮುಚ್ಚಿದೊಡನೆ ಐದು, ಹತ್ತು ನಿಮಿಷಗಳಲ್ಲಿ ಆಲೋಚನೆಗಳು ನಿಂತುಬಿಡುತ್ತವೆ. ಅವರಿಗೆ ಮನೋನಿಗ್ರಹವು ಇದ್ದಂತೆಯೇ ಲೆಕ್ಕ. ಆ ಸ್ಥಿತಿಯು ಭೀಮವರಂಗೆ ಬರುವುದರಿಂದ ಬಹಳ ಬೇಗನೇ ಬರುತ್ತದೆ, ಅವರು ಚೆನ್ನಾಗಿ ಕುಳಿತುಕೊಳ್ಳಬಲ್ಲರು, ಮನೋನಿಗ್ರಹ ಹೊಂದಿದವರು ಆಗುತ್ತಾರೆ. ಇದು ಬಹಳ ಮುಖ್ಯ.

ಯಮಧರ್ಮರಾಜು ಹೇಳಿರುವಂತ ಮನೋನಿಗ್ರಹ ಅಂದರೆ ಮನಸ್ಸು ಯಾವುದನ್ನು ಗ್ರಹಿಸದೇ ಹೋಗುವುದು, ಆ ಸ್ಥಿತಿ "ಶ್ವಾಸದ ಮೇಲೆ ಗಮನ"ವಿಟ್ಟವರಿಗೇ ಅದು ಸಾಧ್ಯ. ಅಂತಹ ನಿಗ್ರಹ ಸ್ಥಿತಿ ಹೊಂದಿದ ಮಾನವನು ಪರಿಶುದ್ಧತೆ ಉಳ್ಳವನಾಗುತ್ತಾನೆ? ಧ್ಯಾನದಲ್ಲಿ ಮೊದಲು "ಚಂಚಲ ಸ್ಥಿತಿಯಿಂದ ನಿಶ್ಚಲ ಸ್ಥಿತಿಗೆ ಬರುತ್ತಾರೆ. ನಿಶ್ಚಲ ಸ್ಥಿತಿ ಎಂದರೆ ಏನನ್ನು ಗ್ರಹಿಸದ ಸ್ಥಿತಿ." ಹಾಗೆ ಇಡುತ್ತಾ ಇದ್ದಾಗ ನಿಧಾನವಾಗಿ, ಮೆಲ್ಲ ಮೆಲ್ಲಗೆ ಮನಸ್ಸು ನಿರ್ಮಲವಾಗುತ್ತದೆ ಅಂದರೆ ಶುದ್ಧವಾಗುತ್ತದೆ. ಒಳ್ಳೆಯದಾಗಿ ಬದಲಾಗುತ್ತದೆ, ಬುದ್ಧಿಯು ಚೆನ್ನಾಗಿ ವಿಕಸಿಸುತ್ತದೆಂದು ಹೇಳಿಕೊಂಡಿದ್ದೇವೆ.

ಯಮಧರ್ಮರಾಜನು ಕೂಡಾ ಮನೋನಿಗ್ರಹವು ಇಲ್ಲದ ಮಾನವನು, ಮನಸ್ಸು ಚಂಚಲವಾಗಿರುವುದರಿಂದ ಶುದ್ಧತೆಯನ್ನು ಸಾಧಿಸಲಾರ ಎಂದಿದ್ದಾನೆ.

ಆದರೆ ಆ ನಿಗ್ರಹವುಳ್ಳವನು ಮನಸ್ಸನ್ನು ಶುದ್ಧಪಡಿಸಿಕೊಳ್ಳುತ್ತಾನೆ, ತಿಂಗಳುಗಳು,

ವರ್ಷಾನುಗಟ್ಟಲೆ ಹಾಗೆ ಕುಳಿತುಕೊಂಡರೆ! ಮನಸ್ಸು ಶುದ್ಧ, ಪರಿಶುದ್ಧ, ಮಹಾ ಪರಿಶುದ್ಧತೆಯ ಸ್ಥಾಯಿಗೆ ಹೋಗಿಬಿಡುತ್ತೀರಿ.

ಮನಸ್ಸು ಶುದ್ಧಿಯಾಗದಿದ್ದರೆ, ಬುದ್ಧಿಯು ವಿಕಸಿಸುವುದಿಲ್ಲ, ಜ್ಞಾನವು ಬಾರದು, ಕೊನೆಗೆ ಆತ್ಮಾನುಭೂತಿಯನ್ನು ಹೊಂದಲಾರನು, ಆತ್ಮಸಾಕ್ಷಾತ್ಕಾರವನ್ನು ಹೊಂದಲಾರನು. ಅಕ್ಷರ ಸ್ವರೂಪ ಆತ್ಮನನ್ನು ಹೊಂದಲಾರನು ಎಂದು ಹೇಳುತ್ತಿದ್ದಾನೆ. "ಅಕ್ಷರ ಅಂದರೆ ನಾಶವಿಲ್ಲದ್ದು, ಕ್ಷರ ಅಂದರೆ ನಶಿಸಿ ಹೋಗುವ". ಅಕ್ಷರ ಸ್ವರೂಪವಾದಂತಹ ಆತ್ಮನನ್ನು ಅಂದರೆ ನಾಶವಿಲ್ಲದ ಆತ್ಮನನ್ನು ಹೊಂದಲಾರದೆ, ಮತ್ತೇ ಸಂಸಾರದೊಳಗೆ ಬರುತ್ತಾನೆ.

ಯಮಧರ್ಮರಾಜನು ಯಾವುದನ್ನಾದರೆ ಬೋಧಿಸಿದ್ದಾನೋ ಅದನ್ನು ನಾವೆಲ್ಲಾ ಸಾಧಿಸುವ ಪ್ರಯತ್ನ ಮಾಡುತ್ತಿದ್ದೇವೆ, ಮನಸ್ಸನ್ನು ನಿಗ್ರಹಿಸುತ್ತಿದ್ದೇವೆ, ನಂತರ ಮನಸ್ಸನ್ನು ಶುದ್ಧಪಡಿಸಿಕೊಳ್ಳುತ್ತಿದ್ದೇವೆ.

ಮೊದಲನೆಯ ಹಂತದಲ್ಲಿ ಮನಸ್ಸು ನಿಶ್ಚಲವಾಗುತ್ತದೆ, 2ನೇ ಹಂತದಲ್ಲಿ ನಿಶ್ಚಲವಾದ ಮನಸ್ಸು ನಿರ್ಮಲವಾಗುತ್ತದೆ, 3ನೇ ಹಂತದಲ್ಲಿ ನಿರ್ಮಲವಾದ ಮನಸ್ಸು ಶೂನ್ಯವಾಗುತ್ತದೆ. ಮನಸ್ಸು ಯಾವಾಗಾದರೆ ಶೂನ್ಯವಾಗುತ್ತಾ ಇರುತ್ತದೋ ಆಗ ಜ್ಞಾನವು ಉದಯಿಸುತ್ತದೆ ಎಂದು ಹೇಳಿಕೊಂಡಿದ್ದೇವೆ.

ಯಮಧರ್ಮರಾಜನು, ಈ ಜ್ಞಾನವುಳ್ಳವನಿಗೆ ಮನೋನಿಗ್ರಹ ಇರುತ್ತದೆ, ಮನಸ್ಸು ಪರಿಶುದ್ಧವಾಗಿರುತ್ತದೆ, ಅಂತಹವನು ಮತ್ತೇ ಹುಟ್ಟಿಲ್ಲದ **"ಪರಮಪದ"**ವನ್ನು ಹೊಂದುತ್ತಿದ್ದಾನೆ ಎಂದಿದ್ದಾನೆ. ಅವನಿಗೆ ಅದೇ ಕೊನೆಯ ಜನ್ಮ.

ಈ ಜ್ಞಾನವನ್ನು ಹೊಂದುವುದು ಅಂದರೇನೆ ಆ ಸಾಕ್ಷಾತ್ಕಾರವನ್ನು ಹೊಂದುವುದು. ಎಷ್ಟು ಸ್ಪಷ್ಟವಾಗಿ ಹೇಳಿದ್ದಾನೋ ಒಂದು ಸಾರಿ ನೆನಪಿಟ್ಟುಕೊಳ್ಳಿ, ಆತನು ಸುಮ್ಮನೆ ಒಂದು ವಾಕ್ಯದಲ್ಲಿ ಹೇಳಿದ್ದಾನೆ, ಆದರೆ ಎಷ್ಟು ಕಷ್ಟಪಡಬೇಕು.

ಮನಸ್ಸನ್ನು ಹಿಡಿತದಲ್ಲಿಡುವುದು ಅಂದರೆ ಸಾಮಾನ್ಯವಾದ ವಿಷಯವಲ್ಲ. ಮೊದಲು ನಿಯಂತ್ರಿಸಬೇಕು, ನಂತರ ಅದನ್ನು ಶುದ್ಧಿ ಮಾಡಬೇಕು ಅಂದರೆ ಅದರ ಪ್ರಭಾವವನ್ನು ಕಡಿಮೆ ಮಾಡಬೇಕು. ಆನಂತರ ಅದನ್ನು ಶೂನ್ಯ ಮಾಡಬೇಕು, ಅಂದರೆ ಅದರ ಇರುವಿಕೆಯೇ ಇಲ್ಲದಂತೆ ಮಾಡಬೇಕು, ಅಂತಹವನು ಜ್ಞಾನವಂತನು.

ಮಾನವನು ಎಂದರೆ ಮೂರು ಶರೀರ, ಮನಸ್ಸು ಆತ್ಮ.

ಆತ್ಮಸಾಕ್ಷಾತ್ಕಾರವಾಗಬೇಕು ಅಂದರೆ ಮೊದಲು ಕಣ್ಣುಗಳನ್ನು ಮುಚ್ಚುತ್ತೀರಿ, ಆಗ ಶರೀರವಿರುವುದಿಲ್ಲ. ಅಂದರೆ ನೀವು ಶರೀರದೊಳಗೆ ಇರುತ್ತೀರಿ. ಶರೀರದೊಳಗೆ

ಇರುವಾಗ ಆಲೋಚನೆಗಳು ಬರುತ್ತವೆ. ಅಂದರೆ ಮನಸ್ಸು ಇರುತ್ತದೆ. ತಕ್ಷಣವೇ "ಶ್ವಾಸದ ಮೇಲೆ ಗಮನ"ವಿಡುತ್ತೀರಿ. ಆಗ ಮೆಲ್ಲ ಮೆಲ್ಲಗೆ ಆಲೋಚನೆಗಳು ನಿಂತು ಹೋಗಿ ಮನಸ್ಸು ಕೆಲಸದ ಮಾಡದ ಸ್ಥಿತಿಗೆ ಹೋಗುತ್ತೀರಿ, ನಂತರ ಮನಸ್ಸು ಕೂಡಾ ಇರುವುದಿಲ್ಲ. ಇನ್ನು ಇರುವುದು ಆತ್ಮ. ಆ ಸ್ಥಿತಿಯಲ್ಲಿ ಕುಳಿತುಕೊಳ್ಳುತ್ತೀರಿ.

ನಾವು ಪ್ರತಿದಿನ ಆತ್ಮದೊಂದಿಗೆ ಇರುತ್ತಿದ್ದೇವೆ. ಅಂದರೆ ದೈವದೊಡನೆ ಇರುತ್ತಿದ್ದೇವೆ. ಮನಸ್ಸು ಕೆಲಸ ಮಾಡದ ಸ್ಥಿತಿಯಲ್ಲಿ ನೀವು ಕುಳಿತುಕೊಂಡರೆ ನೀವು ಆತ್ಮಾಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಾ ಇರುತ್ತೀರಿ, ಹಾಗೆ ಕುಳಿತುಕೊಂಡರೆ ಶಕ್ತಿ ಅಪಾರವಾಗಿ ಬೆಳೆಯುತ್ತಾ ಇರುತ್ತದೆ.

ನಿಮಗೆ ನಾನು ಬಲ್ಬು ಹಾಕಿ, ತೋರಿಸುತ್ತಿದ್ದೆನು. ಬಲ್ಬಿನ ಮೇಲೆ ಬಿಳಿಯ ಬಟ್ಟೆ ಇದ್ದರೆ ಶುದ್ಧ ಸಾತ್ವಿಕವೆಂದು, ಹಳದಿ ಬಟ್ಟೆಯಾದರೆ ಸಾತ್ವಿಕವೆಂದು, ಕೆಂಪು ಬಟ್ಟೆಯಾದರೆ, ರಜೋ ಗುಣವೆಂದು, ಕಪ್ಪುಬಟ್ಟೆಯಾದರೆ ತಮೋ ಗುಣವೆಂದು.

ಮನಸ್ಸು ಕಪ್ಪುಬಟ್ಟೆಯಂತೆ ಇದ್ದರೆ ತಮೋಗುಣ, ಆ ಬಲ್ಬಿನ ಮೇಲೆ ಅದು ಇದ್ದಾಗ ಆ ಬಲ್ಬಿನ ಒಳಗೆ ಇರುವ ಕಾಂತಿ ಹೊರಗೆ ಕಾಣಿಸದು.

ಅದಕ್ಕೆ ತಮೋ ಗುಣವುಳ್ಳವರ ಬಳಿ ಆ ದೈವಶಕ್ತಿ ವ್ಯಕ್ತಿವಾಗದು, ಅಂದರೆ ಆ ದೈವದ ಲಕ್ಷಣಗಳು ಅವರಲ್ಲಿ ಇರುವುದಿಲ್ಲ, ಬಹಳ ವಿರುದ್ಧವಾಗಿ ವರ್ತಿಸುತ್ತಾರೆ, ಅವರ ಲಕ್ಷಣವೇ ಅದು.

ಯಾವಾಗಾದರೆ ನೀವು ಧ್ಯಾನ ಮಾಡುತ್ತೀರೋ! ಮನಸ್ಸು ನಿಶ್ಚಲವಾಗಿ ಮೆಲ್ಲ ಮೆಲ್ಲಗೆ ಶುದ್ಧವಾಗುತ್ತದೆ. ಆಗ ಕಪ್ಪು ಬಟ್ಟೆ ತೆಗೆದೊಡನೆ ಇರುವ ಕೆಂಪು ಬಟ್ಟೆಯಲ್ಲಿ ಕಾಂತಿಯು ಸ್ವಲ್ಪ ಬೆಳೆಯುತ್ತದೆ.

ಇನ್ನೂ ನೀವು ಸಾಧನೆ ಮಾಡುತ್ತಾ ಇದ್ದರೆ ಆ ಕೆಂಪು ಬಟ್ಟೆಯನ್ನು ಕೂಡಾ ತೆಗೆದುಬಿಡುತ್ತೇವೆ, ಅಂದರೆ ಮನಸ್ಸು ಇನ್ನೂ ಶುದ್ಧವಾಯಿತೆಂದು ಲೆಕ್ಕ. ಆಗ ಹಳದಿ ಬಟ್ಟೆ ಇರುತ್ತದೆ, ಅಂದರೆ ಕಾಂತಿ ಇನ್ನು ಹೆಚ್ಚುತ್ತದೆ.

ಅದನ್ನು ಕೂಡಾ ತೆಗೆದರೆ ಬಿಳಿಯ ಬಟ್ಟೆ ಇರುತ್ತದೆ, ಕಾಂತಿ ಇನ್ನೂ ಹೆಚ್ಚುತ್ತದೆ. ಇನ್ನೂ ಸಾಧನೆ ಮಾಡಿದರೆ ಆ ಬಟ್ಟೆಯೂ ಕೂಡಾ ಇರದು.

ಪೂರ್ತಿ ಕಾಂತಿಯುತವಾಗುತ್ತದೆ. ಅವರು ಪೂರ್ತಿ ಶಕ್ತಿವಂತರು. ಅಂದರೆ ಆತ್ಮ ಸಾಕ್ಷಾತ್ಕಾರವನ್ನು ಹೊಂದಿದವರಂತೆ ಲೆಕ್ಕ.

ಅವನ ಮನಸ್ಸು 100% ಶೂನ್ಯವಾಯಿತು. ಇನ್ನು ಆ ದೇಹದಲ್ಲಿ ವ್ಯಕ್ತವಾಗುವುದು ಆತ್ಮವೇ ಹೊರತು ಇನ್ನೇನು ಇರದು, ಅಂದರೆ ಅವನು ಪೂರ್ಣವಾಗಿ ದೈವ ಲಕ್ಷಣಗಳೊಂದಿಗೆ ವರ್ತಿಸುತ್ತಾ ಇರುತ್ತಾನೆ. ಅಂದರೆ ಮಾನವನಾಗಿ ಇದ್ದವನು

ಮಾಧವನಾಗಿ ಬದಲಾದಂತೆ ಲೆಕ್ಕ. ಪತ್ರೀಜಿಯವರು ಹೇಳುತ್ತಾರೆ, "ಮಾನವನ ಲಕ್ಷ್ಯ ಮಾಧವನಾಗಿ ಪರಿವರ್ತನೆ ಹೊಂದುವುದೇ", ಇದಕ್ಕಿಂತ ಇನ್ನೇನು ಇಲ್ಲವೆಂದು ಹೇಳುತ್ತಾರೆ. ಇದು ನಿಮಗೆ ಅರ್ಥವಾದರೆ ನೀವು ಬಹಳ ತೀವ್ರಾತಿ ತೀವ್ರವಾಗಿ ಸಾಧನೆಯನ್ನು ಮಾಡುತ್ತೀರಿ, ನಿಮ್ಮಲ್ಲಿ ಆ ಲಕ್ಷಣಗಳು ಬರಬೇಕು.

ರಾವಣಾಸುರನು ಸೀತೆಯನ್ನು ಹೊತ್ತು ಒಯ್ದು ನಾನು ಮಾಡಿದ್ದೇ ಸರಿ ಎನ್ನುತ್ತಾನೆ. ದುರ್ಯೋಧನನು ದ್ರೌಪದಿಯನ್ನು ಎಳೆದು ತಾ ಎಂದನು, ನಾನು ಮಾಡಿದ್ದು ಒಂದು ಕಾರಣಕ್ಕಾಗಿ, ಆಕೆಯು ನನ್ನನ್ನು ಅವಮಾನಿಸಿ ನಕ್ಕಳು, ಅದಕ್ಕೆ ಶಾಸ್ತಿ ಆಗಬೇಕು ಎಂದನು.

ಹೊರಗೆ ಎಲ್ಲರಿಗೆ ತಪ್ಪಾಗಿ ಕಾಣಿಸುತ್ತದೆ, ಅವನಿಗೆ ಸರಿಯೆಂದೇ ಇರುತ್ತದೆ. ಕಾರಣವೇನು? ಅಂದರೆ ಆ ರಜೋಗುಣವೇ ಅವರಿಗೆ ಕಾರಣ, ಮನಸ್ಸು ಮಲಿನವಾಗಿರುವುದೇ ಕಾರಣ.

ಕುಂಭಕರ್ಣನು ಇನ್ನೂ ಮಲಿನ ಮನಸ್ಸುಳ್ಳವನು. ಅವನಿಗೆ ಯಾವ ತಂಟೆಯೂ ಬೇಡ, ಚೆನ್ನಾಗಿ (ಊಟ), ಖಾನಾ, ಪೀನಾ, ಸೋನಾ ಹೊರತು ಮತ್ತ್ಯಾವ ಗೊಡವೆ ಇಲ್ಲ. ಎಷ್ಟು ಹೊತ್ತೂ ತಿನ್ನುವುದು, ಕುಡಿಯುವುದು, ನಿದ್ದೆ ಮಾಡುವುದು ಹೊರತು ಪಕ್ಕದವನ ಗೊಡವೆ ಇರದು, ಅದು ತಮೋ ಗುಣ.

ಹಾಗೆಯೇ ಪದವಿಗಳಿರಬೇಕು, ಎಲ್ಲರ ಮೇಲೆ ಅಧಿಕಾರವನ್ನು ಚಲಾಯಿಸಬೇಕು ಎಂದು ಪದವಿಗಳಿಗಾಗಿ ಬಡಿದಾಡಿ, ಆ ಪದವಿಗಾಗಿಯೇ ಮಾಡಬಾರದ ಕೆಲಸಗಳನ್ನು ಮಾಡುವವರನ್ನು ನೋಡುತ್ತಿದ್ದೇವೆ. ಅದು ರಜೋಗುಣ. ಸಾತ್ವಿಕ ಗುಣದವರು ಸೇವೆಗಳನ್ನು ಮಾಡುತ್ತಿರುತ್ತಾರೆ. ನನ್ನೊಂದಿಗೆ ಎಲ್ಲರೂ ಚೆನ್ನಾಗಿರಬೇಕು ಎನ್ನುವಂತವರು, ಎಲ್ಲರಿಗೂ ಸೇವೆಗಳನ್ನು ಮಾಡುತ್ತಾರೆ.

ಇನ್ನೂ ಬಹಳ ಸ್ವಲ್ಪ ಜನವೇ ಇರುತ್ತಾರೆ. ಅವರು ಇವೆಲ್ಲಾ ನನಗೇಕೆ? ಯಾವ ಹಿಮಾಲಯಗಳಿಗೋ ಹೋಗಿ ಹಾಯಾಗಿ ಆ ಆತ್ಮ ಸಾಕ್ಷಾತ್ಕಾರವನ್ನು ಹೊಂದಿದರೆ ಸಾಕೆಂದು ಅದಕ್ಕಾಗಿ ಪ್ರಯತ್ನಿಸುವವರು ನಮಗೆ ಕಾಣಿಸುತ್ತಾ ಇರುತ್ತಾರೆ, ಅವರು ಶುದ್ಧ ಸಾತ್ವಿಕದವರು. ಈ ವಾಕ್ಯಗಳನ್ನು ಓದಿದರೆ ಅದರಲ್ಲಿ ಎಷ್ಟೋ ಆಳವಾದ ಅರ್ಥ ಇರುತ್ತದೋ ನಮಗೆ ಅರ್ಥವಾಗುತ್ತದೆ.

ಯಮಧರ್ಮರಾಜು ಹೇಳಿದಂತೆ ಮನೋವಿಗ್ರಹವಿಲ್ಲದ ಮಾನವನು ಪರಿಶುದ್ಧತೆ ಇಲ್ಲದವನಾಗಿ, ಮನಸ್ಸು ಮಲಿನವಾಗಿರುವುದರಿಂದ ಅಕ್ಷರ ಸ್ವರೂಪ ಆತ್ಮನನ್ನು, ಅಂದರೆ ನಾಶವಿಲ್ಲದ, ಶ್ರೇಷ್ಠವಾದಂತಹ ಆತ್ಮನನ್ನು ಹೊಂದಲಾರನು.

ಆತ್ಮನನ್ನು ಹೊಂದಿದರೇನೇ ಅಲ್ಲವೇ ಮತ್ತೇ ಜನ್ಮವಿರುವುದಿಲ್ಲ. ಆತ್ಮನನ್ನು ಹೊಂದದಿದ್ದರೆ ಮತ್ತೇ ಸಂಸಾರ ಜೀವನದೊಳಗೆ ಬರಬೇಕಾದದ್ದೇ, ಮತ್ತೇ ಜನ್ಮ ತೆಗೆದುಕೊಳ್ಳಬೇಕಾದದ್ದೇ. ಇವರು ಎಷ್ಟು ಪುಣ್ಯ ಕಾರ್ಯಗಳನ್ನು ಮಾಡಿದರೂ, ಮೋಕ್ಷವು ಬರದು. ಆದರೆ ಬಹಳ ಜನ ಪುಣ್ಯ ಮಾಡಿದರೆ ಮೋಕ್ಷ ಬರುತ್ತದೆ ಎಂದುಕೊಳ್ಳುತ್ತಾರೆ.

ಬಹಳ ಜನರು ಪುಣ್ಯಗಳನ್ನು ಮಾಡಿರಿ, ಪುಣ್ಯಕರ್ಮಗಳನ್ನು ಮಾಡಿರಿ ಎನ್ನುತ್ತಾರೆ. ಆದರೆ ಪುಣ್ಯ ಮಾಡಿದರೆ ಮೋಕ್ಷ ಬರದು. ಧ್ಯಾನವನ್ನು ಮಾಡಿದರೇನೇ. ಆ ಪರಬ್ರಹ್ಮನನ್ನು ಹೊಂದುತ್ತೀರಿ, ಆತ್ಮಸಾಕ್ಷಾತ್ಕಾರವನ್ನು ಹೊಂದುತ್ತೀರಿ, ಆತ್ಮನನ್ನು ದರ್ಶಿಸಬಲ್ಲಿರಿ, ಅವರಿಗೇ ಮೋಕ್ಷ ಬರುತ್ತದೆ.

ಎಷ್ಟು ಅರ್ಥವಿದೆಯೋ ಯಮಧರ್ಮರಾಜನು ಹೇಳಿದ ವಿಷಯ. ಮನೋನಿಗ್ರಹವಿಲ್ಲದ ಮಾನವನು ಪರಿಶುದ್ಧತೆ ಇಲ್ಲದವನಾಗಿ ಅಕ್ಷರ ಸ್ವರೂಪ ಆತ್ಮನನ್ನು ಹೊಂದದೇ ಸಂಸಾರವನ್ನು ಹೊಂದುತ್ತಿದ್ದಾನೆ. ಅಂದರೆ ಒಂದೊಂದು ಬಾರಿ, ಒಂದೊಂದು ಪರಿಸ್ಥಿತಿಯಲ್ಲಿ ಜೀವಿಸುತ್ತಾನೆ. ಸ್ತ್ರೀಯಾಗಿ, ಒಂದೊಂದು ಬಾರಿ ಪುರುಷನಾಗಿ, ಒಂದು ಬಾರಿ ಬಡವನಾಗಿ, ಒಂದು ಬಾರಿ ಧನಿಕನಾಗಿ, ಒಂದು ಬಾರಿ ರಾಜನಂತೆ, ಒಂದು ಬಾರಿ ಸೇವಕನಂತೆ, ಒಂದೊಂದು ಬಾರಿ ಕೆಲಸದವನಾಗಿ, ಒಂದು ಬಾರಿ ಯಜಮಾನನಾಗಿ, ಒಂದು ಬಾರಿ ಕುಷ್ಠರೋಗಿಯಾಗಿ ಒಂದೊಂದು ಬಾರಿ ಭೋಗಲಾಲಸೆಯುಳ್ಳವನಾಗಿ ಹೀಗೆ ಅನೇಕ ರೀತಿಯ ಜೀವನಗಳು ಇರುತ್ತವೆ.

ಆದರೆ ಯಾವುದೂ ತೃಪ್ತಿ ಕೊಡದು. ಎಷ್ಟು ಭೋಗಗಳಿದ್ದರೂ ಕೂಡಾ ತೃಪ್ತಿ ಕೊಡುವುದಿಲ್ಲ. ಇನ್ನು ಏನೋ ಎಂದು ಹೇಳುತ್ತಿರುತ್ತಾನೆ. ನೀವು ನೋಡಿ ಹೆಂಡತಿಯೊಂದಿಗೆ ತೃಪ್ತಿ ಇಲ್ಲದವನು ಇನ್ನೊಬ್ಬ ಸ್ತ್ರೀಗೆ ಅಭ್ಯಾಸವಾಗುತ್ತಾನೆ. ಕೆಲವು ದಿನ ಆ ಸ್ತ್ರೀ ಬಳಿಗೆ ಹೋಗುತ್ತಾನೆ, ಆಕೆಯು ಇಷ್ಟವಾಗಳು. ಮತ್ತೇ ಮತ್ತೊಬ್ಬಳನ್ನು ನೋಡಿಕೊಳ್ಳುತ್ತಾನೆ. ಜೀವನದಲ್ಲಿ ಸೈಕಲ್ ಇಲ್ಲದಿದ್ದರೆ ಸೈಕಲ್ ಇದ್ದರೆ ಸಾಕು ಎನ್ನುತ್ತಾನೆ. ಸೈಕಲ್ ಬಂದಿತು, ಅಯ್ಯೋ! ಬೈಕ್ ಇದ್ದರೆ ಎಷ್ಟು ಚೆನ್ನಾಗಿರುತ್ತದೆಂದು ಕೊಂಡನು. ಹೋಗಲಿ ಬೈಕನ್ನು ಕೊಂಡನು, ಅಂದು ಕೊಳ್ಳೋಣ, ಅದೂ ತೃಪ್ತಿಯನ್ನು ಕೊಡದು, ಕಾರನ್ನು ಕೊಳ್ಳುತ್ತಾನೆ, ಯಾವುದೋ ಕಾರನ್ನು ಕೊಂಡರೆ ಅದೂ ತೃಪ್ತಿಯನ್ನು ಕೊಡದು. ಮನಸ್ಸನ್ನು ತೃಪ್ತಿಪಡಿಸಲು ಯಾರಿಂದ ಸಾಧ್ಯ ಹೇಳಿ?

ಎಷ್ಟು ರೀತಿಗಳಲ್ಲಿ ಮನಸ್ಸನ್ನು ತೃಪ್ತಿಪಡಿಸಬೇಕೆಂದು ನೋಡಿದರೂ ಅದು ಇನ್ನು ಅನ್ನುತ್ತಲೇ ಇರುತ್ತದೆ. ಮನಸ್ಸಿನ ನೈಜವಾದ ಗುಣವದು. ಮನಸ್ಸನ್ನು ನಿಯಂತ್ರಿಸಿದರೇನೇ ಆ ಇರುವುದರಲ್ಲಿಯೇ ತೃಪ್ತಿ ಪಡುತ್ತಾನೆ. ರಮಣ ಮಹರ್ಷಿ ಒಂದು ಗೋಚಿಯಿಂದಲೇ ಜೀವನವನ್ನು ಕಳೆದುಬಿಟ್ಟನು. ಆತನಿಗೆ ಗೊತ್ತು ದೇಹದಿಂದ ಧ್ಯಾನವನ್ನು ಮಾಡಬೇಕು.

ಅದು ಸಾಕು. ಅತ್ಮ ಸಾಕ್ಷಾತ್ಕಾರಕ್ಕೆ ಅದು ಸರಿಹೋಗುತ್ತದೆಂದು. ಆತನು ಸಮಾಧಿ ಸ್ಥಿತಿಗೆ ಸೇರಿಕೊಂಡನು.

ಧ್ಯಾನದಲ್ಲಿ ಎ.ಸಿ. ರೂಮ್‌ನಲ್ಲಿ, ಅರಮನೆಯಲ್ಲಿಯೇ ಕುಳಿತರೆ ಸಾಕ್ಷಾತ್ಕಾರವಾಗುತ್ತದೆಯೇ? ಅದಕ್ಕೆ ಜೀಸಸ್ ಅಂದಿದ್ದಾನೆ "ಸೂಜಿಯ ರಂಧ್ರದಲ್ಲಿ ಒಂಟೆಯನ್ನು ತೂರಿಸಬಹುದಾಗಲಿ, ಧನಿಕನಿಗೆ ಮೋಕ್ಷವು ಅಸಾಧ್ಯ" ಎಂದು ಹೇಳಿದ್ದಾನೆ.

ಹಣವು ಎಲ್ಲಿವರೆಗೆ ಅಂದರೆ ಭುಕ್ತಿಗೆ ಕೊರತೆ ಇಲ್ಲದಂತೆ, ಅಗತ್ಯಗಳಿಗೆ ತೊಂದರೆ ಇಲ್ಲದಂತೆ ಇರುವುದಕ್ಕೆ. ಅದು ಸಾಕು ನಂತರ ನೀನು ಆ ಶರೀರದಿಂದ ಎಷ್ಟು ಸಾಧನೆ ಮಾಡುತ್ತಿರುವೆ? ಎಂಬುದೇ ಮುಖ್ಯ.

ಈ ಶರೀರವನ್ನು ಸುಖಪಡಿಸುವುದಲ್ಲ, ಶರೀರವನ್ನು ಬಳಸಿಕೊಳ್ಳಬೇಕು. ಜ್ಞಾನವನ್ನು ಹೊಂದಬೇಕು, ಜ್ಞಾನವನ್ನು ಹೊಂದಿದರೇನೆ ಮನೋನಿಗ್ರಹವಿರುತ್ತದೆ, ಮನಸ್ಸು ಪರಿಶುದ್ಧವಾಗಿರುತ್ತದೆ, ನೀವು ಹುಟ್ಟುಸಾವುಗಳಿಲ್ಲದ ಪರಮ ಪದವನ್ನು ಹೊಂದುತ್ತೀರಿ.

*** ***

"ನಾನು ಮಾಡುತ್ತಿದ್ದೇನೆ ಎಂದು ದೇಹಕ್ಕೆ ಬೆಲೆ ಕೊಟ್ಟಾಗಲೇ
ಅಹಂಕಾರವು ಬೆಳೆಯುತ್ತದೆ."

**–ಬ್ರಹ್ಮವಿದ್ವರಿಷ್ಟ ತಟವರ್ತಿ ರಾಜ್ಯಲಕ್ಷ್ಮಿ**

"ಮಾಂಸಪಿಂಡವನ್ನು ಮಂತ್ರ ಪಿಂಡವಾಗಿ ಮಾಡಬಲ್ಲವರಿಗೆ
ವಾಕ್ಕು ತಥಾಸ್ತು" ಎನ್ನುತ್ತಾರೆ ದೇವತೆಗಳು.

**–ಬ್ರಹ್ಮವಿದ್ವರಿಷ್ಟ ತಟವರ್ತಿ ರಾಜ್ಯಲಕ್ಷ್ಮಿ**

"ಆತ್ಮಜ್ಞಾನಿಯು ಶರೀರ ಅನಿತ್ಯ, ಆತ್ಮ ನಿತ್ಯ"
ಎಂಬ ಸತ್ಯವನ್ನು ತಿಳಿದುಕೊಳ್ಳುತ್ತಾನೆ.

**–ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್**

# 15. ಯಾವುದು ಶ್ರೇಷ್ಠವಾದದ್ದು?

**ಯಮಧರ್ಮರಾಜನು ಇನ್ನು ಏನು ಹೇಳಿದನೆಂದರೆ "ನಚಿಕೇತ! ಕರ್ಮೇಂದ್ರಿಯಗಳಿಗಿಂತ ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿ ವಿಷಯಗಳು, ಜ್ಞಾನೇಂದ್ರಿಯಗಳು ಶ್ರೇಷ್ಠವಾದವು. ಅವುಗಳಿಗಿಂತ ಮನಸ್ಸು ಶ್ರೇಷ್ಠ. ಮನಸ್ಸಿಗಿಂತ ಬುದ್ಧಿ ಶ್ರೇಷ್ಠ. ಆ ಬುದ್ಧಿಗಿಂತ ಆತ್ಮ ಇನ್ನೂ ಪರಮ ಶ್ರೇಷ್ಠ" ಎಂದನು.**

**ಆತನು ಏನು ಹೇಳಿದ್ದಾನೆಂದರೆ "ಮಹತ್ತಿಗಿಂತಲೂ ಅವ್ಯಕ್ತವು ಮೀರಿದ್ದು." ಈ ಅವ್ಯಕ್ತಕ್ಕಿಂತ ಪುರುಷನು ಪರಮ ಶ್ರೇಷ್ಠನು ಎಂದು ಹೇಳಿದ್ದಾನೆ. ಇವುಗಳ ಕುರಿತು ಸ್ವಲ್ಪ ವಿವರಿಸಿಕೊಳ್ಳೋಣ.**

ಮಾನವನು ಎಂದರೆ ದೇಹ, ಮನಸ್ಸು, ಆತ್ಮ ಈ ಮೂರರ ಸೇರಿರುವಿಕೆ. ದೇಹದಲ್ಲಿ ಎರಡು ರೀತಿಯ ಇಂದ್ರಿಯಗಳು ನಮಗೆ ಕಾಣಿಸುತ್ತವೆ. 1. ಕರ್ಮೇಂದ್ರಿಯಗಳು 2. ಜ್ಞಾನೇಂದ್ರಿಯಗಳು.

ಕೆಲಸ ಮಾಡುವಂತವುಗಳನ್ನು ಕರ್ಮೇಂದ್ರಿಯಗಳು ಎನ್ನುತ್ತಾರೆ. ಗ್ರಹಿಸುವವುಗಳನ್ನು ಜ್ಞಾನೇಂದ್ರಿಯಗಳು ಎನ್ನುತ್ತೇವೆ. ಯಮಧರ್ಮರಾಜನು ಏನು ಹೇಳಿದನೆಂದರೆ, ಈ ಕರ್ಮೇಂದ್ರಿಯಗಳಿಗಿಂತ ಜ್ಞಾನೇಂದ್ರಿಯಗಳು ಶ್ರೇಷ್ಠ ಎಂದನು. ಜ್ಞಾನೇಂದ್ರಿಯಗಳು ಶಬ್ದವನ್ನು ಗ್ರಹಿಸುತ್ತವೆ, ಸ್ಪರ್ಶವನ್ನು ಹೊಂದಿರುತ್ತವೆ, ರೂಪವನ್ನು ನೋಡಬಲ್ಲದು, ರಸವನ್ನು ಆಸ್ವಾದಿಸುತ್ತದೆ, ಗಂಧವನ್ನು ವಾಸನೆ ನೋಡಬಲ್ಲದು. ಇಂತಹ ಕೆಲಸಗಳನ್ನು ಮಾಡಬಲ್ಲಂತವುಗಳನ್ನು ಜ್ಞಾನೇಂದ್ರಿಯಗಳು ಎನ್ನುವರು.

ಜ್ಞಾನೇಂದ್ರಿಯಗಳಿಗಿಂತ ಮನಸ್ಸು ಶ್ರೇಷ್ಠ, ಅಂದರೆ ಒಂದು ರೀತಿಯಲ್ಲಿ ಹೇಳಬೇಕೆಂದರೆ, ದೇಹಕ್ಕಿಂತ ಮನಸ್ಸು ಶ್ರೇಷ್ಠ ಎನ್ನುವುದು ಇಲ್ಲಿ ಅರ್ಥವಾಗುತ್ತದೆ.

ಯಮಧರ್ಮರಾಜನು ಹೇಳಿದ ಈ ವಿಷಯವು ಉಪನಿಷತ್ತಿನಲ್ಲಿದೆ. ಮನಸ್ಸಿಗಿಂತ ಬುದ್ಧಿ ಶ್ರೇಷ್ಠ, ಅಂದರೆ ಇನ್ನೂ ಉತ್ತಮವಾದದ್ದು, ಹಾಗೇ ಒಂದಕ್ಕಿಂತ ಒಂದು ಶ್ರೇಷ್ಠವಾದವು. ಯಾವುದು ಶ್ರೇಷ್ಠವೆಂದು ತಿಳಿದಾಗ ಅದಕ್ಕೆ ಹೆಚ್ಚು ಬೆಲೆಯನ್ನು ಕೊಡುತ್ತೇವೆ. ಹಾಗೆಯೇ ಮನಸ್ಸಿನಲ್ಲಿ ಕೂಡಾ ನಾಲ್ಕು ಭಾಗಗಳು ಅಂದರೆ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳಿವೆ. ಅವುಗಳಲ್ಲಿ ಮುಖ್ಯವಾದ ಪಾತ್ರ ಮನಸ್ಸಿನದು, ಬುದ್ಧಿಯದು.

ಇಂದ್ರಿಯಗಳೆಲ್ಲವೂ ಮನಸ್ಸಿನ ಅಧೀನದಲ್ಲಿರುತ್ತವೆ. ಮನಸ್ಸು ಹೇಳಿದಂತೆ ಕೆಲಸ ಮಾಡುತ್ತಾ ಇರುತ್ತವೆ. ಇಲ್ಲಿ ಮಾಡಿಸುವವನನ್ನು ಯಜಮಾನಿ ಎನ್ನುತ್ತಾರೆ.

ಮಾಡುವವನನ್ನು ಕೆಲಸದವನು ಎನ್ನುತ್ತಾರೆ. ಕೆಲಸದವನಿಗಿಂತ ಯಜಮಾನಿ ಶ್ರೇಷ್ಠವಾದವನಾದ್ದರಿಂದ, ಇಂದ್ರಿಯಗಳು, ಶರೀರಕ್ಕಿಂತ ಮನಸ್ಸು ಶ್ರೇಷ್ಠವೆಂದು ತಿಳಿದುಕೊಳ್ಳಬಹುದು.

ಈ ಮನಸ್ಸಿನಲ್ಲಿ 4 ಭಾಗಗಳಿವೆ. ಅವುಗಳಲ್ಲಿ ಮನಸ್ಸಿದೆ, ಸಂಕಲ್ಪ ವಿಕಲ್ಪಗಳನ್ನು ಮಾಡುತ್ತದೆ, ಅಂದರೆ ಮಾಡಬೇಕಾ? ಬೇಡವೇ? ಎಂದು ಉಯ್ಯಾಲೆಯಾಡುತ್ತಾ ಇರುತ್ತದೆ. ಆಗ ಬುದ್ಧಿ ನಿರ್ಣಯಿಸಿದ್ದನ್ನು ಆಧರಿಸಿ ಏನಾದರೂ ನಡೆಯುತ್ತಿರುತ್ತವೆ. ಆದ್ದರಿಂದ ಮಾಡಬೇಕಾ? ಬೇಡಾ? ಎಂದು ಆಲೋಚಿಸುವ ಮನಸ್ಸಿಗಿಂತ ನಿರ್ಣಯವನ್ನು ತೆಗೆದುಕೊಳ್ಳುವ ಬುದ್ಧಿ ಬಹಳ ಶ್ರೇಷ್ಠವೆನ್ನುತ್ತಾರೆ.

ಯಮಧರ್ಮರಾಜನು ಈ ಬುದ್ಧಿಗಿಂತ ಆತ್ಮ ಪರಮಶ್ರೇಷ್ಠ ಎನ್ನುತ್ತಾನೆ, ಅಂದರೆ ಆತ್ಮ ಇನ್ನೂ ಶ್ರೇಷ್ಠವಾದದ್ದು. ಇದನ್ನು ತಿಳಿದುಕೊಂಡರೆ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕೋ ಅರ್ಥವಾಗುತ್ತದೆ. ಆದ್ದರಿಂದ ಮಾನವನು ಆತ್ಮಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಎಂದು ತಿಳಿಯುತ್ತದೆ. ವಿಚಿತ್ರವೇನೆಂದರೆ ಮಾನವರು ಆತ್ಮನನ್ನು ನಿಜವಾಗಿಯೂ ಹಿಡಿಸಿಕೊಳ್ಳರು. ಎಲ್ಲವುದಕ್ಕೋ ಪ್ರಾಮುಖ್ಯತೆ ಕೊಡುತ್ತಾರಾಗಲಿ ಆತ್ಮಕ್ಕೆ ಪ್ರಾಮುಖ್ಯತೆ ಕೊಡರು.

ಇಲ್ಲಿ ಯಮಧರ್ಮರಾಜನು ಹೇಳಿದ್ದನ್ನಾಧರಿಸಿ, ಎಲ್ಲವುದಕ್ಕಿಂತಲೂ ಕಡಿಮೆ ದೇಹ, ಆದರೆ ಮಾನವರು ಅದಕ್ಕೇ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಾರೆ, ಅದೇ ವಿಚಿತ್ರ. ಆದ್ದರಿಂದ **"ದೇಹವನ್ನು ಉಪಯೋಗಿಸಿಕೊಳ್ಳಬೇಕಾಗಲಿ, ದೇಹಕ್ಕೆ ಉಪಯೋಗವಾಗುವುದಿಲ್ಲ."**

ಅದಕ್ಕೆ ಮಾನವನು ಕಷ್ಟಗಳ ಪಾಲಾಗುತ್ತಿದ್ದಾನೆ. ದುಃಖದಿಂದ ಹೊರಬರಲಾರದೇ ಹೋಗುತ್ತಿದ್ದಾನೆ. ಆದ್ದರಿಂದ ಯಾವುದು ಶ್ರೇಷ್ಠವಾದದ್ದು? ಯಾವುದು ಉತ್ತಮವಾದದ್ದು? ಎಂದು ತಿಳಿದುಕೊಂಡು ಅದಕ್ಕೆ ಪ್ರಾಮುಖ್ಯತೆ ಕೊಟ್ಟಾಗ ಮಾನವನ ಜೀವನವು ಸುಗಮವಾಗಿ, ಸುಖಕರವಾಗಿರುತ್ತದೆ.

ಮಾನವನು ದೇಹದ ನಂತರ ಮನಸ್ಸಿಗೆ ಅಂದರೆ ಮನಸ್ಸೊಂದರ ಕೋರಿಕೆಗಳಿಗೆ ಪ್ರಾಮುಖ್ಯತೆ ಕೊಡುತ್ತಾನೆ. ಅಂದರೆ ಮಾನವನಿಗೆ ಬುದ್ಧಿಯ ಕುರಿತು ತಿಳಿಯದು, ಆದ ಕಾರಣ ಬುದ್ಧಿಯ ಕುರಿತು ಆಲೋಚಿಸನು, ಬುದ್ಧಿಯ ವಿಕಸನ ಮಾಡಿಕೊಳ್ಳಬೇಕೆಂದು ಪ್ರಯತ್ನ ಮಾಡುವುದು. ಅದಕ್ಕಾಗಿ ನಾನು ಪದೇ ಪದೇ ಹೇಳುತ್ತಾ ಇರುತ್ತೇನೆ, ಕರ್ಮೇಂದ್ರಿಯಗಳಿಂದ ಜ್ಞಾನೇಂದ್ರಿಯಗಳು ಶ್ರೇಷ್ಠವು, ಜ್ಞಾನೇಂದ್ರಿಯಗಳಿಗಿಂತ ಮನಸ್ಸು ಶ್ರೇಷ್ಠವಾದದ್ದು, ಮನಸ್ಸಿಗಿಂತ ಬುದ್ಧಿ ಶ್ರೇಷ್ಠವಾದದ್ದೆಂದು. ಕಾರಣ ನಿರ್ಣಯಿಸುವುದು

ಬುದ್ಧಿ, ನಡೆಸುವುದು ಬುದ್ಧಿ, ಕೆಲಸಗಳನ್ನು ಮಾಡಿಸುವುದೂ ಬುದ್ಧಿಯೇ. ಆದ್ದರಿಂದ ಬುದ್ಧಿಯನ್ನು ವಿಕಸನಪಡಿಸಿಕೊಳ್ಳಬೇಕು. ಸುಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕು. ಬುದ್ಧಿಯನ್ನು ಸುಸ್ಥಿತಿಯಲ್ಲಿಡದಿದ್ದರೆ, ಅಂದರೆ ಶುದ್ಧಿ ಮಾಡಿಕೊಳ್ಳದಿದ್ದರೆ ಅಶುದ್ಧ ಬುದ್ಧಿ ಎನ್ನುತ್ತಾರೆ. ಶುದ್ಧ ಬುದ್ಧಿ ಅಂದರೆ ಒಳ್ಳೆಯ ಬುದ್ಧಿ, ಅಶುದ್ಧ ಅಂದರೆ ಕೆಟ್ಟ ಬುದ್ಧಿ. ಕೆಟ್ಟ ಬುದ್ಧಿಯು ನಷ್ಟವನ್ನುಂಟು ಮಾಡುವ ನಿರ್ಣಯಗಳನ್ನು ಮಾಡುತ್ತದೆ, ಒಳ್ಳೆಯ ಬುದ್ಧಿ ಲಾಭವನ್ನುಂಟು ಮಾಡುವ ನಿರ್ಣಯಗಳನ್ನು ಕೈಗೊಳ್ಳುತ್ತದೆ.

ಅದಕ್ಕೆ ಪ್ರತಿದಿನ ನಾವು ಆ ಪ್ರಯತ್ನವನ್ನೇ ಮಾಡುತ್ತಿದ್ದೇವೆ, ಎಷ್ಟೋ ತೀವ್ರವಾದ ಧ್ಯಾನಸಾಧನೆಯುನ್ನು ಮಾಡುತ್ತಿದ್ದೇವೆ, ಸಾತ್ವಿಕವಾದ ಶಾಖಾಹಾರವನ್ನು ತೆಗೆದುಕೊಳ್ಳುತ್ತಿದ್ದೇವೆ, ಆಹಾರ ನಿಯಮಗಳನ್ನು ಕಠಿಣವಾಗಿ ಪಾಲಿಸುತ್ತಿದ್ದೇವೆ, ಕ್ರಮ ತಪ್ಪದೆ ಧ್ಯಾನವನ್ನು ಮಾಡುತ್ತಿದ್ದೇವೆ.

ಆದ್ದರಿಂದ ಯಾರು ಶ್ರೇಷ್ಠರು ಅಂದರೆ? ಧನವಿರುವವನು ಶ್ರೇಷ್ಠನು ಅಲ್ಲ, ಅಂದವಿರುವವನು ಶ್ರೇಷ್ಠನಲ್ಲ, ಬುದ್ಧಿಯನ್ನು ವಿಕಸನಪಡಿಸಿಕೊಂಡವನೇ ಶ್ರೇಷ್ಠನು. ನೆನಪಿಟ್ಟುಕೊಳ್ಳಿ ಬುದ್ಧನನ್ನು ಮೀರಿದವರು ಯಾರೂ ಇಲ್ಲ. ಅದಕ್ಕೆ ಆತನನ್ನು ಬುದ್ಧನು ಎಂದಿದ್ದಾರೆ.

ಆ ಬುದ್ಧಿಗಿಂತ ಆತ್ಮ ಇನ್ನೂ ಶ್ರೇಷ್ಠ, ಅದನ್ನು ಹಿಡಿದುಕೊಂಡವನಿಗೆ ತಿರುಗೇ ಇಲ್ಲ. ಮುನ್ನಡೆಯೇ ಎಲ್ಲಾ. ಆತ್ಮನನ್ನು ಆಶ್ರಯಿಸಬೇಕೆಂದರೆ ಒಂದೇ ಮಾರ್ಗ ಅದೇ "ಶ್ವಾಸದ ಮೇಲೆ ಗಮನ" "ಧ್ಯಾನ"ವೆಂದು ಪತ್ರೀಜಿಯವರು ಹೇಳಿದ್ದಾರೆ. "ಈ "ಶ್ವಾಸದ ಮೇಲೆ ಗಮನ"ದಿಂದ ಶರೀರವು ಶರೀರದ ಸ್ಥಿತಿಯನ್ನು ದಾಟಿ, ಮೆಲ್ಲ ಮೆಲ್ಲಗೆ ಆಲೋಚನಾರಹಿತ ಸ್ಥಿತಿಯನ್ನು ಹೊಂದಿ, ಮನೋಸ್ಥಿತಿಯನ್ನು ಕೂಡಾ ದಾಟುತ್ತೀರಿ, ಕೊನೆಗೆ ಆತ್ಮಸ್ಥಿತಿಯಲ್ಲಿ ಇರುತ್ತೀರಿ. ಅಂತಹವನು ಶ್ರೇಷ್ಠನು.

ಈ ಸ್ಥಿತಿಯು ಗೈಡಿಂಗ್ ಮೆಡಿಟೇಷನ್‌ನಲ್ಲಿ ಸಾಧ್ಯವಾಗದು. ಕಾರಣ ಗೈಡಿಂಗ್ ಧ್ಯಾನದಲ್ಲಿ ಮನಸ್ಸಿನ ಬಳಿಯೇ ನಿಂತುಬಿಡುತ್ತೀರಿ, ಅವರಿಗೆ ಬುದ್ಧಿಯು ಕೂಡಾ ವಿಕಸಿಸದು, ಪ್ರಾರಂಭದ ಸ್ಥಿತಿಯಲ್ಲಿಯೇ ಇದ್ದುಬಿಡುತ್ತೀರಿ. ಅದಕ್ಕೆ ಪತ್ರೀಜಿಯವರು ಏನು ಹೇಳಿದ್ದಾರೆಂದರೆ ಮನಸ್ಸಿನಿಂದ ಮಾಡುವ ಸಾಧನೆಗಳಿಗಿಂತ ಕೂಡಾ ಮನಸ್ಸಿಲ್ಲದೆ ಮಾಡುವ "ಶ್ವಾಸದ ಮೇಲೆ ಗಮನ" ಸಾಧನೆ ಶ್ರೇಷ್ಠವೆಂದು ಹೇಳುತ್ತಾರೆ.

ಆದ್ದರಿಂದ ಆತ್ಮನನ್ನು ಹಿಡಿದುಕೊಂಡವರೆಲ್ಲಾ ಮಹನೀಯರಾದರು. ಯೋಗಿಗಳು, ಮಹರ್ಷಿಗಳು, ಬ್ರಹ್ಮರ್ಷಿಗಳು ಆಗಿದ್ದಾರೆ. ಆದರೆ ದೇಹವನ್ನು ಹಿಡಿದುಕೊಂಡವರು ಆ ದೇಹ ಸ್ಥಿತಿಯಲ್ಲಿ ಇದ್ದುಬಿಟ್ಟಿದ್ದಾರೆ. ಆತ್ಮನನ್ನು ಹಿಡಿದುಕೊಂಡವರು ಆತ್ಮ ಜ್ಞಾನವನ್ನು ಹೊಂದಿದರು, ಆ ಜ್ಞಾನವು ಎಷ್ಟು ಬೆಳೆದರೆ

ಅವರು ಜನ್ಮ ಜನ್ಮಗಳಲ್ಲಿ ಬೆಳೆಸಿಕೊಂಡಿರುವಂತ ಕರ್ಮಗಳನ್ನೆಲ್ಲಾ ತೊಲಗಿಸಿಕೊಳ್ಳಬಲ್ಲವರಾಗುತ್ತಾರೆ.

ಕೊನೆಗೆ ಅದು ಮೋಕ್ಷಕ್ಕೆ ದಾರಿ ಮಾಡಿಕೊಡುತ್ತದೆ. ಅಷ್ಟೇ ಅಲ್ಲ, ದುಃಖದಿಂದ ಹೊರಬೀಳುತ್ತಾರೆ, ಶಾಶ್ವತವಾದ ಆನಂದ ಸ್ಥಿತಿಯಲ್ಲಿ ಇರಬಲ್ಲರು, ಇದು ಮತ್ಯಾರಿಗೂ ಸಾಧ್ಯವಾಗದು.

ರಮಣ ಮಹರ್ಷಿ ದೇಹಕ್ಕೆ ಕಡಿಮೆ ಆದ್ಯತೆ ಕೊಟ್ಟನು, ಆತ್ಮಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟನು. ಅದಕ್ಕೆ ಆತನು ಅಷ್ಟು ಶ್ರೇಷ್ಠವಾದನು. ಹಾಗೆಯೇ ಯೋಗಿಗಳು, ಋಷಿಗಳು ಆತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟರು, ದೇಹಕ್ಕೆ ಬಹಳ ಕಡಿಮೆ ಆದ್ಯತೆ ಕೊಟ್ಟರು. ದೇಹಕ್ಕೇನಿದೆ ಏನಿದೆ? ಈ ಹೊತ್ತಿಗೆ ಒಂದಷ್ಟು ಹೊಟ್ಟೆಗೆ ಏನಾದರೂ ಹಾಕಿದರೆ ಅಲ್ಲಿಗೇ ಅದು ಸರಿಮಾಡಿಕೊಳ್ಳುತ್ತದೆ.

ಇನ್ನು ಆ ದೇಹವು ನೀನು ಹೇಳಿದ ಕೆಲಸಗಳನ್ನೆಲ್ಲಾ ಮಾಡುತ್ತದೆ. ಓದು ಎಂದರೆ ಓದುತ್ತದೆ, ಏನಾದರೂ ಕೆಲಸ ಮಾಡು ಅಂದರೆ ಮಾಡುತ್ತದೆ, ಕೇಳು ಅಂದರೆ ಕೇಳುತ್ತದೆ, "ಶ್ವಾಸದ ಮೇಲೆ ಗಮನ"ವಿಟ್ಟರೆ ಆ ಕೆಲಸವನ್ನು ಮಾಡುತ್ತದೆ. ಹಾಗೆ ನಿನಗೆ ಲಭಿಸುವ ಕೆಲಸಗಳನ್ನೆಲ್ಲಾ ಮಾಡುತ್ತದೆ. ಆದ್ದರಿಂದ ಇರುವುದರಲ್ಲಿಯೇ ತೃಪ್ತಿಪಟ್ಟು ಆ ಅಗತ್ಯವು ತೀರುತ್ತದೆಯೇ? ಇಲ್ಲವೇ? ಎಂದು ತಿಳಿದುಕೊಳ್ಳಿ. ನಂತರ ನೀನು ಯಾವುದನ್ನು ಹಿಡಿದುಕೊಂಡರೆ ಶ್ರೇಷ್ಠನಾಗುವೆಯೋ, ಅದನ್ನೇ ಹಿಡಿದುಕೊ, ಶ್ರೇಷ್ಠವಾದವರನ್ನು ಹಿಡಿದುಕೊಂಡರೆ ಶ್ರೇಷ್ಠ ಕಾರ್ಯಗಳನ್ನೆ ಮಾಡುವೆ,

ಯಮಧರ್ಮರಾಜನು ಇನ್ನು ಏನು ಹೇಳಿದನೆಂದರೆ ಮಹತ್ತಿಗಿಂತಲೂ ಅವ್ಯಕ್ತವು ಮೀರಿದ್ದು, ಅವ್ಯಕ್ತಕ್ಕಿಂತ ಪುರುಷನು ಪರಮ ಶ್ರೇಷ್ಠನು ಎಂದು ಹೇಳಿದನು. ಇದರ ಕುರಿತು ತಿಳಿದುಕೊಳ್ಳೋಣ.

ಪೃಥ್ವಿಯಲ್ಲಿ ಎರಡೇ ಕಾಣಿಸುತ್ತವೆ. ಯಾವುವೆಂದರೆ ಪ್ರಕೃತಿ, ಪುರುಷನು. ಈ ಪ್ರಕೃತಿ ಪುರುಷರ ಸೇರುವಿಕೆಯೇ ಸಮಸ್ತವು.

ಪುರುಷನು ಶಾಶ್ವತ, ಪ್ರಕೃತಿ ಅಶಾಶ್ವತವು. ಪ್ರಕೃತಿ ಅಂದರೆ ಈಗ ಇರುವಂತೆ ಕಾಣಿಸುತ್ತದೆ, ನಂತರ ಮಾಯವಾಗಿ ಹೋಗುತ್ತದೆ. ಮಾಯವಾಗುವುದೇ 'ಮಹತ್ತು'. ಅಂತಹ 'ಮಹತ್ತಿ'ಗಿಂತ ಅವ್ಯಕ್ತವು ಶ್ರೇಷ್ಠ ಎಂದನು. ಅವ್ಯಕ್ತವು ಅಂದರೆ, ಕಾಣಿಸಿದ ಆಕಾಶ. ಅದಕ್ಕಿಂತ ಪುರುಷನು ಅಂದರೆ ಆತ್ಮನು ಇನ್ನೂ ಶ್ರೇಷ್ಠ.

ಗಮನಿಸುವುದಾದರೆ ಶರೀರ ಸ್ಥೂಲವು, ಮನಸ್ಸು ಸೂಕ್ಷ್ಮವು. ಆತ್ಮವು ಸೂಕ್ಷ್ಮಾತಿ ಸೂಕ್ಷ್ಮವು. ಅಂದರೆ ಇದನ್ನಾಧರಿಸಿ ಎಷ್ಟು ಸೂಕ್ಷ್ಮವಾದರೆ ಅವು ಅಷ್ಟು ಶ್ರೇಷ್ಠ, ಅಷ್ಟು

ಶಕ್ತಿವಂತವಾದವು ಎಂದು ಅರ್ಥವಾಗುತ್ತದೆ. ಅಂದರೆ ಸ್ಥೂಲವಾದದಂತೆಲ್ಲಾ ಸ್ವಲ್ಪಶಕ್ತಿ ಕಡಿಮೆಯಾಗುತ್ತಾ ಇರುತ್ತದೆ. ಸೂಕ್ಷ್ಮವಾದಷ್ಟೂ ಶಕ್ತಿಯು ಬೆಳೆಯುತ್ತಿರುತ್ತದೆ.

ಮಾನವನಿಗೆ ಏಳು ಶರೀರಗಳಿವೆ ಎಂದು ಹೇಳಿಕೊಂಡಿದ್ದೇವೆ ಈ ಏಳು ಶರೀರಗಳನ್ನು ನೋಡಿದರೆ ಸ್ಥೂಲದಿಂದ ಸೂಕ್ಷ್ಮಾತಿ ಸೂಕ್ಷ್ಮಕ್ಕೆ ಬದಲಾಗುತ್ತಾ ಇರುತ್ತವೆ. ಅವುಗಳನ್ನೇ ಶಂಕರಾಚಾರ್ಯರು ಕೋಶಗಳು ಎಂದಿದ್ದಾರೆ. ನಾವು ಶರೀರಗಳು ಎಂದು ಹೇಳಿಕೊಳ್ಳುತ್ತೇವೆ.

ಅವುಗಳಲ್ಲಿ ಮೊದಲನೆಯದೇ ಅನ್ನಮಯ ಕೋಶ, ಅದನ್ನೇ ಸ್ಥೂಲ ಶರೀರವೆನ್ನುತ್ತಾರೆ. ಎರಡನೆಯದು ಪ್ರಾಣಮಯ ಕೋಶ ಅಂದರೆ ಪ್ರಾಣಮಯ ಶರೀರ, ಮೂರನೆಯದು ಮನೋಮಯ ಕೋಶ, ಅದನ್ನೇ ಸೂಕ್ಷ್ಮ ಶರೀರವೆನ್ನುತ್ತಾರೆ. ಮನೋಮಯ ಶರೀರವನ್ನು ಕೂಡಾ ಎನ್ನುತ್ತಾರೆ. ನಾಲ್ಕನೆಯದು ವಿಜ್ಞಾನಮಯ ಕೋಶ, ಅದನ್ನೇ ಕಾರಣ ಶರೀರವೆನ್ನುತ್ತಾರೆ. ಐದನೆಯದು ಆನಂದಮಯ ಕೋಶವು ಅದನ್ನೇ ಮಹಾಕಾರಣ ಶರೀರವೆನ್ನುತ್ತಾರೆ. ಆರನೆಯದು ವಿಶ್ವಮಯ ಕೋಶವು, ಅದನ್ನೇ ವಿಶ್ವಮಯ ಶರೀರವೆನ್ನುತ್ತಾರೆ. ಏಳನೆಯದು ನಿರ್ವಾಣಮಯ ಕೋಶ, ಅದನ್ನೇ ನಿರ್ವಾಣಮಯ ಶರೀರವೆನ್ನುತ್ತಾರೆ.

ಇಲ್ಲಿ ನೀವು ಗಮನಿಸಿದರೆ ಮೊದಲನೆಯ ಶರೀರವನ್ನು ಸ್ಥೂಲ ಶರೀರ ಎನ್ನುತ್ತಾರೆ, ಎರಡು–ಮೂರನೇ ಶರೀರಗಳನ್ನು ಸೂಕ್ಷ್ಮ ಶರೀರ ಎನ್ನುತ್ತಾರೆ, ನಾಲ್ಕು–ಐದನೇ ಶರೀರಗಳನ್ನು ಕಾರಣ ಶರೀರ ಎನ್ನುತ್ತಾರೆ. ಅಂದರೆ ಶಂಕರಾಚಾರ್ಯರು ಐದೇ ಹೇಳಿದ್ದಾರೆ, ಪತ್ರೀಜಿಯವರು ಇನ್ನೂ ಎರಡನ್ನು ಹೇಳಿದ್ದಾರೆ. ಆತನು ಈ ಐದು ಶರೀರಗಳಿಗೆ ಗುರುತುಗಳಿರುವುದಿಲ್ಲವಂತೆ, ಅಂದರೆ ಗಮನಿಸಲು, ಗುರುತಿಸಲು ಸಾಧ್ಯವಾಗದು, ಕಾರಣ ಅವು ಸೂಕ್ಷ್ಮಾತಿ ಸೂಕ್ಷ್ಮವಾಗಿರುತ್ತವೆ.

ಇಲ್ಲಿ ಸ್ಥೂಲದೊಳಗಿಂದ ಸೂಕ್ಷ್ಮದೊಳಕ್ಕೆ ಹೋದಂತೆಲ್ಲಾ ಅಪಾರವಾದ ಶಕ್ತಿ ಬೆಳೆಯುತ್ತದೆ. ಆತ್ಮವು ಸೂಕ್ಷ್ಮಾತಿಸೂಕ್ಷ್ಮ, ಆದ್ದರಿಂದ ಅಪಾರವಾದ ಶಕ್ತಿವಂತವಾದದ್ದು. ಈ ಸ್ಥೂಲ ಶರೀರವನ್ನು ನಡೆಸುವುದು ಕೂಡಾ ಈ ಶರೀರದಲ್ಲಿರುವ ಆತ್ಮವೇ, ಆತ್ಮದ ಶಕ್ತಿಯೇ. ಆ ಆತ್ಮ ಶರೀರದಲ್ಲಿರದಿದ್ದರೆ, ಅದು ಯಾವುದಕ್ಕೂ ಕೆಲಸಕ್ಕೆ ಬಾರದು, ಏನೂ ಮಾಡದು.

ಆತ್ಮಶಕ್ತಿಯೇ ಕಣ್ಣುಗಳನ್ನು ನೋಡುವಂತೆ ಮಾಡುತ್ತದೆ, ಕಿವಿಗಳು ಕೇಳುವಂತೆ ಮಾಡುತ್ತದೆ, ಕೈ–ಕಾಲುಗಳು ಕೆಲಸ ಮಾಡುವಂತೆ ಮಾಡುತ್ತದೆ. ಆತ್ಮವು ಪಕ್ಕಕ್ಕೆ ಸರಿದರೆ ಶರೀರವು ಏನೂ ಮಾಡಲಾರದು, ಕಾರಣ ಅದು ಸೂಕ್ಷ್ಮಾತಿಸೂಕ್ಷ್ಮವಾದದ್ದು, ಅಪಾರವಾದ ಶಕ್ತಿಯುಳ್ಳದ್ದು ಆದ್ದರಿಂದ.

ಅದರ ಮೇಲೆ ಸ್ವಲ್ಪ ಸ್ಥೂಲ ಮನಸ್ಸು ಅಂದರೆ ಆಕಾಶ... ಅದಕ್ಕಿಂತ ಕೊಂಚ ಸ್ಥೂಲ ವಾಯುವು, ಅದಕ್ಕಿಂತ ಸ್ಥೂಲ ಅಗ್ನಿ.... ಅದಕ್ಕಿಂತ ಸ್ಥೂಲವು ನೀರು...ಅದರ ನಂತರ ಭೂಮಿ, ಆದ್ದರಿಂದ ಸೂಕ್ಷ್ಮ ಲೋಕಗಳನ್ನು ಸೇರಬೇಕು ಅಂದರೆ ಊರ್ಧ್ವ ಲೋಕಗಳನ್ನು ಸೇರಿಕೊಳ್ಳಬೇಕು.

ಅಂದರೆ ಕೆಳಗೆ ಬಂದಂತೆಲ್ಲಾ ಸ್ಥೂಲ ಲೋಕಗಳು. ಮೇಲೆ ಹೋದಂತೆಲ್ಲಾ ಸೂಕ್ಷ್ಮ ಲೋಕಗಳು. ಅವುಗಳಿಗೆ ಹೋಗಬೇಕೆಂದರೆ ಮಾನವರು ಸೂಕ್ಷ್ಮರೂಪಗಳಾಗಬೇಕು, ಸೂಕ್ಷ್ಮಾತಿ ಸೂಕ್ಷ್ಮವಾದ ರೂಪವನ್ನು ಪಡೆದುಕೊಳ್ಳಬೇಕಾಗುತ್ತದೆ.

ದೇಹ ಸ್ಥಿತಿಯಲ್ಲಿದ್ದರೆ ಸ್ಥೂಲಸ್ಥಿತಿಯಲ್ಲಿದ್ದಂತೆ, ಮನೋ ಸ್ಥಿತಿಯಲ್ಲಿ ಇದ್ದರೆ ಇನ್ನೂ ಸ್ವಲ್ಪ ಉತ್ತಮ, ಬುದ್ಧಿ ಸ್ಥಿತಿಯಲ್ಲಿ ಇದ್ದರೆ ಇನ್ನೂ ಸೂಕ್ಷ್ಮ ಸ್ಥಿತಿಯಲ್ಲಿದ್ದಂತೆ ಅಂದರೆ ನಿನ್ನ ಶಕ್ತಿಗಳು ಹೆಚ್ಚಾಗಿರುತ್ತದೆ. ಹಾಗೆಯೇ ಆತ್ಮ ಸ್ಥಿತಿಯೊಳಗೆ ಹೋದಂತೆಲ್ಲಾ ನಿನ್ನ ಶಕ್ತಿಗಳು ಅಪಾರವಾಗಿ ಬೆಳೆಯುತ್ತವೆ.

ಶರೀರ ಸ್ಥಿತಿಯನ್ನು ದಾಟಿದರೆ ಮನಸ್ಸು ಸೂಕ್ಷ್ಮ, ಆ ಮನಸ್ಸು ಮಲಿನವಾಗಿದ್ದರೆ ಶಕ್ತಿ ಕಡಿಮೆಯಾಗಿರುತ್ತದೆ. ಮನಸ್ಸನ್ನು ಶುದ್ಧಿ ಮಾಡಿದಂತೆಲ್ಲಾ, ಅಂದರೆ ಮನಸ್ಸು ಶುದ್ಧಿ ಆದಂತೆಲ್ಲಾ ಸೂಕ್ಷ್ಮವಾಗಿರುತ್ತದೆ. ಯಾವಾಗಾದರೆ "ಶ್ವಾಸದ ಮೇಲೆ ಗಮನ" ಮೂಲಕ ಮನಸ್ಸನ್ನು ಶೂನ್ಯ ಮಾಡಿದೆಯೊ! ನೀನು ಅಪಾರವಾದ ಶಕ್ತಿವಂತನಾಗುತ್ತೀಯ, ಎಷ್ಟು ಜನರನ್ನಾದರೂ ನೀನು ಆಕರ್ಷಿಸುತ್ತೀಯಾ, ನಿನ್ನ ಕೈಗಳು ಶಕ್ತಿಯುತವಾಗಿರುತ್ತವೆ, ನಿನ್ನ ಆಲೋಚನೆಗಳು ಶಕ್ತಿವಂತವಾಗಿರುತ್ತವೆ.

ಯಮಧರ್ಮರಾಜನು ಒಂದಕ್ಕಿಂತ ಒಂದು ಏಕೆ ಶ್ರೇಷ್ಠವಾದದ್ದು ಎಂದು ಹೇಳಿದ್ದಾನೋ ಅರ್ಥ ಮಾಡಿಕೊಳ್ಳಿ. ಶ್ರೇಷ್ಠವಾದದ್ದನ್ನೇ ಆಶ್ರಯಿಸಿರಿ, ಆ ಸ್ಥಿತಿಗೆ ಸೇರಿಕೊಳ್ಳಿ, ಶ್ರೇಷ್ಠರಾಗಿರಿ, ಉನ್ನತ ಲೋಕಗಳನ್ನು ಸೇರಿಕೊಳ್ಳಿ, ಜೀವನ ಲಕ್ಷ್ಯವನ್ನು ಸಾಧಿಸಿರಿ.

ಕೊನೆಗೆ ಆತ್ಮಸಾಕ್ಷಾತ್ಕಾರವೆಂದರೆ ಆ ಆತ್ಮಾನುಭೂತಿಯನ್ನು ನೀವು ಹೊಂದಬಲ್ಲಿರಿ, ಜೀವನವನ್ನು ಧನ್ಯ ಮಾಡಿಕೊಳ್ಳುತ್ತೀರಿ.

*** ***

ಆಧ್ಯಾತ್ಮಿಕ ವಿದ್ಯೆಗೆ ಸಂಬಂಧಿಸಿದಂತೆ, ಸಾಧಕನು ತಾನು ತಿಳಿದುಕೊಂಡ ಸೂತ್ರಗಳನ್ನು ನಿರಂತರವೂ ಅಭ್ಯಾಸದಲ್ಲಿಡುವುದನ್ನು ಕಲಿತುಕೊಳ್ಳಬೇಕು.

**–ಮೇಡಂ ಬ್ಲಾವಟಸ್ಕಿ**

ಆಧ್ಯಾತ್ಮಿಕ ಅನ್ವೇಷಣೆಗೆ "ನಾನು ಯಾರು" ಎಂಬ ಪರಿಶೋಧ್ಯ ಮಾರ್ಗವನ್ನು ತೋರಿಸಿದ್ದಾರೆ ಭಗವಾನ್ ರಮಣ ಮಹರ್ಷಿ.

**–ಬ್ರಹ್ಮರ್ಷಿ ಪಿತಾಮಹಾ ಪತ್ರೀಜಿ**

# 16.

ಆ ಆತ್ಮವೊಂದರ ಶ್ರೇಷ್ಠತೆ, ಆತನನ್ನು ಹೊಂದಿದರೆ ಬರುವ ಫಲವನ್ನು ಯಮಧರ್ಮರಾಜನು ಹೇಳಿದ್ದಾನೆ.

**"ಮಾನವನು ಬುದ್ಧಿಗೆ ವಿಕ್ಷಣವಾದ ಆತ್ಮನನ್ನು ತಿಳಿದುಕೊಂಡು ಮೃತ್ಯು ಮುಖದಿಂದ ಮುಕ್ತವಾಗುತ್ತಿದ್ದಾನೆ. ಹಾಗೆ ಯಾವ ಮಾನವನಾದರೆ ತಿಳಿದುಕೊಂಡಿರುವನೋ ಅವನಿಗೆ ಮೃತ್ಯುವೇ ಇಲ್ಲ. ಅಂದರೆ ಇನ್ನು ಹುಟ್ಟುವುದಿಲ್ಲ, ಸಾಯುವುದಿಲ್ಲ. ಅದನ್ನೇ ಯಮಧರ್ಮರಾಜನು ಹೇಳಿರುವುದು"** ಈ ವಿಷಯದ ಕುರಿತು ಮತ್ತೊಂದು ಬಾರಿ ವಿವರಿಸಿಕೊಳ್ಳೋಣ.

ಆ ಪುರುಷನಿಗಿಂತ ಅಂದರೆ ಆ ಪರಮಾತ್ಮನಿಗಿಂತ ಬೇರೊಂದಿಲ್ಲ, ಆತನೇ ಸರ್ವಶ್ರೇಷ್ಠ. ಆತನಿಗಿಂತ ಶ್ರೇಷ್ಠವಾದವನು ಇಲ್ಲ. ಆದ್ದರಿಂದ ಆತನನ್ನು ಹೊಂದಿದವನು ಶ್ರೇಷ್ಠನು. ನೀವು ನೋಡಿ, ಪತ್ರೀಜಿಯವರು 18 ಆದರ್ಶ ಸೂತ್ರಗಳಲ್ಲಿ 14ನೇ ಸೂತ್ರ "ವಿಗ್ರಹಾರಾಧನೆ ಬೇಡ, ಸತ್ಯಾರಾಧನೆ ಮಾಡಬೇಕು" ಎಂದಿದ್ದಾರೆ. ಮತ್ತೆ ಈಗ ಯಮಧರ್ಮರಾಜನು ಯಾವುದು ಹೇಳಿದ್ದಾನೋ ಅದನ್ನೇ ಪತ್ರೀಜಿಯವರು ಹೇಳಿದ್ದಾರೆ.

ಮತ್ತೆ ವಿಗ್ರಹ ಏಕೆ ಉತ್ತಮವಾದದ್ದು ಅಲ್ಲವೆಂದರೆ ವಿಗ್ರಹವನ್ನು ಒಬ್ಬ ಮಾನವನು ಸೃಷ್ಟಿಸಿದ್ದಾನೆ. ಒಂದು ಕಲ್ಲನ್ನು ತಂದು ಅದನ್ನು ಅಂದವಾದ ಶಿಲ್ಪವನ್ನಾಗಿ ತಯಾರು ಮಾಡಿದನು. ಅದಕ್ಕೂ ಮೊದಲು ಅದು ಕಲ್ಲು, ಅದನ್ನು ಹಾಗೆ ತಯಾರು ಮಾಡಿದ್ದಾನೆ, ಆ ಶಿಲ್ಪಿಯೇ ಇಲ್ಲದಿದ್ದರೆ ಕಲ್ಲು ವಿಗ್ರಹದಂತೆ ಬದಲಾಗದು.

1982 ರಲ್ಲಿ ನಾನು ವೆಂಕಟೇಶ್ವರ ಸ್ವಾಮಿ ಮಂದಿರವನ್ನು ನಿರ್ಮಿಸಿದೆನು. ಆಗ ನಾನು ವೆಂಕಟೇಶ್ವರ ಸ್ವಾಮಿಯ ಭಕ್ತನು. ತೆನಾಲಿಯಲ್ಲಿ ವಿಗ್ರಹಕ್ಕೆ ಹೇಳಿದೆನು.

ಎಲ್ಲಿಯವರೆಗೆ ಬಂದಿದೆ, ಆಗಿದೆ ಎಂದು ನೋಡುವುದಕ್ಕೆ 15, 20 ದಿನಗಳಿಗೊಮ್ಮೆ ಹೋಗುತ್ತಿದ್ದೆನು. ಪ್ರಾರಂಭದಲ್ಲಿ ಒಂದು ಕಲ್ಲನ್ನು ತಂದು ಆ ಕಲ್ಲಿನಲ್ಲಿ ಬಹಳಷ್ಟು ಚೆಕ್ಕೆಗಳನ್ನು ತೆಗೆದರು. ನಂತರ ಮತ್ತೆ ಹೋಗಿ ನೋಡಿದಾಗ ಆಕಾರವನ್ನು ತಯಾರು ಮಾಡಿದ್ದರು, ಮತ್ತೆ ಮತ್ತೆ ಹೋಗಿ ನೋಡಿದರೆ ಅದನ್ನು ಇನ್ನೂ ನುಣುಪಾಗಿ ಕೆತ್ತಿದ್ದರು, ನಂತರ ನೋಡಿದರೆ ಎಲೆಯ ಹಸಿರು ಕಲ್ಲಿನಿಂದ ನಂತರ ಒರಟಾದ ಮರಳು ಕಾಗದದಿಂದ ನುಣುಪು ಮಾಡಿದ್ದರು.

ಅವರು ಆ ಕಲ್ಲನ್ನು ಏರಿ ಆ ಕೆಲಸ ಮಾಡುತ್ತಾ ಇದ್ದರೆ ನನಗೇನು ಅನ್ನಿಸಲಿಲ್ಲ. ಆದರೆ ಪೂರ್ತಿ ಆಕಾರ ಬಂದ ಮೇಲೆ ಅವರು ಆ ವೆಂಕಟೇಶ್ವರ ಸ್ವಾಮಿಯ ಮೇಲೆ ಹತ್ತಿ ಕುಳಿತು, ಕಾಲುಗಳನ್ನು ಅದರ ಮೇಲೆ ಇಟ್ಟು ಮಾಡುತ್ತಿದ್ದಾರೆ, ಮತ್ತೆ ವೆಂಕಟೇಶ್ವರ ಸ್ವಾಮಿಗೆ ನೋವಾಗದೇ? ಎಂದು ಅನ್ನಿಸಿತು. ಹಾಗೆ ಹೊಡೆಯುತ್ತಿದ್ದಾರಲ್ಲಾ ಎಂದು ಕೇಳಿದೆನು. ಅಂದರೆ ನುಣುಪಾಗಿ ಬರಬೇಕು ರೀ, ಇಲ್ಲದಿದ್ದರೆ ಅಂದವಾಗಿರದು ಎಂದರು. ಮತ್ತೇ ತುಳಿಯುತ್ತಿದ್ದಾರೆ, ನಿಮಗೆ ದೋಷವಾಗದೇ? ಅಂದರೆ ಕಣ್ಣುಗಳನ್ನು ಇಡುವವರೆಗೆ ಆ ವಿಗ್ರಹವು ತಯಾರಾದಂತೆ ಅಲ್ಲ, ಎಲ್ಲಾ ಪೂರ್ತಿಯಾದ ನಂತರ ಕಣ್ಣುಗಳನ್ನು ಇಡುತ್ತೇವೆ ಎಂದರು.

ನಾವು ಆ ಕಣ್ಣುಗಳನ್ನು ಇಟ್ಟ ನಂತರ ಅದನ್ನು ಪವಿತ್ರವಾಗಿ ನೋಡುತ್ತೇವೆ ಎಂದರು. ಏನೋ ಹೌದೇನೋ ಅಂದುಕೊಂಡೆನು, ಅವರು ಹೇಳಿದ್ದನ್ನು ಕೇಳಬೇಕಲ್ಲವೇ?

ಒಂದು ಬಾರಿ ವಿಗ್ರಹವನ್ನು ನೋಡುತ್ತಿರುವಾಗ ಆ ಕೆಳಭಾಗಕ್ಕೆ ನನ್ನ ಕಾಲು ತಗುಲಿತು. ಎಷ್ಟು ನೋವು ಪಟ್ಟೆನೋ, ಎಷ್ಟು ಅಪಚಾರ ಮಾಡಿದೆ ನಾನು ಆತನನ್ನು ಕಾಲಿನಿಂದ ಒದೆಯುವುದೇನು? ಎಂದು ನಂತರ 15 ದಿನಗಳು ಪ್ರಾಯಶ್ಚಿತ್ತ ಮಾಡಿಕೊಂಡೆನು.

ಇವೆಲ್ಲಾ ಯಾರಿಗೂ ತಿಳಿಯವು ಅಂದುಕೊಳ್ಳಿ. ನಂತರ ಅದನ್ನು ಒಂದು ವಾಹನದಲ್ಲಿರಿಸಿಕೊಂಡು ಭೀಮಾವರಂಗೆ ತಂದರು. ಅಲ್ಲಿ ಪೂಜಾರಿಗಳು ಪ್ರತಿಷ್ಠೆ ಮಾಡಿದರು. 30, 40 ಜನ ಸೇರಿ ಅದನ್ನು ಸರಪಳಿಗಳಿಂದ ಎಬ್ಬಿಸಿ ಒಳಗೆ ತಂದು ನಿಲ್ಲಿಸುವುದರೊಳಗೆ ಬಹಳ ಕಷ್ಟವಾಯಿತು. ಆಗ ಪೂಜೆ ಮಾಡಿ ಯಾವುದೋ ಯಂತ್ರವನ್ನು ಹಾಕಿದೆವೆಂದರು. ನವಧ್ಯಾನಗಳು, ಬಂಗಾರಗಳು, ಬೆಳ್ಳಿ ನಂತರ, ಪಾದರಸವನ್ನು ಹಾಕಿದರೇನೇ ಅದಕ್ಕೆ ಶಕ್ತಿ ಹೆಚ್ಚಾಗಿ ಇರುತ್ತದೆ ಎಂದು ಹಾಗೇ ಮಾಡಿದರು, ವಿಗ್ರಹಕ್ಕೆ ಬೆಳ್ಳಿ ಕವಚಗಳನ್ನು ಮಾಡಿಸಿದೆನು.

ಪತ್ರೀಜಿಯವರು ವಿಗ್ರಹಾರಾಧನೆ ಏಕೆ ಬೇಡವೆಂದಿದ್ದಾರೆ ಎನ್ನುವುದು ನನಗೆ ಪ್ರಾತ್ಯಕ್ಷಿಕೆಯಾಗಿ ತಿಳಿದಿದೆ. ವಿಗ್ರಹವೆಂದರೆ ಒಂದು ಕಲ್ಲಿನಿಂದ ಮಾನವನೇ ತಯಾರು ಮಾಡಿದ್ದಾನೆ, ಅಂದರೆ ಮಾನವನೇ ಸೃಷ್ಟಿಸಿರುವುದು ವಿಗ್ರಹ.

ಆದರೆ ಆಲೋಚಿಸಿರಿ! **"ಮಾನವನು ಸೃಷ್ಟಿಸಿದ ವಿಗ್ರಹವು ಶ್ರೇಷ್ಠವೇ? ಮಾನವನನ್ನು ಸೃಷ್ಟಿಸಿದ ಆ ಭಗವಂತನು ಶ್ರೇಷ್ಠನೇ? ಅಂದರೆ ಯಾರಾಗಲಿ ಸರಿ, ಮಾನವನನ್ನು ಸೃಷ್ಟಿಸಿದ ಭಗವಂತನೇ ಶ್ರೇಷ್ಠ ಎಂದು ಹೇಳುತ್ತಾರೆ"** ಆ ಭಗವಂತನೇ ಎಲ್ಲರಲ್ಲಿರುವ ಆತ್ಮ. ಆತನು ಸಮಸ್ತವನ್ನು ಸೃಷ್ಟಿಸಬಲ್ಲ ಶಕ್ತಿಯುಳ್ಳವನು.

ಯಮಧರ್ಮರಾಜನು **"ಆ ಪರಮಾತ್ಮನಿಗಿಂತ ಬೇರೆಯಾದದ್ದು ಇಲ್ಲ, ಅದಕ್ಕಿಂತ ಮಹತ್ತಾದದ್ದು, ಮಹತ್ವವುಳ್ಳದ್ದು ಮತ್ತೊಂದಿಲ್ಲ"** ಎಂದು ಹೇಳಿದನು. ಆತನೇ ಸರ್ವ ಶ್ರೇಷ್ಠ, ಮಾನವನು ಆತನನ್ನೇ ಹೊಂದಬೇಕು, ಮಾನವನಿಗೆ ಅದೇ ಹೊಂದಬೇಕಾದದ್ದು ಎಂದು ಯಮಧರ್ಮರಾಜನು ಹೇಳಿದನು. ಆತನನ್ನು ಹೊಂದುವುದು ಅಂದರೆ ಸಾಕ್ಷಾತ್ಕಾರವೇ.

ಆತನಿಗೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಇವು ಯಾವುವೂ ಇಲ್ಲ. ಮಾತಿನ ಮೂಲಕ ಸಿಗನು, ಸ್ಪರ್ಶಿಸೋಣವೆಂದರೆ ಸಾಧ್ಯವಾಗದು, ಗಾಳಿಗೆ ಆತನು ಸಿಗುವುದಿಲ್ಲ, ಆತನಿಗೆ ರೂಪವಿಲ್ಲ, ರುಚಿ ನೋಡೋಣವೆಂದರೆ ರಸವಿಲ್ಲ, ವಾಸನೆ ನೋಡೋಣವೆಂದರೆ ಆ ಗಂಧವಿಲ್ಲ, ನಾಶವಿದೆಯೇ ಅಂದರೆ ಅದೂ ಇಲ್ಲ, ಆತನಿಗೆ ಆದಿ, ಅಂತ್ಯಗಳಿಲ್ಲ, ಬುದ್ಧಿಗೆ ಕೂಡಾ ನಿಲುಕುವುದಿಲ್ಲ.

**"ಅಂತಹ ಆತ್ಮನನ್ನು ತಿಳಿದುಕೊಂಡು ಮಾನವನು ಮೃತ್ಯಮುಖದಿಂದ ಮುಕ್ತನಾಗುತ್ತಿದ್ದಾನೆ"** ಎಂದು ಹೇಳಿದ್ದಾನೆ ಯಮಧರ್ಮರಾಜನು. ಆತನನ್ನು ತಿಳಿದುಕೊಂಡರೆ ಇನ್ನು ನಿನಗೆ ಮೃತ್ಯುವೆಲ್ಲಿಯದು? ಹುಟ್ಟು ಎಂಬುದೇನು? ಹುಟ್ಟೇ ಇಲ್ಲ, ಸಾವೇ ಇಲ್ಲ. ಆಗ ನಿನಗೆ ಸತ್ತು ಹುಟ್ಟುವ ಜೀವನದಿಂದ, ಹುಟ್ಟು ಸಾವಿಲ್ಲದ ಜೀವನ ನಿನಗೆ ಲಭಿಸುತ್ತದೆ.

ಯಮಧರ್ಮರಾಜನು, ಅಷ್ಟು ಶ್ರೇಷ್ಠವಾದದ್ದು ಆತನನ್ನು ಹೊಂದುವುದು, ಅಂದರೆ ಆತನನ್ನು ಸಾಕ್ಷಾತ್ಕರಿಸಿಕೊಳ್ಳುವುದು, ಅನುಭೂತಿಯನ್ನು ಹೊಂದುವುದು ಎಂದಿದ್ದಾರೆ. ಷಿರಿಡಿ ಬಾಬಾ ಹೇಳಿರುವುದು, ಯಮಧರ್ಮರಾಜನು ಹೇಳಿರುವುದು, ಪತ್ರೀಜಿಯವರು ಹೇಳಿರುವುದು, ಬುದ್ಧನು ಹೇಳಿರುವುದು, ಕೃಷ್ಣನು ಹೇಳಿರುವುದು, ಮಹನೀಯರು ಯಾವುದಾದರೆ ಹೇಳಿದ್ದಾರೋ ಆ ಪ್ರಯತ್ನವನ್ನೇ ನಾವೆಲ್ಲಾ ಮಾಡುತ್ತಿದ್ದೇವೆ.

ಮಹಾನುಭಾವರು ಸುಮ್ಮನೇ ಹೇಳುವುದಿಲ್ಲಾರೀ, ಯಾವುದಾದರೆ ನಮಗೆ ಲಾಭವೋ ಅದನ್ನೇ ಹೇಳುತ್ತಾರೆ. ಎಷ್ಟೋ ಜನರಿದ್ದಾರೆ. ಆದರೆ ಎಲ್ಲರಿಗಿಂತ ಶ್ರೇಷ್ಠನು ಆತ್ಮಸಾಕ್ಷಾತ್ಕಾರವನ್ನು ಹೊಂದುವ ಪ್ರಯತ್ನವನ್ನು ಮಾಡುವವನು. ಅಂದರೆ "ಶ್ವಾಸದ ಮೇಲೆ ಗಮನ"ವಿಟ್ಟು ಧ್ಯಾನ ಮಾಡುವವನು. ಈ ಪ್ರಯತ್ನವನ್ನು ಮಾಡದೇ ಆ ಪರಬ್ರಹ್ಮನನ್ನು ಮಾನವನಾಗಿ ಭಾವಿಸಿದರೂ, ಒಂದು ಗೊಂಬೆಯಾಗಿ ಭಾವಿಸಿದರೂ, ಇನ್ನೂ ಈ ಜ್ಞಾನೇಂದ್ರಿಯಗಳನ್ನು ಉಪಯೋಗಿಸಿದರೂ ಆತನನ್ನು ಹೊಂದಲಾರರು.

ಇದೇ ಯಮಧರ್ಮರಾಜನು ನಚಿಕೇತನಿಗೆ ಮಾಡಿದ ಬೋಧೆ.

# 17. "ಆತ್ಮಸಾಕ್ಷಾತ್ಕಾರವೆಂಬುದು ಕ್ಷೌರಿಕನ ಕತ್ತಿಯ ಮೇಲಿನ ನಡಿಗೆಯಂತಾದ್ದು"

ಯಮಧರ್ಮರಾಜನು ನಚಿಕೇತನಿಗೆ ಆ ಪರಬ್ರಹ್ಮನ ಶ್ರೇಷ್ಠತೆಯನ್ನು ಆತ್ಮದ ಶ್ರೇಷ್ಠತೆಯನ್ನು ಬೋಧಿಸಿ ಕೊನೆಗೆ ಏನು ಹೇಳಿದನೆಂದರೆ?

**ನಚಿಕೇತಾ! ಉತ್ತಿಷ್ಟತ! ಜಾಗ್ರತ! ಪ್ರಾಪ್ಯ ವರಾನ್ ನಿಭೋದತ !**

**ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ ದುರ್ಗಂಪಥಾಃ ತತ್ಕವಯೋ ವದಂತಿ ॥**

**–ಕಠೋಪನಿಷತ್ತು 1.3.14**

"ಈ ಮಾರ್ಗವು ಹರಿತವಾದ ಕ್ಷೌರಿಕನ ಕತ್ತಿಯ ಅಂಚಿನ ಮೇಲಿನ ನಡಿಗೆಯಂತಾದ್ದು". ಆದ್ದರಿಂದ ಉತ್ತಿಷ್ಟತ ಅಂದರೆ ಎಚ್ಚರವಾಗು! ಎದ್ದೇಳು! ಎಂದನು.

"ಜಾಗ್ರತ ಪ್ರಾಪ್ಯವರಾನ್ ಬೋಧತ" ಅಂದರೆ ಶ್ರೇಷ್ಠರಾದ ಗುರುಗಳ ಬಳಿಗೆ ಹೋಗಿ ಆತ್ಮತತ್ವವನ್ನು ತಿಳಿದುಕೋ ಎಂದು ಹೇಳಿದನು ಯಮಧರ್ಮರಾಜನು.

ಇನ್ನು ಆತನು ಏನು ಹೇಳಿದನೆಂದರೆ? **"ಈ ಆತ್ಮನನ್ನು ಹೊಂದುವ ಮಾರ್ಗ ಅಂದರೆ ಪರಬ್ರಹ್ಮನನ್ನು ಹೊಂದುವ ಮಾರ್ಗ, ಆತ್ಮ ಸಾಕ್ಷಾತ್ಕಾರವನ್ನು ಹೊಂದುವ ಮಾರ್ಗ, ಅಷ್ಟು ಸುಲಭವೇನಲ್ಲ, ಅದು ಎಷ್ಟೋ ಕಷ್ಟವಾದದ್ದು, ಅಂದರೆ ಎಲ್ಲಕ್ಕಿಂತಲೂ ಹರಿತವಾದ ಕ್ಷೌರಿಕನ ಕತ್ತಿ ಮೇಲಿನ ನಡಿಗೆಯಂತಾದ್ದು"** ಎಂದನು.

ನೀನು ಎಷ್ಟು ಮಾತ್ರವೂ ಅಜಾಗ್ರತೆಯಿಂದ ಇದ್ದರೂ ಕಾಲು ಕೊಯ್ದುಕೊಂಡುಬಿಡುತ್ತದೆ. ಅಷ್ಟು ಕಷ್ಟಕರವಾದದ್ದು ಈ ಮಾರ್ಗ. ಆದ್ದರಿಂದ ಎಚ್ಚರದಿಂದ ಇರಬೇಕು. ಆದ್ದರಿಂದ ಶ್ರೇಷ್ಠರಾದ ಗುರುಗಳನ್ನು ಸೇರಿ ಆತ್ಮತತ್ವವನ್ನು ತಿಳಿದುಕೊ ಎಂದು ಯಮಧರ್ಮರಾಜನು ಹೇಳಿದನು.

ನಮಗೆ ಅಂತಹ ಗುರುಗಳಾದ ಪತ್ರೀಜಿಯವರು ದೊರಕಿದ್ದಾರೆ. ಆತನು 'ಶ್ವಾಸದ ಮೇಲೆ ಗಮನ' ಸತ್ಯ ಮಾರ್ಗವನ್ನು ಕೊಟ್ಟಿದ್ದಾನೆ.

ಆತನು ಇನ್ನು ಇದರಲ್ಲಿ ದಾರಿ ತಪ್ಪದೇ ಇರುವುದಕ್ಕೆ ಕೆಲವು ನಿಯಮಗಳನ್ನು, ಆಹಾರ ನಿಯಮಗಳನ್ನು ಪಾಲಿಸಬೇಕೆಂದು ಹೇಳಿದ್ದಾನೆ.

ಅವರು ಆತ್ಮನನ್ನು ಹೊಂದುವ, ಆ ಜ್ಞಾನ ಮಾರ್ಗವನ್ನು ನಮಗೆ ಕೊಟ್ಟಿದ್ದಾರೆ.

ಎಷ್ಟೋ ಪುಸ್ತಕಗಳನ್ನು ಬರೆದಿದ್ದಾರೆ, ಅವೆಲ್ಲವನ್ನೂ ಓದಿರಿ ಎಂದಿದ್ದಾರೆ. ಅವರು ಎಷ್ಟೋ ಸಂದೇಶಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಕೇಳಿರಿ ಎಂದಿದ್ದಾರೆ. ಅವುಗಳೊಂದಿಗೆ ಆತ್ಮ ಸೇವೆಗಳನ್ನು ಮಾಡಿರೆಂದಿದ್ದಾರೆ.

ಇವೆಲ್ಲಾ ಆತ್ಮತತ್ವವನ್ನು ತಿಳಿದುಕೊಳ್ಳುವುದಕ್ಕೆ, ಆತ್ಮಕ್ಕೆ ಹತ್ತಿರವಾಗುವುದಕ್ಕೆ ಆ ಆತ್ಮಜ್ಞಾನವನ್ನು ಹೊಂದುವುದಕ್ಕೆ, ಆತ್ಮಸಾಕ್ಷಾತ್ಕಾರವನ್ನು ಹೊಂದುವುದಕ್ಕೆ ಎಷ್ಟೋ ಉಪಯೋಗವಾಗುತ್ತವೆ ಎಂದಿದ್ದಾರೆ.

ಅದಕ್ಕೆ ಶ್ರೇಷ್ಠರಾದ ಗುರುಗಳನ್ನು ಹಿಡಿದುಕೊ ಎಂದಿದ್ದಾನೆ ಯಮಧರ್ಮರಾಜನು. ಆದ್ದರಿಂದ ಯಾರೆಂದರೆ ಅವರನ್ನು ಆಶ್ರಯಿಸಿದರೆ ಸತ್ಯ ಮಾರ್ಗವನ್ನು ಬೋಧಿಸುವುದಿಲ್ಲ, ಮೇಲಾಗಿ ಅಸತ್ಯಮಾರ್ಗವನ್ನು ಬೋಧಿಸುತ್ತಾರೆ. 'ಶ್ವಾಸದ ಮೇಲೆ ಗಮನ' ಹೇಳುವುದಿಲ್ಲ, ಗೈಡಿಂಗ್ ಹೇಳುತ್ತಾ ಇರುತ್ತಾರೆ.

ಆದರೆ ಕೆಲವರಿಗೆ ಎಷ್ಟು ಮಾಡಿದರೂ ನಾನು ಆ ಆತ್ಮಸಾಕ್ಷಾತ್ಕಾರವನ್ನು ಹೊಂದಲಾರದೇ ಹೋಗುತ್ತಿದ್ದೇನೆ ಎನ್ನುತ್ತಾರೆ. ಆದರೆ ಒಂದು ವೇಳೆ ಸಾಧಿಸಲಾರದೇ ಹೋದರೂ ಶ್ರೀಕೃಷ್ಣ ಭಗವಾನನು ಏನು ಹೇಳಿದ್ದಾನೆಂದರೆ,

**"ಮರಣಿಸಿದ ನಂತರ ಪುಣ್ಯ ಲೋಕಗಳನ್ನು ಸೇರಿಕೊಂಡು, ಆ ಭೋಗವನ್ನು ಅನುಭವಿಸಿ, ಮರು ಜನ್ಮದಲ್ಲಿ ಶ್ರೀಮಂತರ ಮನೆಯಲ್ಲಾಗಲಿ, ಶ್ರೇಷ್ಠ ಯೋಗಿಗಳ ಮನೆಯಲ್ಲಾಗಲಿ ಜನ್ಮಿಸಿ, ಆ ನಂತರ ಸಾಧನೆ ಪೂರ್ಣಗೊಳಿಸಿಕೊಂಡು ಮೋಕ್ಷವನ್ನು ಹೊಂದುತ್ತಾರೆ, ಆತ್ಮ ಸಾಕ್ಷಾತ್ಕಾರವನ್ನು ಹೊಂದುತ್ತಾರೆ" ಎಂದು ಹೇಳಿದ್ದಾನೆ.**

ಅಂದರೆ ಈಗ ನೀವು ಮಾಡಿದ್ದು ಏನೂ ವ್ಯರ್ಥವಾಗದು, ಎಷ್ಟೋ ಸಮಸ್ಯೆಗಳಿರಬಹುದು, ಆರ್ಥಿಕ ಸಮಸ್ಯೆಗಳಿರಬಹುದು, ಕುಟುಂಬದಲ್ಲಿ ಸಮಸ್ಯೆಗಳಿರಬಹುದು, ಆದರೆ ಅದು ಈ ಜನ್ಮಕ್ಕೇ. ಆದರೆ ಮರುಜನ್ಮದಲ್ಲಿ ಅನುಕೂಲವಾದ ಹೆಂಡತಿ, ಅನುಕೂಲವಾದ ಗಂಡ, ಅನುಕೂಲವಾದ ವಾತಾವರಣ, ಅಂತಹ ಕುಟುಂಬವು ನಿಮಗೆ ಲಭಿಸುತ್ತದೆ.

ಆದ್ದರಿಂದ ನಿರುತ್ಸಾಹ ಪಡಬೇಕಾಗಿಲ್ಲ. ಒಂದು ವೇಳೆ ನೀವು ಮಾಡುವ ಸಾಧನೆ ತೀವ್ರವಾಗಿದ್ದು, ಆಹಾರ ನಿಯಮಗಳನ್ನು ಪಾಲಿಸುತ್ತಾ, ಪತ್ರೀಜಿಯವರು ಹೇಳಿದವುಗಳನ್ನೆಲ್ಲಾ ಆಚರಿಸುತ್ತಾ ಇದ್ದರೆ ಈ ಜನ್ಮದಲ್ಲಿಯೇ ಹೊಂದಬಹುದೂ ಕೂಡಾ.

ಆದರೆ ಯಾವುದೋ ಅವರೋಧಗಳಿಂದ ಮಧ್ಯ ಮಧ್ಯದಲ್ಲಿ ಸ್ವಲ್ಪ ತಡೆ ಬಂದರು ಅದು ಸಹಜ. ಅದಕ್ಕೆ ಯಮಧರ್ಮರಾಜನು ಏನನ್ನು ಹೇಳಿದ್ದಾನೆಂದರೆ, ಶ್ರೇಷ್ಠರಾದ ಗುರುಗಳನ್ನು ಆಶ್ರಯಿಸಿ, ಆ ಆತ್ಮ ತತ್ವವನ್ನು ತಿಳಿದುಕೊ, ಯಾರಾದರೆ ಆತ್ಮತತ್ವವನ್ನು, ಆತ್ಮಜ್ಞಾನವನ್ನು ಬೋಧಿಸುತ್ತಾರೋ ಅವರನ್ನು ಹಿಡಿದುಕೊ, ನಿನಗೆ ಅವರು ಸರಿಯಾದ

ಮಾರ್ಗವನ್ನು ಬೋಧಿಸುತ್ತಾರೆ, ಸರಿಯಾದ ದಾರಿಯಲ್ಲಿ ನಡೆಸುತ್ತಾರೆ ಎಂದು ಹೇಳಿದ್ದಾರೆ.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ಏನು ಹೇಳಿದ್ದಾನೆಂದರೆ,

**ಶ್ಲೋಕ ॥ ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಸ್ಸಂಗವರ್ಜಿತಃ ।**

**ನಿರ್ವೈರ ಸ್ಸರ್ವಭೂತೇಷು ಯಸ್ಸ ಮಾ ಮೇತಿ ಪಾಂಡವಃ ॥**

**(ಭ.ಗೀ 11–55)**

**ತಾತ್ಪರ್ಯ :** ಯಾರಾದರೆ ಎಲ್ಲ ಕರ್ಮಗಳನ್ನು, ನನಗಾಗಿಯೇ ಮಾಡುತ್ತಾರೋ, ನನ್ನನ್ನೇ ಅವಲಂಬಿಸುತ್ತಾರೋ, ಮತ್ತೆ ನನ್ನ ಬಗ್ಗೆ ಭಕ್ತಿಯಿಂದ ಇರುತ್ತಾರೋ ವಿರೋಧಾಭಾವವಿಲ್ಲದೆ ಇರುತ್ತಾರೊ, ಅಂತಹ ಭಕ್ತರು ತಪ್ಪದೇ ನನ್ನನ್ನೇ ಸೇರಿಕೊಳ್ಳುತ್ತಾರೆ ಎಂದು ಕೃಷ್ಣನು ಅರ್ಜುನನಿಗೆ ಹೇಳಿದ್ದಾನೆ.

ಯಾವನು ನನಗಾಗಿ ಕರ್ಮಗಳನ್ನು ಮಾಡುತ್ತಾರೊ, ನನಗಾಗಿ ಅಂದರೆ ಇಲ್ಲಿ ಆತ್ಮ ಎಂದು ತಿಳಿದುಕೊಳ್ಳಬೇಕು. ಏಕೆಂದರೆ? ಕೃಷ್ಣನುಅಂದರೆ ವಿಗ್ರಹವಲ್ಲ, ಆತ್ಮ. ಆದ್ದರಿಂದ ಆತ್ಮಕ್ಕಾಗಿಯೇ ಕರ್ಮಗಳನ್ನು ಮಾಡಬೇಕು. ಆತ್ಮಸಂಬಂಧವಾದ ಕಾರ್ಯಗಳನ್ನೇ ಮಾಡಬೇಕು.

ಅಷ್ಟೇ ಅಲ್ಲ, ನನ್ನನ್ನೇ ಅಂದರೆ ಆತ್ಮನನ್ನು ಹೊಂದಬಲ್ಲದ್ದೆಂದು ನಂಬುತ್ತಾರೋ ನನ್ನಲ್ಲಿಯೇ ಅಂದರೆ ಆತ್ಮನಲ್ಲಿಯೇ ಭಕ್ತಿಯನ್ನು ಹೊಂದಿರುತ್ತಾರೋ ಸಮಸ್ತ ದೃಶ್ಯ ಪದಾರ್ಥಗಳ ಬಗ್ಗೆ ಆಸಕ್ತಿಯನ್ನು ಬಿಟ್ಟುಬಿಡುತ್ತಾರೋ! ಸಮಸ್ತ ಪ್ರಾಣಿಗಳ ಬಗ್ಗೆ ದ್ವೇಷವಿಲ್ಲದೆ ಇರುತ್ತಾರೋ! ಅಂತಹವರು ನನ್ನನ್ನು ಹೊಂದುತ್ತಾರೆ ಎಂದು ಶ್ರೀಕೃಷ್ಣ ಭಗವಾನನು ಹೇಳಿದ್ದಾನೆ.

ಈ ಶ್ಲೋಕದಲ್ಲಿ ಶ್ರೀಕೃಷ್ಣನು ಆತ್ಮಸೇವೆಗಳನ್ನು ಮಾಡು ಎಂದಿದ್ದಾರೆ.

ನಾನು ದೇಹ ಸೇವೆಗಳಾದ ಹೋಮಿಯೋಪತಿ ಆಸ್ಪತ್ರೆಯನ್ನು ಮುಚ್ಚಿಬಿಟ್ಟೆನು, ನಂತರ ಮೇಡಂರವರ ಉಚಿತವಾಗಿ ನಡೆಸುತ್ತಿದ್ದ ಮಹಿಳೆಯರ ಟ್ರೈನಿಂಗ್ ಕೇಂದ್ರವನ್ನು ಮುಚ್ಚಿಬಿಟ್ಟೆನು, ಇನ್ನು ಏನೇನೋ ಸೇವಾ ಕಾರ್ಯಕ್ರಮಗಳನ್ನು ಮಾಡುತ್ತಿದ್ದೆವು. ಎಲ್ಲಾ ಮುಚ್ಚಿ ಭೀಮವರಂನಲ್ಲಿ ಮುರು ದಿನಗಳ ಆತ್ಮಜ್ಞಾನ ಶಿಕ್ಷಣ ಶಿಬಿರ ಪ್ರಾರಂಭ ಮಾಡಲಾಯಿತು. ಹಾಗೆಯೇ ಈ ಜ್ಞಾನವನ್ನು ಊರೂರು ತಿರುಗಿ ಹಂಚುವುದು, ಇಂತಹ ಕಾರ್ಯಕ್ರಮಗಳಿಗೆ ನಮ್ಮ ಪಾಲಿನ ಆರ್ಥಿಕ ಸಹಾಯವನ್ನು ಮಾಡುವಂತಹವುಗಳನ್ನು ಮಾಡುತ್ತಿದ್ದೇವೆ.

ಯಾವನು ನನಗಾಗಿ ಕರ್ಮಗಳನ್ನು ಮಾಡುತ್ತಾನೋ ಅಂದರೆ ಆತ್ಮ ಸಂಬಂಧವಾದ ಸೇವೆಗಳನ್ನೇ ಮಾಡಬೇಕು. ನನ್ನನ್ನೇ ಅಂದರೆ ಆತ್ಮನನ್ನು ಹೊಂದುವಂತಾದ್ದೆಂದು ನಂಬುವನೋ! ಅಂದರೆ ಧನವನ್ನು ಹೊಂದುವುದಲ್ಲ, ಬಂಧುಗಳನ್ನು ಹೊಂದುವುದಲ್ಲ, ಮಕ್ಕಳನ್ನು ಹೊಂದುವುದಲ್ಲ, ಆತ್ಮನನ್ನು ಹೊಂದಬೇಕು. ಬಹಳಷ್ಟು ಜನರು ಮಕ್ಕಳು ಹುಟ್ಟಿದರೆ ಸಾಕು ನನ್ನ ಜನ್ಮ ಧನ್ಯವಾಯಿತು ಎಂದುಕೊಳ್ಳುತ್ತಾರೆ. ಅದಲ್ಲ ಬೇಕಾಗಿರುವುದು, ಆತ್ಮವೊಂದರ ಶ್ರೇಷ್ಠತೆಯನ್ನು ತಿಳಿದುಕೊಳ್ಳಬೇಕು, ಇನ್ನು ಯಾವುದಕ್ಕೂ ಆದ್ಯತೆಯನ್ನು ಕೊಡಬಾರದು.

ಆದರೆ ಮಾನವರು ಏನೇನೋ ಹೊಂದಬೇಕೆಂದುಕೊಳ್ಳುತ್ತಾರೆ. ಆದರೆ ಆತ್ಮನನ್ನು ಹೊಂದಬೇಕು ಎಂದು ಯಾರೂ ಅಂದುಕೊಳ್ಳುವುದಿಲ್ಲ. ನನ್ನಲ್ಲಿಯೇ ಭಕ್ತಿಯಿಟ್ಟುಕೊಂಡಿರುವಂತವನು ಅಂದರೆ ಯಾವುದನ್ನೂ ಇಷ್ಟಪಡನು, ಆತ್ಮನನ್ನೇ ಇಷ್ಟಪಡುತ್ತಾನೆ ಎಂದಿದ್ದಾನೆ.

ಅವನ ಭಕ್ತಿ ಎಲ್ಲಾ ಆತ್ಮದ ಮೇಲೆಯೇ! ಸಾಮಾನ್ಯರಿಗೆ ವಿಗ್ರಹದ ಮೇಲೆ ಭಕ್ತಿ ಇರುತ್ತದೆ. ಆದರೆ ಧ್ಯಾನದಲ್ಲಿ ಬಂದವರಿಗೆ ಆತ್ಮದ ಮೇಲೆ ಭಕ್ತಿ ಇರುತ್ತದೆ. ಅವರು ಸಮಸ್ತ ದೃಶ್ಯ ಪದಾರ್ಥಗಳ ಬಗ್ಗೆ ಆಸಕ್ತಿಯನ್ನು ಬಿಟ್ಟುಬಿಡುತ್ತಾರೆ. ಇದನ್ನೇ "ವಿಷಯ ವಿರಕ್ತಿ" ಎನ್ನುತ್ತಾರೆ.

ಅಷ್ಟೇ ಅಲ್ಲ, ಸಮಸ್ತ ಪ್ರಾಣಿಗಳ ಬಗ್ಗೆ ದ್ವೇಷವಿಲ್ಲದೆ ಇರಬೇಕು. ಅಂದರೆ ಪ್ರತಿ ಜೀವಿಯನ್ನೂ ಪ್ರೇಮಿಸಬೇಕು, ಯಾವುದನ್ನು ದ್ವೇಷಿಸಬಾರದು, ಯಾವುದನ್ನೂ ಸಾಯಿಸಬಾರದು, ಯಾವುದನ್ನು ಹಿಂಸಿಸಬಾರದು, ಯಾವುದಕ್ಕೂ ನೋವು ಕೊಡಬಾರದು, ಅದನ್ನೇ ಪತ್ರೀಜಿಯವರು ಹೇಳಿದ್ದಾರೆ.

ಅಂತಹವನು ನನ್ನನ್ನು ಅಂದರೆ ಆತ್ಮನನ್ನು ಹೊಂದುತ್ತಿದ್ದಾನೆ. ಅಂದರೆ ಆತ್ಮ ಸಾಕ್ಷಾತ್ಕಾರವನ್ನು ಹೊಂದುತ್ತಿದ್ದಾನೆ. ಅಂದರೆ ಆತ್ಮಾನುಭವವನ್ನು ಹೊಂದುತ್ತಿದ್ದಾನೆಂದು ಶ್ರೀ ಕೃಷ್ಣ ಭಗವಾನನು ಹೇಳಿದ್ದಾರೆ.

ನಚಿಕೇತನು ಈ ವಿಧವಾಗಿ ಯಮಧರ್ಮರಾಜನಿಂದ ಆತ್ಮತತ್ವ ಬೋಧೆಯನ್ನು ಗ್ರಹಿಸಿದವನಾಗಿ ಬ್ರಹ್ಮ ಸ್ವರೂಪವನ್ನು ಹೊಂದಿ ಯಮಲೋಕದಿಂದ ಹಿಂತಿರುಗಿ ಪ್ರಯಾಣ ಮಾಡಿ ತನ್ನ ತಂದೆಯನ್ನು ಸೇರಿಕೊಂಡನು.

ಇದು ಕಠೋಪನಿಷತ್ತಿನಲ್ಲಿ ನಚಿಕೇತನ ವೃತ್ತಾಂತ.


*** ***



- "ಲೋಕದಲ್ಲಿ ಶ್ರೇಯಸ್ಸು, ಪ್ರೇಯಸ್ಸು ಎಂಬ ಎರಡು ಮಾರ್ಗಗಳಿವೆ, ಪ್ರೇಯಸ್ಸು ಎಂಬುದ ಪ್ರಪಂಚಕ್ಕೆ ಸಂಬಂಧಿಸಿದ್ದು, ಶ್ರೇಯಸ್ಸು ಎಂಬುದು ಆ ಸೃಷ್ಟಿಕರ್ತನಾದ ಪರಬ್ರಹ್ಮನಿಗೆ ಸಂಬಂಧಿಸಿದ್ದು ಎಂದು ಹೇಳುತ್ತಾ ಪ್ರೇಯಸ್ಸು ಅಂದರೆ ಸೃಷ್ಟಿಸಲ್ಪಟ್ಟಿರುವುದಕ್ಕೆ ಸಂಬಂಧಿಸಿದ್ದು, ಶ್ರೇಯಸ್ಸು ಅಂದರೆ ಸೃಷ್ಟಿ ಮಾಡಿದವನಿಗೆ ಸಂಬಂಧಿಸಿದ್ದು ಎಂದು ಹೇಳಿದನು."
- "ಆ "ಬ್ರಹ್ಮ"ವು ವೈಚಾರಿಕತೆಗೆ (ತರ್ಕಕ್ಕೆ) ನಿಲುಕದು, ಎಂತಹ ಕವಿಗಳು ಹೇಳಿದರೂ, ಏನು ಹೇಳಿದರೂ ಅಷ್ಟು ಸುಲಭವೇನಲ್ಲ. ಆತ್ಮವು ನಿಗೂಢ ಅಂದರೆ ಬಹಳ ರಹಸ್ಯಮಯವಾದದ್ದು ಬಹಳ ಜನ ಆತ್ಮ ತತ್ವವನ್ನು ಕುರಿತು ಕೇಳಲು ಇಷ್ಟಪಡರು, ಅಂದರೆ ಅವರಿಗೆ ಆ ಭಗವಂತನ ಕುರಿತು ತಿಳಿದುಕೊಳ್ಳುವ ಅರ್ಹತೆ ಇಲ್ಲವೆಂದು ಹೇಳಿದನು".
- "ಓ, "ನಚಿಕೇತಾ" ನನ್ನಂತಹವನಿಂದ ಉಪದೇಶಿಸಲ್ಪಟ್ಟ ಈ ಆತ್ಮ ತತ್ವದಲ್ಲಿ ಸಂಶಯ ಬೇಡ ಎಂದು ಹೇಳಿದನು, ಯಾವಾಗಲೂ ಧ್ಯಾನ ಮಾಡುವಂತಹ ಧೀರನು, ಶಬ್ದ, ಸ್ಪರ್ಶಾದಿ ವಿಷಯ ಗಳಿಂದ, ಇಂದ್ರಿಯಗಳನ್ನು ಮರಳಿಸಿ, ಆ ಪರಮಾತ್ಮನನ್ನು ತಿಳಿದುಕೊಳ್ಳಬೇಕೆಂಬ ಹಂಬಲವುಳ್ಳವನು ಆ ವಿಷಯಗಳ ಬಗ್ಗೆ ವಿರಕ್ತಿ ಹೊಂದಿರುವವರಿಗೆ ಮಾತ್ರವೇ ಸಾಧ್ಯವಾಗುತ್ತದೆ. ಅಂತಹವರಿಗೆ ಅವುಗಳ ಮೇಲೆ ಮಮಕಾರ ಇರುವುದಿಲ್ಲ. ಎಷ್ಟು ಹೊತ್ತೂ ತನ್ನ ಮನಸ್ಸನನ್ನು ಆತ್ಮದ ಕಡೆಗೇ ಇಡುತ್ತಾನೆ".
- "ನಾನು ಹೇಳುವ ಆತ್ಮ ತತ್ವವನ್ನು ಕೇಳಿದಂತಹವನ್ನು ಆಚರಿಸಿದರೆ ಸೂಕ್ಷ್ಮಾತಿ ಸೂಕ್ಷ್ಮವಾದ ಆತ್ಮವನ್ನು ಹೊಂದಿ ಆನಂದಿಸುತ್ತಾನೆ".

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್

ರೂ 70/-




ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ
ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ
https: //www.youtube.com/pmckannada • www.meditationeverywhere.org
• www.pssmovement.org

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀರಾಮಧಾಮ ಧ್ಯಾನಕೇಂದ್ರ,
ನಾರಾಯಣಪ್ಪ ಗಾರ್ಡನ್, ವೈಟ್ ಫೀಲ್ಡ್, ಬೆಂಗಳೂರು - ೫೬೦ ೦೬೬
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ / 9449695503
ವಿಜಯಲಕ್ಷ್ಮಿ ಎಸ್.ಎನ್ / 8050082689